(ಆ) ಕರ್ನಾಟಕ ಕೃಷಿ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ 2001.

\+ ಶ್ರೀ ಆರ್.ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, "2001ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ವಿಧೇಯಕದ ಬಗ್ಗೆ ಮಂತ್ರಿಗಳು ಏನಾದರೂ ಹೇಳುವುದು ಇದ್ದರೆ ಹೇಳಿ.

ಶ್ರೀ ಆರ್.ಬಿ. ತಿಮ್ಮಾಪುರ್ : ಮಾನ್ಯ ಅಧ್ಯಕ್ಷರೆ, ಪ್ರಥಮ ಬಾರಿಗೆ ಮಾರ್ಕೆಟ್‌ಗಳನ್ನು ಬೈಫರ್‌ಕೇಟ್ ಮಾಡಿ ವಿಸ್ತರಣೆ ಮಾಡಿದಾಗ ಮೂರು ವರ್ಷ ನಾಮನಿರ್ದೇಶನ ಮಾಡತಕ್ಕ ಅವಕಾಶವಿತ್ತು. ಕಳೆದ ಸಲ ಮೂರು ವರ್ಷಗಳಲ್ಲೂ ಚುನಾವಣೆ ಮಾಡಲಾರದೆ ತೊಂದರೆಯಾಗಿ ಅಡ್ಮಿನಿಸ್ಟ್ರೇಟರ್ ನೇಮಕ ಮಾಡತಕ್ಕದ್ದನ್ನು ಕಂಡಿದ್ದೇವೆ. ಕಳೆದ ಹತ್ತು ವರ್ಷಗಳಿಂದ ನೋಡಿದರೆ, ಅಡ್ಮಿನಿಸ್ಟ್ರೇಟರ್ ನೇಮಕ ಮಾಡತಕ್ಕ ಅವಕಾಶವಿರುವುದರಿಂದ ಒಂದು ವರ್ಷಕ್ಕಿಂತ ಹೆಚ್ಚಾಗಿ ಸರ್ಕಾರ ಚುನಾವಣೆ ಮಾಡದೆ ತೊಂದರೆಗೆ ಒಳಪಟ್ಟಾಗ ಅಡ್ಮಿನಿಸ್ಟ್ರೇಟರ್ ನೇಮಕ ಮಾಡದೆ ನಾಮನಿರ್ದೇಶನ ಸಮಿತಿ ಇರಬೇಕೆಂದು ಈಗ ಅವಕಾಶ ಕಲ್ಪಿಸಿಕೊಡಲಾಗಿದೆ. ಸೆಕ್ಷನ್ 44ರ ಕಾಯಿದೆಯಡಿಯಲ್ಲಿ ಒಮ್ಮೆ ಅವಿಶ್ವಾಸ ಗೊತ್ತುವಳಿಯನ್ನು ಮಂಡನೆ ಮಾಡಿದರೆ ಬಹುಮತ ಇರಲಿ ಬಿಡಲಿ ಒಂದು ವರ್ಷ ಪುನಃ ಅವಿಶ್ವಾಸ ಗೊತ್ತುವಳಿಯನ್ನು ಮಂಡನೆ ಮಾಡಲಿಕ್ಕೆ ಅವಕಾಶವಿರಲಿಲ್ಲ. ಈಗ ಆರು ತಿಂಗಳಿಗೊಮ್ಮೆ ಅವಿಶ್ವಾಸ ಗೊತ್ತುಗೊಳಿ ಮಂಡಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಅವರ ಮೇಲೆ ಅವಿಶ್ವಾಸ ಗೊತ್ತುವಳಿ ಮಂಡನೆ ಮಾಡಲಿಕ್ಕೆ ಇಲ್ಲಿ ಸರಳ ಬಹುಮತದ ಬಗ್ಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ವಿಧಾನಸಭೆ ಮತ್ತು ಲೋಕಸಭೆಗಳಲ್ಲಿ ಸರಳ ಬಹುಮತ ಇರುವಾಗ, ಎಪಿಎಂಸಿ ಗಳಲ್ಲಿ ಮಾತ್ರ ಮೂರನೆಯ ಎರಡು ಭಾಗ ಬಹುಮತ ಇರಬೇಕೆಂದು ಇದೆ. ಕೆಲವು ಕಡೆ ಬಹುಮತ ಇಲ್ಲದಿದ್ದರೂ ಸಮಿತಿಗಳು ನಡೆಯುತ್ತಿವೆ. ಅದು ತುಂಬಾ ಕಷ್ಟವಾಗಿ ಅಲ್ಲಿ ಅಭಿವೃದ್ಧಿ ಕೆಲಸಗಳಿಗೆ ತೊಂದರೆಯಾಗಿರತಕ್ಕದ್ದನ್ನು ಕಂಡಿದ್ದೇವೆ. ಅದಕ್ಕೋಸ್ಕರ ಸಿಂಪಲ್ ಮೆಜಾರಿಟಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಆವರ್ತನಿಧಿಗೆ ರೈತರ ಸಂಜೀವಿನಿ ಯೋಜನೆಗೆ ಸಮಿತಿಯಿಂದ ವಂತಿಗೆ ಪಡೆಯಲು ಅವಕಾಶ ಕಲ್ಪಿಸಿಕೊಡಲಾಗಿದೆ. ಮಾನ್ಯ ಸದಸ್ಯರು ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

\+ ಶ್ರೀ ಡಿ.ವಿ. ಸದಾನಂದಗೌಡ (ವಿರೋಧಪಕ್ಷದ ಉಪ ನಾಯಕರು) : ಮಾನ್ಯ ಅಧ್ಯಕ್ಷರೆ, ಈವೊಂದು ಮಸೂದೆಗೆ ಏಕೆ ತಿದ್ದುಪಡಿ ತಂದಿದ್ದಾರೆಂದು ಅದರ ಉದ್ದೇಶಗಳನ್ನು ನೋಡಿದಾಗ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಅಧಿಕಾರಕ್ಕೆಯಲ್ಲಿ ತೆಗೆದುಕೊಳ್ಳುವುದಕ್ಕೆ ಏನೆಲ್ಲಾ ಕೆಲಸಗಳನ್ನು ಮಾಡಬಹುದು ಆ ಕೆಲಸಗಳನ್ನು ಮಾಡಿರುವುದಕ್ಕೆ ಇದೊಂದು ಉದಾಹರಣೆ.

ಹಿಂದೆ ಇದ್ದಂತಹ ಎರಡು ಮೂರು ತಿದ್ದುಪಡಿಗಳನ್ನು ನೋಡಿದಾಗ, ಹಿಂದೆ ಕ್ಲಿಯರ್ ಆಗಿ ಇತ್ತು. ಹೊಸ ಎಪಿಎಂಸಿಗಳು ಫಾರಂ ಆದ ಮೇಲೆ ಚುನಾವಣೆ ನಡೆಸುವುದಕ್ಕೆ ಎರಡು ವರ್ಷ ಅವಧಿಯೆಂದು ಇತ್ತು, ಒಂದು ವೇಳೆ ಚುನಾವಣೆ ಮಾಡುವುದಾದರೆ ಒಂದು ವರ್ಷದಲ್ಲಿ ಮಾಡಬಹುದೆಂದು ಇತ್ತು. ಅದನ್ನು ಇವರು ಒಂದು ವರ್ಷ ಮುಂದುವರಿಸಿಕೊಂಡು ಹೋಗಬಹುದೆನ್ನುವ ಇರಾದೆ ಇದೆ. ಏನು ಅಗತ್ಯವಿದೆ? ಮೂರು ವರ್ಷಗಳಾದರೂ ಚುನಾವಣೆಯನ್ನು ಎಪಿಎಂಸಿಗಳಿಗೆ ನಡೆಸುವುದಕ್ಕೆ ನಿಮಗೆ ಆಗುವುದಿಲ್ಲ. ಒಂದು ವರ್ಷಕ್ಕೆ ಎಂದು ಮುಂದುವರಿಸುವಂತಹ ಅವಶ್ಯಕತೆ ಏನು? ಈ ತಿದ್ದುಪಡಿ ಮಸೂದೆಯಲ್ಲಿ ಏನು ಹೇಳಿದ್ದೀರಿ? ಉದ್ದೇಶ ಮತ್ತು ಕಾರಣಗಳನ್ನು ಚೆನ್ನಾಗಿ ಹೇಳಿದ್ದೀರಿ. ಸಕಾಲದಲ್ಲಿ ಚುನಾವಣೆಗಳನ್ನು ನಡೆಸದೆ ಇರುವುದಕ್ಕೆ ಮಾರುಕಟ್ಟೆ ಸಮಿತಿಗಳು ಕಾರ್ಯ ನಿರ್ವಹಿಸುವುದಕ್ಕೆ ಸಾಧ್ಯವಾಗುವಂತೆ, ಮಾರ್ಕೆಟ್ ಫಾರಂ ಆಗಿ ಎರಡು ವರ್ಷಗಳಾದರೂ ಚುನಾವಣೆ ಮಾಡಲಿಕ್ಕೆ ಆಗಲಿಲ್ಲವೆಂದರೆ ಪುನಃ ಒಂದು ವರ್ಷ ಮುಂದುವರಿಸುವುದು ಏಕೆ ಬೇಕು? ಎಲ್ಲೆಲ್ಲಿ ನಿಮ್ಮ ಹಿಡಿತವುಂಟು ಅಲ್ಲೆಲ್ಲಾ ಚುನಾವಣೆಗಳನ್ನು ಮಾಡುತ್ತೀರಿ. ಯಾವ ಭಾಗದಲ್ಲಿ ಹೊಸ ಎಪಿಎಂಸಿ ಗಳಾಗುತ್ತವೆ, ಅಲ್ಲಿ ನಿಮ್ಮದೇನೂ ನಡೆಯುವುದಿಲ್ಲ. ಅಲ್ಲಿ ಎಷ್ಟು ವರ್ಷ ಅಧಿಕಾರಿಗಳು ಅಧಿಕಾರ ಚಲಾವಣೆ ಮಾಡುವುದಕ್ಕೆ ಆಗುತ್ತದೆ? ಅಧಿಕಾರ ಬದಲಾವಣೆ ಮಾಡಬೇಕೆಂದು ಹೇಳುವಂತಹ ಒಂದು ದುರುದ್ದೇಶವನ್ನಿಟ್ಟುಕೊಂಡು ಮಸೂದೆಯನ್ನು ಮಂಡನೆ ಮಾಡಿದ್ದೀರಿ, ಇದರ ಅವಶ್ಯಕತೆ ಇದೆಯೆ? ಮೂರು ವರ್ಷದಲ್ಲಿ ಒಂದು ಹೊಸ ವ್ಯವಸ್ಥೆಯಲ್ಲಿ ಚುನಾವಣೆ ಮಾಡುವುದಕ್ಕಾಗುವುದಿಲ್ಲವೆಂದರೆ ಅದಕ್ಕೊಂದು ಅರ್ಥವುಂಟು. ನಿಜವಾಗಿಯೂ ರಾಜಕೀಯ ದುರುದ್ದೇಶದಿಂದ ಇಂತಹ ತಿದ್ದುಪಡಿಗಳನ್ನು ಖಂಡಿತವಾಗಿಯೂ ಮಾಡಬಾರದು. ಪಾರದರ್ಶಕ ಮತ್ತೊಂದು ತಾವೇನು ಹೇಳುತ್ತೀರಿ, ಎಷ್ಟೋ ಕೆಲಸಗಳನ್ನು ನಿಗದಿತ ಟೈಮ್‌ನಲ್ಲಿ ಮಾಡುತ್ತೇವೆಂದು ಹೇಳುತ್ತೀರಿ. ಇಂತಹವರು ನೀವು ಮೂರು ವರ್ಷ, ಎರಡು ವರ್ಷ ಇರುವುದನ್ನು ಒಂದು ವರ್ಷ ಸಹ ಉಂಟು. ಈಗ ತಾವು ತಿದ್ದುಪಡಿ ತರುವುದು ಸರಿಯಲ್ಲ. ತಾವು ತಿದ್ದುಪಡಿ ತರುವುದಕ್ಕೆ ಬದಲಾಗಿ ಇದನ್ನು ವಿತ್‌ಡ್ರಾ ಮಾಡುವುದು ಬಹಳ ಅವಶ್ಯಕತೆಯಿದೆ. ಇದರ ಅರ್ಥ ಸರ್ಕಾರದಲ್ಲಿ ಚುನಾವಣೆ ನಡೆಸಬೇಕೆಂದು ಅಲ್ಲ, ಆ ಉದ್ದೇಶವೂ ಅಲ್ಲ. ಅಧಿಕಾರವನ್ನು ತಮ್ಮ ಕೈಯಲ್ಲಿಟ್ಟು ಕೊಳ್ಳುವುದಕ್ಕೆ ಈ ಕೆಲಸ ಮಾಡಿದ್ದೀರಿ. ಮತ್ತೊಂದು ಬಹಳ ಮುಖ್ಯವಾದುದು. ಸೆಕ್ಷನ್ 44ಕ್ಕೆ ಈವೊಂದು ತಿದ್ದುಪಡಿಯನ್ನು ತಂದಿದ್ದೀರಿ. ಮೂರನೆಯ ಎರಡು ಭಾಗ ಬಹುಮತ ಇದ್ದುದನ್ನು ತೆಗೆದು ಒಟ್ಟಾರೆ ಸಂಖ್ಯೆಯ ಅರ್ಧಕ್ಕಿಂತ ಜಾಸ್ತಿಯಿದ್ದರೆ ಸಾಕು ಎಂದು ತಿದ್ದುಪಡಿ ಮಾಡಲಾಗಿದೆ. ಅದಕ್ಕೆ ಏನು ಉದಾಹರಣೆ ಕೊಟ್ಟಿದ್ದಾರೆಂದರೆ, ತಾಲ್ಲೂಕು ಪಂಚಾಯಿತಿ, ಜಿಲ್ಲಾಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮೀಸಲಾತಿಯ ಹಿನ್ನೆಲೆಯಲ್ಲಿ ಸರಳ ಬಹುಮತ ಇದ್ದರೆ ಸಾಕೆಂದು ಮಾಡಲಾಗಿದೆ. ಸಹಕಾರ ಸಂಘಗಳಲ್ಲಿ ಯಾವ ರೀತಿ ಇದೆ, ಮಾರುಕಟ್ಟೆ ಮತ್ತು ಸಹಕಾರಿ ಸಂಘಗಳಲ್ಲಿ ಒಂದು ವ್ಯವಸ್ಥೆಯಿದೆ. ಅದಕ್ಕೆ ಈವೊಂದು ವಿಶೇಷವಾದ ವ್ಯವಸ್ಥೆಗಳು ಏಕೆ? ಬಹುಶಃ ಹೆಚ್ಚಿನ ಮಾರುಕಟ್ಟೆಗಳು ನಿಮ್ಮ ಕೈಯಲ್ಲಿ ಇಲ್ಲ. ಅವುಗಳಿಗೆ ಚುನಾವಣೆ ನಡೆಸಬೇಕಾದರೆ ಎರಡು ಮೂರು ವರ್ಷಗಳು ಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ಶಾಸನಸಭೆಯಲ್ಲಿ ಆಕಸ್ಮಾತ್ 113 ಜನ ಶಾಸಕರ ಬೆಂಬಲ ಸಿಕ್ಕಿದರೆ ಏನು ಮಾಡುತ್ತೀರಿ?

ಶ್ರೀ ಡಿ.ವಿ. ಸದಾನಂದಗೌಡ : ಸಹಕಾರ ತತ್ವದಲ್ಲಿ ಎಲ್ಲಾ ಕಡೆ ಮೂರನೆಯ ಎರಡು ಭಾಗ ಬಹುಮತವಿದೆ. ಎಪಿಎಂಸಿ ಗಳು ಸಹಕಾರ ತತ್ವದ ಮೇಲೆ ನಡೆಯುತ್ತವೆಂದು ಮುಖ್ಯಮಂತ್ರಿಗಳು ಹೇಳಿದರು. ಕೋಆಪರೇಷನ್ ಸಂಸ್ಥೆಗಳಿಗೆ ಇಬ್ಬರು ಮಂತ್ರಿಗಳಿದ್ದಾರೆ ಎಂದು ಹೇಳಿದರು. ಇಲ್ಲಿ ಮೂರನೆಯ ಎರಡು ಭಾಗ ಬಹುಮತ ಇದ್ದದನ್ನು ನೀವು ಏಕೆ ಸರಳ ಬಹುಮತ ಮಾಡಿದ್ದೀರಿ? ಒಂದು ಕಾರಣವಿರಬಹುದು, ಸರಳ ಬಹುಮತವಿದ್ದರೆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿ ಆ ಸಂದರ್ಭದಲ್ಲಿ ಒಬ್ಬರು ಇಬ್ಬರು ಆರಿಸಿಬಿಡಬಹುದು. ಅಧಿಕಾರದ ಒತ್ತಡದಿಂದ ನೀವು ಅಧಿಕಾರ ಚಲಾಯಿಸಬಹುದು. ನಾಮನಿರ್ದೇಶನ ಮಾಡುವುದು ಮತ್ತೊಂದು ಎಲ್ಲಾ ಒಂದು ರೀತಿ ಮನಸೋಯಿಚ್ಛೆ ನಡೆಯುವಂತಹ ರೀತಿಯಲ್ಲಿ ಒತ್ತಡ ತರುವುದು. ಕೆಲವು ಅಧಿಕಾರಿಗಳಿಗೆ ಓಟಿಂಗ್ ಪವರ್ ಇದೆ. ಅಧಿಕಾರಿಗಳ ಮೇಲೆ ಒತ್ತಡ ತರುವುದು.

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) : ತಾವು ಕಾಫಿ ಮಂಡಳಿಗೆ ನಾಮ ನಿರ್ದೇಶನ ಮಾಡಿದ್ದೀರಿ, ಅಲ್ಲಿ ಹಾಗೆ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಡಿ.ವಿ. ಸದಾನಂದಗೌಡ : ಸರಳ ಬಹುಮತ ಮಾಡಿದರೆ ಏನಾಗುತ್ತದೆಂದರೆ ಇಂತಹ ಸಂಸ್ಥೆಗಳಲ್ಲಿ ಅಧಿಕಾರಿಗಳು ಓಟರ್ಸ್ ಆಗಿರುತ್ತಾರೆ, ಹಲವಾರು ಕಡೆಗಳಲ್ಲಿ ತೊಂದರೆ ಯಾಗಿರುತ್ತದೆ. ಅಧಿಕಾರಿಗಳು ಮನಃಪೂರ್ವಕವಾಗಿ ನಿಜವಾಗಿ ಯಾರು ಒಳ್ಳೆಯವರು ಯಾರು ಕೆಟ್ಟವರೆಂದು ನೋಡಿ ಅವರು ನಡೆದುಕೊಂಡರೂ ಸಹ ಕೆಲವು ಸಂದರ್ಭಗಳಲ್ಲಿ ನಿಮ್ಮ ಸಹಕಾರಿ ಸಂಸ್ಥೆಗಳಲ್ಲಿ ಅಧಿಕಾರದಲ್ಲಿರುವವರು ಹೇಳಿದಹಾಗೆ ನಡೆಯುತ್ತದೆ. ಇಂತಹ ವ್ಯವಸ್ಥೆಗಳನ್ನು ಮಾಡುವುದಕ್ಕೆ ತಿದ್ದುಪಡಿಗಳನ್ನು ತರುತ್ತಿದ್ದೀರಿ. ಸೂಪರ್‌ಸೀಡ್ ಆಗುವುದಕ್ಕೆ ಏನೆಲ್ಲಾ ವ್ಯವಸ್ಥೆಗಳು ಆಗಬೇಕು ಅದನ್ನು ಮಾಡಲು ಹೋಗುತ್ತಿದ್ದೀರಿ. ಒಟ್ಟಾರೆ ಅಧಿಕಾರವನ್ನು ನಿಮ್ಮ ಕೈಯಲ್ಲಿ ಪಡೆದುಕೊಳ್ಳಲಿಕ್ಕೆ ಏನೆಲ್ಲಾ ಮಾಡುವುದಕ್ಕೆ ನಿಮಗೆ ಸಾಧ್ಯವುಂಟು ಆ ಪ್ರಯತ್ನಗಳನ್ನು ಮಾಡುತ್ತಿದ್ದೀರಿ. ಒತ್ತಡದ ಮುಖಾಂತರ ಮಾಡುವುದು ಸಾಧಾರಣ ಏನೇನು ಸಾಧ್ಯವುಂಟು ಅದನ್ನೆಲ್ಲಾ ಮಾಡುತ್ತಿದ್ದೀರಿ. ಮೂರನೆಯ ಎರಡು ಭಾಗ ಬಹುಮತವೆಂದು ಇದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. 12-13 ಜನ ಇದ್ದಾಗ ಆ ಕೆಲಸ ಮಾಡುವುದಕ್ಕಾಗುವುದಿಲ್ಲ. ಸರಳ ಬಹುಮತ ಎಂದು ಇದ್ದರೆ ಒಬ್ಬರು ಇಬ್ಬರನ್ನು ವ್ಯತ್ಯಾಸ ಮಾಡಿ ಅವರನ್ನು ದಾರಿ ತಪ್ಪಿಸಿಬಿಟ್ಟರೆ ತಮ್ಮ ಕೆಲಸ ಸುಗಮವಾಗುತ್ತದೆ. ಈಗಾಗಲೇ ಮೂರು ಮೂರು ಜನರನ್ನು ಎಪಿಎಂಸಿಗಳಿಗೆ ನಾಮನಿರ್ದೇಶನ ಮಾಡುತ್ತಿದ್ದೀರಿ. ಜನತಾದಳ ಸರ್ಕಾರ ಇರುವಂತಹ ಸಂದರ್ಭದಲ್ಲಿ ಹೆಚ್ಚಿನ ಎಪಿಎಂಸಿ ಗಳು ಅವರಲ್ಲಿವೆ. ಸ್ವಲ್ಪ ಜನ ನಿಮ್ಮ ಒಟ್ಟಿಗೆ ಇದ್ದಾರೆ. ಕೆಲವರನ್ನು ನಿಮ್ಮ ಕಡೆಗೆ ಎಳೆದುಕೊಳ್ಳುವ ಕೆಲಸವನ್ನು ಮಾಡುತ್ತಿದ್ದೀರಿ. ಒಟ್ಟಾರೆ ಸರಳ ಬಹುಮತ ಎಂದು ಮಾಡಿ ನಿಮ್ಮ ಕೈಯಲ್ಲಿ ತೆಗೆದುಕೊಳ್ಳುವುದಕ್ಕೆ ಮಾಡುತ್ತಿದ್ದೀರಿ. ನಿಜವಾಗಿಯೂ ಈ ಸಂದರ್ಭದಲ್ಲಿ ಇದರ ಅವಶ್ಯಕತೆ ಇರಲಿಲ್ಲ. ಒಂದು ವೇಳೆ ಇಂತಹ ತಿದ್ದುಪಡಿಗಳು ಆಗಬೇಕಾದರೆ ಪ್ರಾರಂಭಿಕ ಹಂತದಲ್ಲಿ ಸಹಕಾರ ತತ್ವಕ್ಕೆ ತಿದ್ದುಪಡಿಯಾಗಬೇಕು. ಅದರ ನಂತರ ಇದಕ್ಕೆ ತಿದ್ದುಪಡಿ ಮಾಡಬೇಕು. ಈವೊಂದು ತಿದ್ದುಪಡಿಯನ್ನು ಏನು ಮಾಡಿದ್ದೀರಿ ಇದು ಭಾರಿ ಆಶ್ಚರ್ಯ. ಮೊದಲು ಅವಿಶ್ವಾಸ ನಿರ್ಣಯ ಮಂಡಿಸಿ ಆದಮೇಲೆ ಪುನಃ ಮಂಡಿಸಬೇಕಾದರೆ ಒಂದು

ವರ್ಷ ಆಗಬೇಕಿತ್ತು. ಈಗ ಆರು ತಿಂಗಳಿಗೊಮ್ಮೆ ಎಂದು ಮಾಡಿರುವುದರಿಂದ ಅಧಿಕಾರವನ್ನು ಬೇಗ ಹಿಡಿಯಬಹುದು. ಮೂರು ಜನ ನಾಮನಿರ್ದೇಶನ ಮಾಡುತ್ತೀರಿ, ಯಾರಾದರೂ ಒಬ್ಬರನ್ನು ಕಿಡ್ನಾಪ್ ಮಾಡಿ ಅಧಿಕಾರವನ್ನು ಗ್ರಹಣ ಮಾಡಬೇಕಾಗಿದೆ. ಅದಕ್ಕೆ ವ್ಯವಸ್ಥೆ ಮಾಡಿದ್ದೀರಿ. ಇಂತಹ ಸಿಂಪಲ್ ತಿದ್ದುಪಡಿಯನ್ನು ತರುವುದಕ್ಕೆ ನಿಮಗೆ ನಾಚಿಕೆಯಾಗುವುದಿಲ್ಲವೆ? ನಿಮಗೆ ನಾಚಿಕೆಯೇ ಇಲ್ಲ, ನಾಚಿಕೆ ಇಲ್ಲದವರಿಗೆ ಹೇಗೆ ನಾಚಿಕೆಯಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಮತದಾನದ ಹಕ್ಕು ಯಾರಿಗೆ ಇಲ್ಲ, ಅದನ್ನು ಕೊಡಲಿಕ್ಕೆ ಸದನದ ಮುಖಾಂತರ ಕಾನೂನು ತಿದ್ದುಪಡಿ ಮಾಡಿ ಅವಕಾಶ ಕಲ್ಪಿಸಲಾಗಿದೆ. ಇದೇನು ಹೊಸದೇ? ಬೇರೆ ಬೇರೆ ಸಂಘಸಂಸ್ಥೆಗಳಲ್ಲಿ ಮತದಾನದ ಹಕ್ಕು ಇಲ್ಲದೇ ಇರುವಂಥ ಸಂದರ್ಭದಲ್ಲಿ ಮತದಾನದ ಹಕ್ಕನ್ನು ಮಸೂದೆ ಮೂಲಕ ಕೊಟ್ಟಿರುವಂಥ ನಿದರ್ಶನಗಳು ಇಲ್ಲವೇನು? ಅದಕ್ಕೆ ನಾಚಿಕೆ ಏಕೆ ಬರಬೇಕು? ಒಳ್ಳೆ ಕತೆಯಾಯಿತಲ್ಲಾ ನಿಮ್ಮದು....

ಶ್ರೀ ಆಪ್ಪಾಜಿ ಎಸ್. ನಾಡಗೌಡ : 1992-93 ರಲ್ಲಿ ಇದನ್ನು ತೆಗೆಯುವಂಥಾದ್ದು ಆಗಿತ್ತು. ಮಾನ್ಯ ಎಸ್.ಎಸ್. ಪಾಟೀಲರನ್ನು ಕೇಳಿ. ಅವರು ಬಂದ ಮೇಲೆ ಮತ್ತೆ ಪುನಃ ನಾಮಕರಣವನ್ನು ಮಾಡಿ ಎಲ್ಲಾ ಸೊಸೈಟಿಗಳನ್ನು ಕೈಗೆ ತೆಗೆದುಕೊಳ್ಳುವುದಕ್ಕೆ, ಎ.ಪಿ.ಎಂ.ಸಿ.ಗೆ ಎಲ್ಲಾ ಕಡೆ ನಾಮಕರಣ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಇದು ನಾವು ಮಾಡಿದ್ದು ಎಂದು ಅಲ್ಲ.......

ಶ್ರೀ ಡಿ.ವಿ. ಸದಾನಂದಗೌಡ : ಆ ಕೆಲಸವನ್ನು ಜನತಾದಳದವರು ಮಾಡಿರಬಹುದು. ನೀವು ಇಷ್ಟುರವರೆಗೆ ಹೇಳಿದ್ದೇನು? ಅವರು ಮಾಡಿದ ಹಾಗೆ ನಾವು ಮಾಡುವುದಿಲ್ಲ, ಅವರು ತಪ್ಪು ಮಾಡಿದ್ದಕ್ಕೆ ಅವರನ್ನು ಅಲ್ಲಿ ಕೂಡಿಸಿದ್ದಾರೆ, ನಮ್ಮನ್ನು ಇಲ್ಲಿ ಕೂಡಿಸಿದ್ದಾರೆಂದು ಈ ವಿಚಾರವನ್ನು ನೀವು ಹೇಳುತ್ತಿದ್ದಿರಲ್ಲಾ, ಈಗ ಅವರು ಮಾಡಿದರು ಎಂದು ಹೇಳಿ ನೀವೂ ಅದನ್ನೇ ಮಾಡುವುದಾ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ತೊಂದರೆ ಮಾಡುತ್ತೇವೆಂದು ಸದಾನಂದಗೌಡರು ಹೇಳುತ್ತಾರೆ. ಕಾಫಿ ಮಂಡಳಿಗೆ ಇವರ ಹತ್ತಿರ ಜನ ಇಲ್ಲವೆಂದು ಹೇಳಿ ಕಾಂಗ್ರೆಸ್ಸಿನವರನ್ನೇ ನಾಮಕರಣ ಸದಸ್ಯರನ್ನಾಗಿ ಮಾಡಿದರು. ನಾವೇನೂ ಅದರ ಬಗ್ಗೆ ಚಕಾರ ಎತ್ತಲಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ನಿಜವಾಗಿ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇಟ್ಟಂಥ ಒಂದು ರಾಜಕೀಯ ಪಕ್ಷವಾದ ಅವರಿಗೆ ಅವಕಾಶವೇ ಇಲ್ಲ. ಬಾಕಿಯವರೆಲ್ಲಾ, ಬಿ.ಜೆ.ಪಿ. ಯವರು ಇದ್ದರು. ಆದರೂ ಕೂಡ ಸದನದ ಗಮನಕ್ಕೆ ಹಲವಾರು ವಿಚಾರಗಳನ್ನು ಸ್ವಪಕ್ಷೀಯರವರಿಗೆ ತರುವುದಕ್ಕೆ ಆಗುವುದಿಲ್ಲ. ಅವರಾದರೂ ತರಲಿ ಎಂದು ನಾಮಿನೇಷನ್ ಮಾಡಿದಂಥ ಈ ದೊಡ್ಡಮನಸ್ಸನ್ನು ಅವರು ಶ್ಲಾಘನೆ ಮಾಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಇಲ್ಲೂ ಕೂಡ ಹಾಗೆಯೇ ಆಗಬಹುದು ಎಂದು ಸುಮ್ಮನೆ ಇದ್ದೇವೆ. ಹಾಗೆ ಆಗುವಂಥ ಸಾಧ್ಯತೆ ಇದೆ.

ಶ್ರೀ ಅರಗ ಜ್ಞಾನೇಂದ್ರ : ಅವರು ಮಧ್ಯೆ ಮಧ್ಯೆ ಏಳುತ್ತಾರೆ. ಇಲ್ಲಿ ಕುಳಿತಿದ್ದಾಗಲೂ ಇದೇ ಕೆಲಸ ಮಾಡುತ್ತಿದ್ದರು. ಮಂತ್ರಿಗಳಾದ ಮೇಲೆ ಸರಿಹೋಗಬಹುದು ಎಂದರೆ ಬದಲಾವಣೆಯಾಗಿಲ್ಲ. ಈಗಲೂ ಹಾಗೆಯೇ ಮಾಡುತ್ತಿದ್ದಾರೆ. ಮಂತ್ರಿಗಳಾದ ಮೇಲೂ ಪದೇಪದೇ ಏಳುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ : ಅವರನ್ನು ಮಂತ್ರಿಗಳಾಗಿ ಮಾಡಿದ್ದು ಯಾಕೆ ಎಂದರೆ ಪದೇಪದೇ ಏಳಲಿ ಎಂದು. ನಿಜವಾಗಿಯೂ ಈ ತಿದ್ದುಪಡಿ ಯಾವ ಉದ್ದೇಶವನ್ನೂ ಹೊಂದಿಲ್ಲ. ಈ ಮೂರೂ ತಿದ್ದುಪಡಿ ಕೂಡ ಒಂದು ರೀತಿಯಲ್ಲಿ ಸಾರ್ವಜನಿಕ ವ್ಯವಸ್ಥೆಯಲ್ಲಿ ಪಾರದರ್ಶಕತೆ ತಂದುಕೊಡುವಂಥ ಯಾವುದೇ ಸಂಗತಿಗಳಿಗೆ ಇದು ಮೀಸಲಾಗಿಲ್ಲ ಮತ್ತು ಸಹಕಾರ ತತ್ವಕ್ಕೇ ವಿರುದ್ಧವಾಗಿರತಕ್ಕಂಥಾದ್ದು. ಆದ ಕಾರಣ, ಈ ತಿದ್ದುಪಡಿಯನ್ನು ಕೈಬಿಡಬೇಕು ಮತ್ತು ಹಿಂದೆ ಇದ್ದ ರೀತಿಯಲ್ಲಿಯೇ ಇರಬೇಕು ಎಂದು ನಾನು ಆಗ್ರಹವನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛಿಸುತ್ತೇನೆ.

\+ ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿಯನ್ನು ಅವರು ತಂದಿದ್ದಾರೆ. ಈಗಾಗಲೇ ಅವರು ಹೇಳಿದ್ದಾರೆ. ಏನೆಂದರೆ ಇವರೇ ನಾಮಕರಣ ಮಾಡಿದರು ಹಾಗೆ ಹೀಗೆ ಎಂದು. ನಿಜ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವು ಮಾಡಿದ್ದು ತಪ್ಪು. ಇಲ್ಲವೆಂದು ನಾನು ಹೇಳುವುದಿಲ್ಲ. ಮಾಡಿದ ತಪ್ಪನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಕಾಗೋಡು ತಿಮ್ಮಪ್ಪನವರು ಇದ್ದಾರೆ, ಸಗೀರ್ ಅಹಮದ್ ಅವರು ಇದ್ದಾರೆ. ಅವರು ಇಲ್ಲಿ ಕುಳಿತುಕೊಂಡು ಏನೇನು ಮಾತನಾಡಿದ್ದರು? ನನ್ನನ್ನು ಏನೇನು ಬಯ್ದಿದ್ದರು? ನನ್ನ ಪರಿಸ್ಥಿತಿಯನ್ನು ಎಲ್ಲಿಗೆ ಒಯ್ದಿದ್ದರು? ನಾನು ಚೆಂಡು ಒದೆಸಿಕೊಂಡು ಅಲ್ಲಿ ಕುಳಿತಿದ್ದೆ. ಈಗ ನೀವು ಬಂದು ಅದನ್ನೇ ಮಾಡುವುದೇನು? ಹೇಳಿದಹಾಗೆ ನಡೆದುಕೊಳ್ಳಬೇಕಲ್ಲಾ? ಅದನ್ನು ಕೂಡ ಒಬ್ಬರಿಗೊಬ್ಬರು ಟೀಕೆ ಮಾಡುವುದು ಆಯಿತು. ಆದರೆ ಇಲ್ಲಿ ಕುಳಿತುಕೊಂಡು ಏನು ಮಾತನಾಡಿದ್ದೀರಿ ಅದು ಅಲ್ಲಿ ಹೋದಮೇಲೆ ನೆನಪು ಇಲ್ಲ. ಇದು ನಾನು ಹೇಳತಕ್ಕಂಥ ಪ್ರಶ್ನೆ. ಆಮೇಲೆ ಇಲ್ಲಿ ನಾಮಕರಣ ನಾವು ಮಾಡಿದ್ದನ್ನು ಮುಂದುವರೆಸಿದ್ದಾರೆ, ಅದು ಬೇರೆ. ಈಗ ನಮ್ಮ ಕಾನೂನು ಸಚಿವರು ಒಂದು ಮಾತನ್ನು ಹೇಳಿದರು. ಏನೆಂದರೆ ಇಲ್ಲಿ 13 ಜನ ನಮ್ಮ ಕಡೆಯವರು ಇದ್ದರೆ ನಮ್ಮ ಗತಿ ಏನಾಗುತ್ತದೆ ಎಂದು ಹೇಳಿದರು. ಇದು 224 ಜನರ ಸದನ. ಇದಕ್ಕೂ ಇನ್ನೂರು ಮಂದಿ ನಾಮಿನೇಷನ್ ಹಾಕುವುದು. ಆವಾಗ ಬಹುಮತ ಎಂದರೆ ಹೇಗೆ? ನೀವು ಇಂತಹ ಉದಾಹರಣೆಯನ್ನು ಕೊಡಬೇಡಿ ಎಂದು ನಾನು ಹೇಳಿದೆ. ಚುನಾಯಿತ ಪ್ರತಿನಿಧಿಗಳ ನಡುವೆ ಬಹುಮತ ಇಡಿ, ನಾವು ಬೇಡ ಎಂದು ಹೇಳುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಸದನಕ್ಕೂ ನಾಮಿನೇಷನ್ ಮಾಡುವ ಅಧಿಕಾರ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ನೀವು ಇಲ್ಲಿ ಹೇಳಿದ್ದು ಏನು? ನಮ್ಮ ಉಪನಾಯಕರು, ಶ್ರೀ ಸದಾನಂದಗೌಡರು ಹೇಳಿದಾಗ '113 ಜನರ ಬಹುಮತ ನಿಮಗೆ ಸಿಕ್ಕಿರಬಹುದು, ಅದು ಆಗಬಾರದು' ಎಂದು ನೀವು ಹೇಳಿದ್ದು ಹೌದೋ ಅಲ್ಲವೋ? ಸದನದಲ್ಲಿ 200 ಮಂದಿ ನಾಮಕರಣ ಸದಸ್ಯರು ಇದ್ದಾರೇನು?

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲೂ ನಾಮಕರಣ ಸದಸ್ಯರು ಇದ್ದಾರೆಂದು ಹೇಳಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಅವರಿಗೆ ಓಟಿಂಗ್ ರೈಟ್ಸ್ ಇಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಚಂದ್ರೇಗೌಡರು, ತಾವು ಹಿರಿಯರಿದ್ದೀರಿ. ತಮ್ಮನ್ನು ಒಂದು ವಿಚಾರವನ್ನು ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ನಾಮಿನೇಷನ್ ಮಾಡುವುದೇ ತಪ್ಪೆಂದು ಹೇಳುವಂಥಾದ್ದು ಸಾರ್ವತ್ರಿಕ ವಲಯದಲ್ಲಿ, ಸಹಕಾರ ರಂಗದಲ್ಲಿ ಮಾಡಬಾರದು ಎಂದು ಹೇಳುವಂಥಾದ್ದು ಒಂದು ವಿಚಾರ ಇದೆ. ಆದರೂ ಕೂಡ ವಿಶೇಷವಾಗಿ ಸರ್ಕಾರದ ಶೇರುಗಳು ಇರುವಂಥ ಹಿನ್ನೆಲೆಯಲ್ಲಿ, ಅದಕ್ಕೆ ಆಸ್ಪದ ಕೊಡಬಹುದು ಎಂದು ಹೇಳುವಂಥ ಕೋರ್ಟಿನ ತೀರ್ಮಾನದ ಹಿನ್ನೆಲೆಯಲ್ಲಿ ನಡೆಯುತ್ತಾ ಇದೆ; ನಿಮ್ಮ ಇಲಾಖೆಯ ಅಧಿಕಾರಿಗಳು ಸಹಕಾರ ರಂಗದಲ್ಲಿ ಹೆಚ್ಚು ಕಡಿಮೆ ಆದರೆ ನೋಡುವುದಕ್ಕೆ ಇದ್ದಾರೆ. ಆದರೂ ಕೂಡ ನಾಮಿನೇಷನ್ ಮಾಡಿದಿರಿ ಮತ್ತು ನಾಮಿನೇಷನ್ ಮಾಡಿದ ಮೇಲೆ ನೀವು ಏನು ಮಾಡುತ್ತೀರಿ? ಅವರಿಗೆ ಓಟಿಂಗ್ ಪವರ್ಸ್ ಕೊಡುತ್ತೀರಿ. ಹಿಂದೆ ನೀವೇ ಇದರ ಬಗ್ಗೆ ವಿರೋಧ ಮಾಡಿದ್ದೀರಿ. ಆದರೆ ಈಗ ನೀವು ಅದನ್ನೇ ಚಾಲೂ ಮಾಡುತ್ತಿದ್ದೀರಿ. ಇಲ್ಲಿ ಬಂದಿರುವ ತೊಂದರೆ ಅದೇ ಆಗಿದೆ. ಮೂರು ಜನರನ್ನು ಈಗ ನಾಮಿನೇಷನ್ ಮಾಡಿದ್ದೀರಿ. ಹಿಂದಿನ ಸರ್ಕಾರ ನಾಮಿನೇಟ್ ಮಾಡಿದ್ದನ್ನು ಈ ನಿಮ್ಮ ಸರ್ಕಾರ ಬಂದ ಮೇಲೆ ಸಂಪ್ರದಾಯ ಬಿಡಿ, ನಿಮಗೆ ಬೇಕಾದವರನ್ನು ನಾಮಿನೇಟ್ ಮಾಡುವಂಥಾದ್ದು. ಮೂರು ಓಟುಗಳು ನಿಮಗೆ ಈಗ ಸಿಕ್ಕಿವೆ. ಬಾಕಿ ಸ್ವಲ್ಪ ಜನ ನಿಮಗೆ ಇರಬಹುದು. ನಿಮಗೆ ಹೆಚ್ಚಿನ ಕಡೆಗಳಲ್ಲಿ ಮೂರನೇ ಎರಡು ಬಹುಮತ ಇಲ್ಲ. ಅದಕ್ಕೆ ಬೇಕಾಗಿ ಸಿಂಪಲ್ ಮೆಜಾರಿಟಿ ಮಾಡುತ್ತಿದ್ದೀರಿ ಹೌದೋ ಅಲ್ಲವೋ? ನೀವೇ ಹೇಳಿ. ಇದು ನಾವೇನೂ ಚರ್ಚೆ ಮಾಡುವಂಥಾದ್ದು ಅಲ್ಲ. ಸತ್ಯ ಸಂಗತಿಗಳನ್ನು ಕೂಡ ಸದನದಲ್ಲಿ ಹೇಳುವಂಥ ಪ್ರಯತ್ನ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ : ನಮ್ಮ ಕಾನೂನು ಸಚಿವರಿಗೆ ನೆನಪು ಮಾಡುವುದರ ಜೊತೆಗೆ ನನ್ನ ಬಗ್ಗೆ, ಇಂಗ್ಲೀಷ್ ಬಗ್ಗೆ ಮಾತನಾಡಿದರು. ಆದರೆ ಒಂದು ವಾರ ಆಯಿತು, ಕಾಯಿದೆ ಆದನಂತರ ಕನ್ನಡದ್ದು ತರಿಸಬೇಕು ಎಂದಿದೆ. ಆದರೆ ದುರ್ದೈವದಿಂದ ಏನಾಗಿದೆ ಎಂದರೆ, ಕನ್ನಡ ಕಾಯಿದೆ ಪುಸ್ತಕ ನನಗೆ ಸಿಕ್ಕಿಲ್ಲ. ಇಂತಹ ನಾಚಿಗೇಡಿತನದ ಸಂಗತಿ ನಮ್ಮ ರಾಜ್ಯದಲ್ಲಿದೆ. ಗ್ರಂಥಾಲಯದಲ್ಲಿ ಕೇಳಿದಾಗ ಇಲ್ಲವೆಂದರು. ನಾನು ಬರೆದುಕೊಡಿ ಎಂದು ಕೊನೆಗೆ ಹೇಳಿದೆ. ಗ್ರಂಥಾಲಯದವರು ಕನ್ನಡ ಪುಸ್ತಕವೇ ಬರುವುದಿಲ್ಲ ಎಂದು ಹೇಳುತ್ತಾರೆ. ಕನ್ನಡ ಸಂಸ್ಕೃತಿ ಸಚಿವರು ಎಲ್ಲಿ ಹೋದರು? ಇದು ಈ ರಾಜ್ಯದ ದುರಂತ. ಗ್ರಂಥಾಲಯದಲ್ಲಿ ಕನ್ನಡದ ಬಗ್ಗೆ ಕಾಳಜಿಯೇ ಇಲ್ಲ. ಹಾಗಾದರೆ ನಾವು ಏನು ನೋಡುವುದು, ಏನು ಮಾತನಾಡುವುದು? ಯಾವಾಗ ಕನ್ನಡವನ್ನು ಜಾರಿಗೆ ತರುವವರು ನೀವು? ನಿಮಗೆ ಎಷ್ಟು ತಿವಿದು ಹೇಳಿದರೂ ಪ್ರಯೋಜನ ಇಲ್ಲ, ನಾನು ಅಧ್ಯಕ್ಷರಿಗೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ಕನ್ನಡ ಪ್ರತಿಯನ್ನು ಕೊಡಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಒಂದು ವಾರದಿಂದ ಹುಡುಕುತ್ತಿದ್ದೇನೆ, ಸಿಕ್ಕಿಲ್ಲ.

ಅಧ್ಯಕ್ಷರು : ಈಗಲೇ ಕಳುಹಿಸುತ್ತೇನೆ ಇರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ಪ್ರತಿಯೂ ಇಲ್ಲವೆಂದರೆ ಹೇಗೆ? ತಾವು ಸಹಕಾರ ಮಂತ್ರಿಯಾಗಿದ್ದಿರಿ. ನೀವು ಏಕೆ ತರಲಿಲ್ಲ? ಈಗ ಬಂದು ಹುಡುಕುತ್ತಿದ್ದೀರಿ.

ಶ್ರೀ ಎಸ್.ಎಸ್. ಪಾಟೀಲ್ : ಅದು ಸರಿ ಅಂತಿರೇನು? ಆವಾಗ ನಾವು ಇಂಗ್ಲೀಷ್‌ನಲ್ಲಿ ತಂದಿದ್ದು ಸರಿ ಅಂತೀರೇನು? ಇಲ್ಲಿ ಕನ್ನಡ ಆಡಳಿತ ಭಾಷೆ ಮಾಡುತ್ತೇವೆ ಎಂದು ಹೇಳಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಸರಿ ಅಂತ ಅಲ್ಲ. ಕೇಳುವ ಹಕ್ಕು ತಮಗೆ ಇದೆ. ತಮ್ಮ ಕೈಯಲ್ಲಿದ್ದಾಗ ಏಕೆ ಮಾಡಲಿಲ್ಲ ಎಂದು ಕೇಳಿದೆ.

ಶ್ರೀ ಎಸ್.ಎಸ್. ಪಾಟೀಲ್ : ನಮ್ಮ ಸಹಕಾರ ಕಾಯಿದೆಯಂತೂ ಎಲ್ಲಾ ಕನ್ನಡದಲ್ಲಿ ಇದ್ದವು. ಇವತ್ತು ನೀವು ತೆಗೆಸಿಲ್ಲ ಎಂದರೆ ನಾನು ಏನು ಮಾಡಲಿ? ನಮ್ಮ ಕಾಲದಲ್ಲಿ ಎಲ್ಲಾ ಸಹಕಾರ ಕಾಯಿದೆ ಕನ್ನಡದಲ್ಲೇ ಇದ್ದವು. ಈಗ ನಾನು ಪುಸ್ತಕವನ್ನು ಮನೆಯಿಂದ ತರಿಸಲಾ? ನೀವು ಗ್ರಂಥಾಲಯದಲ್ಲಿ ಇಟ್ಟಿಲ್ಲ. ಇದು ನಮಗೆ ಬಂದಿರುವ ತೊಂದರೆ. ಈಗ ಇಂಗ್ಲಿಷ್ ಬಾರದ ಶಾಸಕರು ನಾವು ಇದ್ದೇವೆ. ನಾವೇನು ಮಾಡಬೇಕು? ಅಧ್ಯಕ್ಷರೇ, ತಾವು ನಮ್ಮ ಸಹಾಯಕ್ಕೆ ಬರಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಮನೆಯಿಂದಲೇ ಪುಸ್ತಕ ತರುವುದಾದರೆ........

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ಹತ್ತಿರ ಇದೆ ಅಂದಿರಲ್ಲಾ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೇ ಇದು ಉತ್ತರವೇ ತಾವೇ ಹೇಳಿಬಿಡಿ.

ಅಧ್ಯಕ್ಷರು : ಪಾಟೀಲರೇ ಒಂದು ನಿಮಿಷ. ಗ್ರಂಥಾಲಯದಲ್ಲಿ ಯಾವ್ಯಾವುದು ಆಂಗ್ಲಭಾಷೆಯಲ್ಲಿ ಇದೆಯೋ ಅದನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿ ಕನ್ನಡದಲ್ಲಿ ಇಡಿಸುವುದಕ್ಕೆ ನಾನು ಏರ್ಪಾಡು ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ತಮಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಉತ್ತರವನ್ನು ಅವರ ಬಾಯಿಯಿಂದ ಹೇಳಲಿ.

ಅಧ್ಯಕ್ಷರು : ಮಾಡೋಣ. ಯಾವುದು ಆಂಗ್ಲಭಾಷೆಯಲ್ಲಿ ಇದೆಯೋ ಅದನ್ನೆಲ್ಲ ಕನ್ನಡದಲ್ಲಿ ತರ್ಜುಮೆ ಮಾಡಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಈ ರಾಜ್ಯದಲ್ಲಿ ಕನ್ನಡವೇ ಇಲ್ಲ. ಯಾರಿಗೂ ಕನ್ನಡ ಬರುವುದಿಲ್ಲ. ಈ ಕಾರಣದಿಂದ ನಾನು ಅಧ್ಯಕ್ಷರಿಗೆ ಹೇಳುತ್ತಿದ್ದೇನೆ. ನೀವು ಕನ್ನಡ ತರುವುದು ಯಾವಾಗ? ಜರ್ಮನಿ, ಜಪಾನ್ ದೇಶದೊಳಗೆ ಹೋಗಿ ನೋಡಿ. ಅಲ್ಲಿ ಯೂರೋಪ್ ಖಂಡದಲ್ಲಿದ್ದರೂ ಕೂಡ ಇಂಗ್ಲೀಷ್ ಎಲ್ಲಿಯೂ ಇಲ್ಲ.

ಅಧ್ಯಕ್ಷರು : ಪಾಟೀಲರೇ, ನಾನು ಆಂಗ್ಲ ಭಾಷೆಯಲ್ಲಿ ಯಾವ್ಯಾವುದು ಇದೆ ಎಂದು ನೋಡಿ ತರಿಸುತ್ತೇನೆ. ಅವುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಲಿಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೇ, ತಾವು ಮಾಡುತ್ತೀರಿ. ಆದರೆ ಈ ಸರ್ಕಾರಕ್ಕೆ ಹೇಳಿ. ಇದಕ್ಕೇ ತಮ್ಮ ಮೇಲೆ ನನಗೆ ಸಿಟ್ಟು ಬರುವುದು. ತಮ್ಮ ಬಗ್ಗೆ ನಮಗೆ ಗೌರವ ಇದೆ. ಆದರೆ ತಾವು ಸರ್ಕಾರಕ್ಕೆ ಛೀಮಾರಿ ಹಾಕುವುದಿಲ್ಲ. ಇದನ್ನು ಕಂದಾಯ ಸಚಿವರೂ ಕೂಡ ಸಮರ್ಥನೆ ಮಾಡಿಕೊಳ್ಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸಮರ್ಥನೆ ಅಲ್ಲ. ಇದು ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಸಿಕ್ಕಿತು ಅನ್ನುವ ಹಾಗೆ ನಿಮಗೆ ಹಾಗೆ ಆಗಿದೆ. ಆದಕ್ಕೆ ಎಲ್ಲಿ ಯಾವ ಮೊಸರಿನಲ್ಲಿ ಕಲ್ಲು ಸಿಗುತ್ತದೆ ಎಂದು ಹುಡುಕುತ್ತೀರಿ. ಒಂದು ಸಾರಿ ಹೇಳಿದರೆ ಸಾಕು. ನಾವು ಮತ್ತು ಮುಖ್ಯಮಂತ್ರಿಗಳೇ ಇರಲಿ, ನಾವೇನೂ ಕನ್ನಡಾಭಿಮಾನದಲ್ಲಿ ಯಾರಿಗೂ ಕಡಿಮೆ ಇಲ್ಲ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಕರ್ನಾಟಕ ರಾಜ್ಯದ ಒಬ್ಬ ಕಾನೂನು ಸಚಿವರು ಕನ್ನಡವನ್ನು ಮೊಸರಿನಲ್ಲಿನ ಕಲ್ಲು ಎಂದರೆ ಅಧ್ಯಕ್ಷರೇ, ಇದು ಯಾವ ಅರ್ಥವಾಯಿತು ಎಂಬುದನ್ನು ತಾವು ಹೇಳಿ.

ಅಧ್ಯಕ್ಷರು : ಅವರು ಹೇಳಿದ್ದು ಇಷ್ಟೇ. ಒಂದು ಸಲ ಹೇಳಿ, ಆದನ್ಯಾಕೆ ರಿಪೀಟ್ ಮಾಡುತ್ತೀರಿ ಎಂದು ಹೇಳಿದರು.

ಎಸ್.ಎಸ್. ಪಾಟೀಲ್ : ಅವರು ಹಾಗೆ ಹೇಳುತ್ತಾರೆ. ನಾನು ಮೊಸರಿನಲ್ಲಿ ಕಲ್ಲು ಹುಡುಕಿದೆನಂತೆ. ಇಷ್ಟು ಸಣ್ಣ ಮಟ್ಟದಲ್ಲಿ ಇವತ್ತು ಕನ್ನಡವನ್ನು ಕಾಣುತ್ತಿದ್ದಾರೆ.

ಅಧ್ಯಕ್ಷರು : ತಾವು ಮುಂದುವರೆಸಿ. ಬೇರೆ ಪಾಯಿಂಟ್‌ಗೆ ಬನ್ನಿ.

3.50 ಪಿ.ಎಂ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಯಿದೆ ಸಚಿವರು ನಾವು ಬಹಳ ಪಾರದರ್ಶಕ, ನಾವೆಲ್ಲಾ ಪ್ರಜಾಪ್ರಭುತ್ವವನ್ನು ತಂದುಬಿಡುತ್ತೇವೆ ಎಂಬುದಾಗಿ ಹೇಳುವುದೆಲ್ಲವನ್ನೂ ಹೇಳಿದರು. ಆದರೆ, ತಾವು ದಯವಿಟ್ಟು ಹೇಳಿ. ಈಗಾಗಲೇ ಕಾಯಿದೆಯಲ್ಲಿ ಅವಕಾಶ ಇದೆ. ಹೊಸದಾಗಿ ಒಂದು ಬೋರ್ಡ್, ನಾಮಕರಣಕ್ಕೆ ಮೊದಲೇ ಒಂದು ಎ.ಪಿ.ಎಂ.ಸಿ. ಆಗುತ್ತದೆ. ಅಂತಹ ಕಡೆಗಳಲ್ಲಿ ತಾವು ಹೇಳಬೇಕು. ತಾವು ಸಹಕಾರಿ ಮಂತ್ರಿಗಳಾಗಿ ಇದನ್ನೆಲ್ಲಾ ನೋಡಬೇಕು. ತಾವು ತಿಳಿ ಹೇಳಬೇಕು. ನೀವು ಸಚಿವ ಸಂಪುಟದಲ್ಲಿ ಸುಮ್ಮನೆ ಕುಳಿತುಬಿಡುತ್ತೀರಿ ಎಂದು ಕಾಣುತ್ತದೆ. ಹಿರಿಯರಾದವರು ನೀವು ಹೇಳಬೇಕು. ನಮ್ಮ ಕಾಲಕ್ಕೆ ಈ ರೀತಿ ಇತ್ತು, ಇದು ಸರಿಯಲ್ಲವೆಂದು ಹೇಳಬೇಕು. ಮೊದಲನೇ ಬೋರ್ಡ್ ನಾಮಿನೇಟ್ ಮಾಡುತ್ತಾರೆ. ನಾಮಕರಣ ಮಾಡಿದ ಮೇಲೆ ಆ ಬೋರ್ಡ್ ಎರಡು ವರ್ಷ ಇರಬೇಕು. ಎರಡು ವರ್ಷದ ಮೇಲೆ, ಒಂದುವೇಳೆ ಸರ್ಕಾರಕ್ಕೆ ಏನಾದರೂ ಮನಸ್ಸಾದರೆ, ಇನ್ನೊಂದು

ವರ್ಷ ಮುಂದುವರಿಸಬಹುದು ಎಂದು ಹೇಳುತ್ತಾರೆ. ಇವರು ಮತ್ತೆ ಮುಂದುವರಿಸಿ ಎಂದು ಹೇಳುತ್ತಾರೆ. ಇದು ಏಕೆ ಬೇಕು? ದಯವಿಟ್ಟು ತಾವೇ ಹೇಳಿ. ತಮಗೆಲ್ಲಾ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಸರಿಯಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇದು ಸರಿಯಲ್ಲ. ಆ ಕಾರಣಕ್ಕಾಗಿ, ದಯವಿಟ್ಟು, ಇದನ್ನು ಹೊರಗೆ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು, ನಾಮಕರಣ ಸದಸ್ಯರು ಇದ್ದಾರೆ. ಇವರು ಇರುವುದರಿಂದ, ಮತ್ತು ನೀವು ಅಲ್ಲಿ ಬಹುಮತ ಇಡುವುದರಿಂದ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ತಾವೇ ಅರ್ಥಮಾಡಿಕೊಳ್ಳಿ. ಈಗಾಗಲೇ ಬಹುಮತವಿಲ್ಲವೆಂದು ಸುಗ್ರೀವಾಜ್ಞೆ ಹೊರಡಿಸಿದ ಕೂಡಲೇ ನಿಮ್ಮ ಪಕ್ಷದ ಎ.ಪಿ.ಎಂ.ಸಿ. ಗಳೇ ಬಿದ್ದುಹೋಗುತ್ತವೆ. ಈಗಾಗಲೇ ದಿನಬೆಳಗಾದರೆ ಶುರು. ಗ್ರಾಮೀಣಾಭಿವೃದ್ಧಿಯ ಬಗ್ಗೆ ಉದಾಹರಣೆಯನ್ನು ತಾವು ಹೇಳುತ್ತಾ ಇದ್ದೀರಿ. ಅಲ್ಲಿ ಪಕ್ಷದ ಮೇಲೆ ಆರಿಸಿ ಬರುತ್ತಾರೆ. ಜಿಲ್ಲಾ ಪಂಚಾಯ್ತಿಗಳಲ್ಲಿ ಮತ್ತು ತಾಲ್ಲೂಕು ಪಂಚಾಯ್ತಿಗಳಲ್ಲಿ ಪಕ್ಷದ ಮೇಲೆ ಆರಿಸಿಬರುತ್ತಾರೆ. ಪಂಚಾಯ್ತಿ ಆಕ್ಟ್‌ನ್ನು ತಾವು ನೋಡಿದ್ದೀರೋ ಇಲ್ಲವೋ. ಈ ಪಂಚಾಯ್ತಿ ಆಕ್ಟ್‌ನಲ್ಲೂ ಕೂಡ ಮೂರನೇ ಎರಡು ಬಹುಮತ ಇಟ್ಟಿದ್ದಾರೆ. ನೀವು ಸರಳ ಬಹುಮತ ಇಡಿ, ದಿನಬೆಳಗಾದರೆ ಆಗುತ್ತದೆ. ಬಹುಶಃ ಐದು ವರ್ಷದಲ್ಲಿ ನಿಮ್ಮ ಹಣೆಬರಹ ಏನಾಗುತ್ತದೋ ನೋಡೋಣ. ವಿಧಾನ ಸೌಧದಲ್ಲೇ ಅನಾಹುತ ಆಗಿವೆ. ಆದರೆ, ನಿಮಗೆ ಆಗುವುದಿಲ್ಲ, ನೀವು ಬಹಳ ಗಟ್ಟಿ ಮಂದಿ, ನಮಗೆ ಗೊತ್ತಿದೆ. ಸನ್ಮಾನ್ಯ ಅಧ್ಯಕ್ಷರೇ, ಎಷ್ಟು ಕೇಂದ್ರ ಸರ್ಕಾರಗಳು ಉರುಳುತ್ತವೆ, ರಾಜ್ಯಸರ್ಕಾರಗಳು ಉರುಳುತ್ತವೆ. ದೇಶದಲ್ಲಿ ಮೂರು ಸಾರಿ ಚುನಾವಣೆ ಮಾಡಿದರು. ಇವರೇ ನಮ್ಮ ಆರು ತಿಂಗಳು ಕಳೆದರು. ಅಲ್ಲಿ ಬಡ ಬಡ ಸರ್ಕಾರ ಕೆಡವಿದರು. ಚುನಾವಣಾ ಕಮಿಷನರ್ ಆರು ತಿಂಗಳು ನಮ್ಮನ್ನು ವಜಾ ಮಾಡಿದರು. ವಿಸರ್ಜನೆಯಾಯಿತು. ನಾವು ಏನೂ ಮಾಡುವುದಕ್ಕಾಗುವುದಿಲ್ಲ, ಕಾಯಿದೆಯಲ್ಲಿ ಅವಕಾಶ ಇದೆ.

ಶ್ರೀ ಕೆ.ಹೆಚ್. ರಂಗನಾಥ್ : ಶಕ್ತಿ ಇಲ್ಲದೇ ಅವಸರದಲ್ಲಿ ಓಡಿಹೋಗಿ, ಮ್ಯಾನೇಜ್ ಮಾಡುವುದಕ್ಕೆ ಬರದೇ ಬಿದ್ದರೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ಡಿ.ವಿ. ಸದಾನಂದಗೌಡ : ನೀವು ಅವರನ್ನು ಕೂಡಿಸುವುದು ಮತ್ತೆ ತಾವೇ ಅವರನ್ನು ಇಳಿಸುವುದು. ಅವರಾದರೂ ಇದನ್ನು ತಿಳಿದುಕೊಳ್ಳುವುದು ಬೇಡವೇ?

ಶ್ರೀ ಕೆ.ಹೆಚ್. ರಂಗನಾಥ್ : ನೀವು ಪೇಟೆಯಲ್ಲಿ ಕಸರತ್ತು ಮಾಡಿಕೊಂಡು ಪೇಟೆಯಲ್ಲಿ ಇದ್ದಿರಿ. ನಿಮ್ಮನ್ನು ಹಳ್ಳಿಯಲ್ಲಿ ಯಾರು ನೋಡಿದ್ದರು? ಕವಾಯಿತು ಮಾಡಿಕೊಂಡು ಇಲ್ಲಿಯೇ ಇದ್ದಿರಿ. ಜನತಾ ಪಾರ್ಟಿ 1977 ರದ್ದು ಆಯಿತು. ನಿಮ್ಮನ್ನು ಹಳ್ಳಿ ಹಳ್ಳಿಗೆ ಕರೆದುಕೊಂಡು ಹೋಗಿಬಿಟ್ಟರು. ಕರೆದುಕೊಂಡು ಹೋದ ಮೇಲೆ ಏನಾಯಿತು? ಅವರ ಫ್ಲಾಗ್ ಇತ್ತು, ಅದರಲ್ಲಿ ಮಹಾತ್ಮಗಾಂಧಿ ಭಾವಚಿತ್ರ ಹಾಕಿಕೊಂಡಿದ್ದರು. ಅದರಲ್ಲಿದ್ದ ಕರೇದು ಕಸಿದುಕೊಂಡಿರಿ, ಬಿಳೇದೂ ಕಸಿದುಕೊಂಡಿರಿ. ಅವರಿಗೆ ಬರೇ ಹಸಿರು ಕೊಟ್ಟುಬಿಟ್ಟಿರಿ. ಹಸಿರು ಎಂದರೆ, ದರ್ಗಾದಲ್ಲಿ ಇರುತ್ತದೆ. ದರ್ಗಾ ಪ್ಲಾನ್ ಅವರಿಗೆ ಬರುವ ಹಾಗೆ ಮಾಡಿದಿರಿ, ಅವರಿಗೆ ಈಗ ಅರ್ಥವಾಗಿದೆ. ಕಂಬಳಿ ಎಂದು ಅಪ್ಪಿಕೊಂಡೆವು, ಕರಡಿ ಆಗಿಬಿಟ್ಟಿತು ಎಂದು ಅವರಿಗೆ ಈಗ ಅರ್ಥವಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ಈ ಹಸಿರು ಮತ್ತು ಕೇಸರಿಯನ್ನು ಯಾವತ್ತೂ ಒಟ್ಟಾಗಬಾರದು ಎಂದು ನೀವು ಮಧ್ಯದಲ್ಲಿ ಒಂದು ದೊಡ್ಡ ಗ್ಯಾಪ್ ಇಟ್ಟಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ್ : ಗೌಡರೇ, ನಿಮಗಿನ್ನೂ ಅನುಭವ ಸಾಲದು. ಇನ್ನೂ ಸ್ವಲ್ಪ ದಿವಸ ಹೋದಮೇಲೆ ನಿಮಗೇ ಗೊತ್ತಾಗುತ್ತದೆ. ಮಾನ್ಯ ಶಿವಪ್ಪನವರು ಒದ್ದಾಡಿ, ಒದ್ದಾಡಿ ನಿಮ್ಮನ್ನು ಮೇಲಕ್ಕೆ ತಂದಿದ್ದರು. ಅವರನ್ನು ತೆಗೆದು ಬಿಸಾಡಿದ್ದೀರಿ. ಅವರನ್ನು ಲಬ ಲಬ ಅಳುವ ಹಾಗೆ ಮಾಡಿದಿರಿ.

ಶ್ರೀ ಡಿ.ವಿ. ಸದಾನಂದಗೌಡ : ಸಾರ್, ಸದನದಲ್ಲಿ ಇಲ್ಲದವರ ಬಗ್ಗೆ ಮಾತನಾಡಬಾರದು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಸೋಮಶೇಖರ್‌ರವರು ಇದೇನು, ಇದೇನು ಎಂದು ಹೇಳುತ್ತಿದ್ದರು. ನಾನು ಹಳೆಯ ಕಾಲದವನು. ನಮಗೆ ಮೊದಲು ಒಂದು ಸ್ಲೋಗನ್ ಇತ್ತು. ಜುಟ್ಟು ಬಿಟ್ಟವರೆಲ್ಲಾ ಜನಸಂಘ, ಮೀಸೆ ಬಿಟ್ಟವನು ಸೋಷಿಯಲಿಸ್ಟ್, ಗಡ್ಡ ಬಿಟ್ಟವನು ಕಮ್ಯುನಿಸ್ಟ್ ಎಂದು ಹೇಳುತ್ತಾ ಇದ್ದೆವು.

ಶ್ರೀ ಸಿ. ಭೈರೇಗೌಡ : ಮೂರೂ ಬಿಟ್ಟವರು ಕಾಂಗ್ರೆಸ್‌ನವರು.

ಶ್ರೀ ಕೆ.ಹೆಚ್. ರಂಗನಾಥ್ : ಈಗ ಮನೋಹರ ಜೋಷಿಯವರು ಇದ್ದಾರೆ, ಕ್ರಾಪೂ ಬಿಟ್ಟಿದ್ದಾರೆ, ಜುಟ್ಟೂ ಬಿಟ್ಟಿದ್ದಾರೆ. ಗಡ್ಡವನ್ನೂ ಬಿಟ್ಟುಕೊಂಡಿರುವ ನಮ್ಮವರಿದ್ದಾರೆ. ಆ ತರಹದವರು ಎಂದು ನಾವು ಹೇಳಿರುವುದು.

ಶ್ರೀ ಅರಗ ಜ್ಞಾನೇಂದ್ರ : ನಿಮ್ಮಲ್ಲಿ ಯಾರು ಒರಿಜಿನಲ್ ಹೇಳಿ. ಚಂದ್ರೇಗೌಡರು ಒರಿಜಿನಲ್ಲೇ, ಇನ್ನೂ ಅನೇಕರು ಇದ್ದಾರೆ, ಯಾರು ಒರಿಜಿನಲ್ ಕಾಂಗ್ರೆಸ್ ಎಂದು ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್ : ನಾನು 1942ನೇ ಇಸವಿಯಲ್ಲಿ ಜೈಲಿಗೆ ಹೋದವನು. ನಾನು ಕಾಂಗ್ರೆಸ್‌ನವನು, ಜೈಲಿಗೆ ಹೋದವನು. ಜಯಪ್ರಕಾಶ ನಾರಾಯಣರವರು ಹೇಳುವುದಕ್ಕೆ ಮುಂಚೆ, ಸೋಷಿಯಾಲಿಸ್ಟ್ ಪಾರ್ಟಿ ಮಾಡಿದವನು ನಾನು. ನಾವು ಸುಮಾರು ದಾರಿ ನಡೆದಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ನೀವು ಪ್ರಾಮಾಣಿಕವಾದ ಮಾತನ್ನು ಹೇಳುತ್ತಾ ಇದ್ದೀರಿ.

ಅಧ್ಯಕ್ಷರು : ನೋಡಿ, ಇಲ್ಲಿ ಪಾರ್ಟಿ ವಿಷಯ ಇಲ್ಲ. ಎ.ಪಿ.ಎಂ.ಸಿ. ವಿಷಯದ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಪಾರ್ಟಿ ಶಕ್ತಿಯನ್ನು ನೋಡಿಕೊಂಡು ಬರುತ್ತಾರೆ, ಒಳಗಡೆ ಏನಿದೆ ಎಂದು ನೋಡಿಕೊಂಡು ಬರುವುದಿಲ್ಲ. ಆದ್ದರಿಂದ, ನೀವು ಒಳಗಡೆ ಇರುವುದನ್ನು ಹುಡುಕುವುದು ಬೇಡ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ರಂಗನಾಥ್‌ರವರು ಹೇಳಿದ ಪ್ರಕಾರ, ಈ ದೇಶದಲ್ಲಿ ಕಾಂಗ್ರೆಸ್ಸೇ ಉಳಿದಿಲ್ಲ. ಇಲ್ಲಿ ಇರುವವರೆಲ್ಲಾ ಕಾಂಗ್ರೆಸ್‌ನವರಲ್ಲ. ಹಿಂದೆ ಕಾಂಗ್ರೆಸ್ ಇತ್ತಲ್ಲಾ, ಅದರ ಗುರುತು ನೊಗ ಹಿಡಿದ ಜೋಡೆತ್ತು. ಅದು ಯಾವಾಗ ಹೋಯಿತೋ

ಆಗಲೇ ದೇಶದಲ್ಲಿ ಕಾಂಗ್ರೆಸ್ ಹೋಯಿತು. ಅಲ್ಲಿಂದ ಮುಂದಕ್ಕೆ ಅಲ್ಲಿಯವರು, ಇಲ್ಲಿಯವರು ಕೂಡಿ ನಡೆದುಕೊಂಡು ಹೋಗುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಇನ್ನೂ ಸಮಯ ಮುಗಿದಿಲ್ಲ. ಈಗಲೂ ಕೂಡ ತಾವು ವಿಚಾರ ಮಾಡಿ, ನಿಧಾನವಾಗಿ ಆಲೋಚನೆ ಮಾಡಿ ಸರಿಯಾದ ದಾರಿಯನ್ನು ಹುಡುಕಿಕೊಂಡರೆ ನೀವು ಬದುಕಿಕೊಳ್ಳುತ್ತೀರಿ. ಇಲ್ಲದೇ ಹೋದರೆ, ಅವರು ನಿಮ್ಮನ್ನು ತಿಂದು ಬಿಡುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ : ಅವರೇನು ಹೇಳುತ್ತಿದ್ದಾರೆಂದರೆ, ಈಗ ಕಾಂಗ್ರೆಸ್ ಒರಿಜಿನಲ್ ಇಲ್ಲ, ಕಾಂಗ್ರೆಸ್ ಸೆಕೆಂಡ್ಸ್ ಎಂದು ಹೇಳುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಎಸ್.ಎಸ್. ಪಾಟೀಲರು ಕಾಂಗ್ರೆಸ್ ಬಗ್ಗೆ ಮಾತನಾಡುತ್ತಿದ್ದಾರೆ. ಬೇರೆ ಯಾರೂ ಬೇಡ. ಕಾಂಗ್ರೆಸ್ ಈ ದೇಶದಲ್ಲಿ ಇದೆಯೋ ಇಲ್ಲವೋ ಮುಂದಕ್ಕೆ ಬರುತ್ತದೆಯೋ ಇಲ್ಲವೋ, ಅದಕ್ಕೆ ಶಕ್ತಿ ಇದೆಯೋ ಇಲ್ಲವೋ ಎಂಬ ಬಗ್ಗೆ ನಿಮ್ಮ ನಾಯಕರಾದ ಸಿಂಧ್ಯ ಸಾಹೇಬರು ಹೇಳಲಿ.

ಶ್ರೀ ಅರಗ ಜ್ಞಾನೇಂದ್ರ : ತಾವು ಹೋದಸಾರಿ ಇಲ್ಲಿ ಕುಳಿತಿದ್ದಿರಿ. ಎಲ್ಲರೂ ವಲಸೆ ಹೋಗಿ, ಹೋಗಿ ಆದೊಂದು ಪಕ್ಷವಾಗಿ, ನಾಯಕತ್ವಕ್ಕೆ ವಿದೇಶಿಯರನ್ನು ಕರೆದುಕೊಂಡು ಬಂದಿದ್ದಾರೆ. ಇದು ನಿಮ್ಮ ಅವಸ್ಥೆ.

ಅಧ್ಯಕ್ಷರು : ಪಾರ್ಟಿ ವಿಷಯ ಬೇಕಾಗಿಲ್ಲ, ಎ.ಪಿ.ಎಂ.ಸಿ. ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಡಿ.ಕೆ. ಶಿವಕುಮಾರ್ : ನಿಮ್ಮ ಮೂಲ ನಮಗೆ ಗೊತ್ತಿಲ್ಲವೇ.

ಶ್ರೀ ಎಸ್.ಎಸ್. ಪಾಟೀಲ್ : ಈ ದೇಶದಲ್ಲಿ ಕಾಂಗ್ರೆಸ್ ಇಲ್ಲವೆಂದು ನಾನು ಹೇಳಿದೆನಲ್ಲಾ ಅದಕ್ಕೆ ಸಮರ್ಥನೆ ಮಾಡಿಕೊಂಡು ಉತ್ತರ ಕೊಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನಾವೂ ಮೊದಲಿಗೆ ಕಾಂಗ್ರೆಸ್ಸಿಗರೇ. ಇದನ್ನು ಇಲ್ಲವೆಂದು ಹೇಳುವುದಿಲ್ಲ. ಕಾಂಗ್ರೆಸ್ ಒ ಆಯಿತು, ಕಾಂಗ್ರೆಸ್ ಆರ್ ಆಯಿತು. ಇಂದಿರಾ ಕಾಂಗ್ರೆಸ್, ದೇವರಾಜ ಅರಸು ಕಾಂಗ್ರೆಸ್ ಯು.ಜಡ್.ಎಫ್. ಎಲ್ಲಾ ಆಗಿಹೋಗಿಯಿತು. ಇವತ್ತು ಒರಿಜಿನಲ್ ಕಾಂಗ್ರೆಸ್ಸೇ ಇಲ್ಲ. ಇದನ್ನು ನಾನು ಹೇಳಿದ್ದು. ಯಾರು ಯಾರೋ ಕೂಡಿಕೊಂಡು ಒಂದಾಗಿದೆ ಈಗ. ಇವರದ್ದೂ ಹಾಗೆಯೇ ಆಗಿದೆ. ಇವರೂ ಕೆಟ್ಟರು, ಇವರದೂ ಹಾಳಾಗಿ ಹೋಯಿತು.

(ಗೊಂದಲ)

ಅಧ್ಯಕ್ಷರು : ನೋಡಿ, ಸಭೆಯಲ್ಲಿ ನಡೆಯಬೇಕಾಗಿರುವ ವಿಚಾರ ನಡೆಯುತ್ತಾ ಇಲ್ಲ. ಯಾವುದೋ ವಿಷಯ ನಡೆಯುತ್ತಾ ಇದೆ.

ಶ್ರೀ ಡಿ.ಆರ್. ಪಾಟೀಲ್ : ಅಧ್ಯಕ್ಷರೇ, ಈಗಿರುವುದು ಒರಿಜಿನಲ್ ಕಾಂಗ್ರೆಸ್ ಅಲ್ಲ ಒಪ್ಪುತ್ತೇನೆ. 1969 ಕ್ಕಿಂತ ಮೊದಲೇನು ಬರೀ ಪಾಟೀಲರು, ಕುಲಕರ್ಣಿಯವರ ಕೈಯಲ್ಲಿ ಕಾಂಗ್ರೆಸ್ ಇತ್ತಲ್ಲಾ, ಈಗ ಅದಲ್ಲ. ಈಗ ಗೌಡರ ಕೈಲಿಯೂ ಕಾಂಗ್ರೆಸ್ ಇದೆ, ವಾಲಿಕಾರರ ಕೈಯಲ್ಲೂ ಕಾಂಗ್ರೆಸ್ ಐತೆ. ಇದು ಅವರಿಗೆ ಸೇರಲಿಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಪಾಟೀಲರೇ, ವಿಷಯಕ್ಕೆ ಬನ್ನಿ. ನಮ್ಮ ಮುಂದೆ ಬೇಕಾದಷ್ಟು ಅಜೆಂಡಾ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ನಾವೂ ಆಡಳಿತ ನಡೆಸಿದವರು, ಸರಿಯಾಗಿಯೇ ಮಾತನಾಡ ಬೇಕಾಗುತ್ತದೆ. ಸರಿಯಾಗಿ ಸಾಕ್ಷ್ಯಾಧಾರಗಳನ್ನು ಕೊಡಬೇಕಾಗುತ್ತದೆ. ಅವುಗಳನ್ನು ಕೊಡಲು ನಮಗೆ ಟೈಮೇ ಕೊಡಲಿಲ್ಲ. ಆ ಕಾರಣದಿಂದ ಹೇಳುತ್ತಿದ್ದೇನೆ. ಈ ಕಾಂಗ್ರೆಸ್ ಏನೆಂದು ನಮಗೆ ಗೊತ್ತಿದೆ. ತಾವೇನು ಗೌಡರ ಕಾಂಗ್ರೆಸ್ ಎಂದು ಹೇಳಿದಿರಲ್ಲಾ, ಅದಲ್ಲ. ಊರಿನಲ್ಲಿ ನೀವು ಗೌಡರು, ಗೌಡರು ಮಾಡಿಕೊಂಡಿದ್ದೀರಿ. ಆದರೆ, ಅದು ಇದ್ದುದು ಖರೇ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಂಥ ಕಾಂಗ್ರೆಸ್ 1969 ರಲ್ಲಿ ಇತ್ತು. ತದನಂತರ, ಇದು ಕಾಂಗ್ರೆಸ್ ಅಲ್ಲ. ಇದು ಬಿ.ಜೆ.ಪಿ. ಅಲ್ಲ. ಇದು ದಳ ಅಲ್ಲ. ಎಲ್ಲಾ ಹದಗೆಟ್ಟು ಹೋಗಿದೆ. ಹದಗೆಟ್ಟ ಹೈದ್ರಾಬಾದ್....

ಶ್ರೀ ಡಿ.ಆರ್. ಪಾಟೀಲ್ : ನೀವು ಹದಗೆಟ್ಟಿದ್ದೀರಿ. ಅದನ್ನು ಒಪ್ಪಿಕೊಳ್ಳುತ್ತೀರಿ. ನಮ್ಮನ್ನು ಅದರಲ್ಲಿ ತುಳಿಯಬೇಡಿ.

ಶ್ರೀ ಎಸ್.ಎಸ್. ಪಾಟೀಲ್ : ನೀವು ಋಣಮೂಲ ಕಾಂಗ್ರೆಸ್ ಎಂದು ಜೆ.ಎಚ್. ಪಟೇಲರು ಹೇಳಿದ್ದರು. ಅದನ್ನು ತಾವು ನೆನೆಸಬೇಕು. ನಿಮ್ಮದು ಋಣ. ಅದು ತೃಣ ಮೂಲ. ಇವರದ್ದು ಹಣ ಮೂಲ. ನಾವು ರಣ ಮೂಲ. ಈ ಜನರಿಗೆ 1969 ರಿಂದ ಜನ ಅಧಿಕಾರ ಕೊಟ್ಟರು ಇವರ ಮೇಲೆ ನಂಬಿಕೆ ಇಟ್ಟು ಜನರ ಋಣ ತೀರಿಸುವುದಕ್ಕೆ ಆಗಲಿಲ್ಲ. ಈ ಮಾತನ್ನು ಜೆ.ಎಚ್. ಪಟೇಲರು ಹೇಳಿದ್ದರು. ಅದನ್ನು ನಾನು ತಮಗೆ ನೆನಪು ಮಾಡಿಕೊಟ್ಟೆ. ಕಾಂಗ್ರೆಸ್ ಇಲ್ಲ. ಕಾಂಗ್ರೆಸ್ ಎಂದು ಹೇಳುವುದಕ್ಕೆ ಹೋಗಬೇಡಿ. ನಾವೆಲ್ಲಾ ಒಂದು ನಮೂನೆಯಲ್ಲಿದ್ದೇವೆಂದು ಹೇಳಿಕೊಳ್ಳಿ. ಇವರಂತೂ ಭಾರಿ ತತ್ವ ಹೇಳುತ್ತಿದ್ದರು. ಯಾರ್ಯಾರನ್ನೋ ಸೇರಿಸಿಕೊಂಡು ಕೆಟ್ಟಿರಿ. ನಿಮ್ಮದೇ ಪಕ್ಷ ಇದ್ದಿದ್ದರೆ ಅಧಿಕಾರ ಬರುತ್ತಿತ್ತು ಅಥವಾ ಹೋಗುತ್ತಿತ್ತು. ನಿಮ್ಮ ಪಕ್ಷಕ್ಕೆ ಒಂದು ಕಿಮ್ಮತ್ತು ಇರುತ್ತಿತ್ತು ಅದು ಈಗ ಇಲ್ಲ. ಎಲ್ಲಾ ಹಾಳಾಗಿ ಹೋಯಿತು. ನೀವು ಪಕ್ಷಾಂತರಿಗಳಾಗಿ ಹೋದಿರಿ.

ಶ್ರೀ ವಿಶ್ವೇಶ್ವರ ಹೆಗಡೆ : ನಿಮ್ಮನ್ನು ಕೂಡಿಸಿಕೊಂಡಿದ್ದಕ್ಕೆ ನಾವು ಕೆಟ್ಟೆವು.

ಶ್ರೀ ಎಸ್.ಎಸ್. ಪಾಟೀಲ್ : ನಮ್ಮನ್ನು ಅಲ್ಲ, ಅವರನ್ನು ತೆಗೆದುಕೊಂಡಿರಿ. ಆ ಕಡೆ ಇದ್ದವರನ್ನು, ಈ ಕಡೆ ಇದ್ದವರನ್ನು ಕೂಡಿಸಿಕೊಂಡು ನೀವು ಹಾಳಾಗಿ ಹೋದಿರಿ. ಏನೇನೂ ಉಳಿಯಲಿಲ್ಲ. ನಾನು ಕಾಯ್ದೆ ಬಗ್ಗೆ ಮಾತನಾಡುತ್ತೇನೆ. ಇದರಲ್ಲಿ ಸರಳ ಬಹುಮತ ಎಂದು ಇಟ್ಟುಬಿಟ್ಟರೆ ಪ್ರತಿಯೊಂದು ಕಡೆ ಅನ್ಯಾಯವಾಗುತ್ತದೆ. ಇದು ಖಾಯಂ. ಇವನು ಬೇಡ ಎಂದು ಅಂದುಕೊಂಡರೆ ಒಬ್ಬರನ್ನು ಕೂರಿಸಿಕೊಂಡು ಸರಳ ಬಹುಮತ ಎಂದು ಮಾಡಿ ಕಿತ್ತು ಹಾಕುವುದಕ್ಕೆ ಅನುಕೂಲವಾಗುತ್ತದೆ. ಆ ಕಾರಣದಿಂದ ಇದರ ಬಗ್ಗೆ ಬಿಗಿ ಧೋರಣೆ ಬೇಡ. ನೀವು ಮೂರು ನಾಮಿನೇಷನ್ ತೆಗೆದು ಹಾಕಿದರೆ ಬಹುಮತ ಬಂದೇ ಬರುತ್ತದೆ. ಈಗ ಏನು ಸರಳ ಬಹುಮತ ಎಂದು ಇಟ್ಟಿದ್ದಾರೆ, ಇದರ ಜೊತೆಗೆ ಮತ್ತೊಂದು ಇದೆ. ಇದು ಬಹಳ ಅಪಾಯ. ತಾವು ನೋಡಿದಿರೋ ಇಲ್ಲವೋ ಗೊತ್ತಿಲ್ಲ. ಹಾಜರಿದ್ದ ಮಂದಿಯಲ್ಲಿ ಸರಳ

ಬಹುಮತ. 6 ಮಂದಿಯಲ್ಲಿ 4 ಮಂದಿ ಇದ್ದು ಇನ್ನುಳಿದವರು ಹೊರಗಡೆ ಇದ್ದರೂ ಆಯಿತು. ಹಿಂದೆ 2:3 ಇತ್ತು. ಈ ಬಗ್ಗೆ ವಿಚಾರ ಮಾಡಿ. ನಾನು ಮಾನ್ಯ ಕಾನೂನು ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಈ ಕಾಯ್ದೆ ಬಂದ ತಕ್ಷಣ ನಿಮ್ಮ ಎ.ಪಿ.ಎಂ.ಸಿ. ಗಳು ಬೀಳುತ್ತವೆ. ನಿಮ್ಮ ದಾವಣಗೆರೆ ಉಸ್ತುವಾರಿ ಸಚಿವರು ಇದ್ದಾರೆ. ಅವರನ್ನು ಕೇಳಿ ನಿಮ್ಮ ಪಾರ್ಟಿ ಅಧ್ಯಕ್ಷರು ಇದ್ದಾರಲ್ಲಾ, ಅವರು ಈ ಕಾಯ್ದೆ ಬಂದ ತಕ್ಷಣ ಬೀಳುತ್ತಾರೆ. ಆ ಕಾರಣದಿಂದ ದಯವಿಟ್ಟು ಈಗ ಏನು ಸರಳ ಬಹುಮತ ಎಂದು ಇದೆ ಇದನ್ನು ತೆಗೆಯಿರಿ, 2-3 ಬಹುಮತ ಇರಲಿ. ಆಮೇಲೆ ಹಾಜರಿದ್ದ ಸದಸ್ಯರು ಎಂದು ಹೇಳಬೇಡಿ ಒಟ್ಟು ಸದಸ್ಯರು ಎಷ್ಟು ಜನ ಇದ್ದಾರೆ ಅವರಿಗೆ ಬೇಕಾದರೆ ನೀವು 2:3 ಇಡಿ. ಆಮೇಲೆ ಮೂರು ಜನ ನಾಮಕರಣ ಸದಸ್ಯರು ಇದ್ದಾರಲ್ಲಾ ಅವರನ್ನು ಬಿಟ್ಟು ಈ ಅವಿಶ್ವಾಸ ನಿರ್ಣಯಕ್ಕೆ ಮತ ಮಾಡುವ ಹಕ್ಕು ಕೊಡಬೇಡಿ. ಇಲ್ಲಿ ಎ.ಪಿ.ಎಂ.ಸಿ. ಅಧ್ಯಕ್ಷರು ಇದ್ದಾರೆ. ಇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಇವರು ಸ್ವಾಯತ್ತತೆ ಕೊಡುತ್ತೇನೆಂದು ಹೇಳಿದ್ದಾರೆ. ಬಹಳ ಸಂತೋಷ. ಇಲ್ಲಿ ಎ.ಪಿ.ಎಂ.ಸಿ. ಅಧ್ಯಕ್ಷರಿದ್ದಾರೆ, ಅವರು ಶಾಸಕರೂ ಕೂಡ. ಅವರಿಗೆ ಎಷ್ಟು ಅಧಿಕಾರ ಇದೆ ಕೇಳಿ. ನಾನು ಒಂದು ಉದಾಹರಣೆ ಹೇಳುತ್ತೇನೆ. ಒಬ್ಬ ಎ.ಪಿ.ಎಂ.ಸಿ. ಅಧ್ಯಕ್ಷರನ್ನು ಏಕೆ ಇಡಬೇಕು? ಏನು ಕೆಲಸ? ಕೃಷಿ ಹುಟ್ಟುವಳಿ ಮಾರಾಟ ಸಮಿತಿ. ಮಾನ್ಯ ಅಧ್ಯಕ್ಷರೇ, ನಾನು ಇದ್ದಾಗ ರೈತ ಸಂಜೀವಿನಿ ಎಂಬ ಒಂದು ಕಾಯ್ದೆ ಮಾಡಿದೆವು. ರೈತರಿಗೆ ಒಳ್ಳೆಯದು ಆಗಲಿ ಎಂದು ಅವನು ಹೊಲದಲ್ಲಿ ಬಿದ್ದು ಏನಾದರೂ ಆದರೆ ಅವನಿಗೆ ದುಡ್ಡು ಕೊಡಬೇಕೆಂದು ಮಾಡಿದ್ದೇವೆ. ಆ ಎ.ಪಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರು ಕೂಡಿಕೊಂಡು ಅಲ್ಲಿ ಠರಾವು ಮಾಡಿ ಇಲ್ಲಿ ಡೈರೆಕ್ಟರ್‌ಗೆ ಬರಬೇಕಂತೆ. ಈ ಬಗ್ಗೆ ತಾವು ವಿಚಾರ ಮಾಡಿ. ಅಲ್ಲಿ ಒಂದು ಕಮಿಟಿ ಇದ್ದು ಎಲ್ಲಾ ಇದ್ದು ಒಬ್ಬ ರೈತ ಹೊಲದಲ್ಲಿ ಏನಾದರೂ ವ್ಯತ್ಯಾಸ ಆಗಿ ತೊಂದರೆ ಆದರೆ ಅವನು ಫೈಲ್ ಇಲ್ಲಿ ಬಂದು ಹೋಗುವಷ್ಟರಲ್ಲಿ ಅವನು ಅಲ್ಲಿ ಸತ್ತು ಹೋಗಿರುತ್ತಾನೆ. ಆಮೇಲೆ ಅಧಿಕಾರಿಗಳು ಹೇಗಿದ್ದಾರೆ ಎಂದು ನಾನು ಹೇಳುತ್ತೇನೆ. ಕೃಷಿ ಜಮೀನಿನಲ್ಲಿ ಉಳುಮೆ ಮಾಡುವಾಗ ಬಿತ್ತನೆ ಮಾಡುವಾಗ, ಕಳೆ ತೆಗೆಯುವಾಗ, ಬೆಳೆಗಳಿಗೆ ಗೊಬ್ಬರ ಔಷಧಿ ಹಾಕುವಾಗ ಕಟಾವು ಮಾಡುವಾಗ, ಮೆದೆ ಹಾಕುವಾಗ ಹಾಗೂ ಕಣದಲ್ಲಿ ಉತ್ಪನ್ನಗಳನ್ನು ಒಕ್ಕಲು ಮಾಡುವಾಗ, ಗಾಡಿಗೆ, ಲಾರಿಗೆ ಟ್ರ್ಯಾಕ್ಟರ್‌ಗೆ ಇತ್ಯಾದಿ ವಾಹನಗಳಿಗೆ ಉತ್ಪನ್ನವನ್ನು ಹೇರುವಾಗ ಏನಾದರೂ ತೊಂದರೆ ಆದರೆ ಪರಿಹಾರ ಕೊಡಬೇಕೆಂದು ಇದೆ. ಅಧಿಕಾರಿಗಳು ಹೇಗೆ ರಿಜೆಕ್ಟ್ ಮಾಡುತ್ತಾರೆ ಎನ್ನುವುದಕ್ಕೆ ನಾನು ಹೇಳುತ್ತೇನೆ. ಯಾವ ಡೈರೆಕ್ಟರ್‌ನ್ನು ಕೂರಿಸಿದ್ದೀರಿ ಅವರನ್ನು ಸ್ವಲ್ಪ ಕೇಳಿ. ಇಂತಹ ಕಾನೂನುಗಳನ್ನು ತಿದ್ದುಪಡಿ ಮಾಡಿ. ಅವರಿಗೆ ಏನಾದರೂ ಅಧಿಕಾರ ಕೊಡಿ. ಇಲ್ಲಿ ಒಂದು ಅರ್ಜಿಯನ್ನು ತಿರಸ್ಕಾರ ಮಾಡಿದ್ದನ್ನು ಹೇಳುತ್ತೇನೆ. ಮುಂಡರಗಿಯ ಹಾಲಪ್ಪ ಬಸಪ್ಪ ಭತ್ತದ ಹುಲ್ಲು ತರಲು ಹೋದಾಗ ಬಂಡಿಯಿಂದ ಬಿದ್ದು ಅಂಗವಿಕಲತೆ. ಇದಕ್ಕೆ ಕೊಡುವುದಕ್ಕೆ ಬರುವುದಿಲ್ಲ. ಇದನ್ನು ತಿರಸ್ಕಾರ ಮಾಡಿದ್ದಾರೆ. ಇದಕ್ಕೆ ಏನು ಅಂತರ ಇದೆ; ನಿಮ್ಮ ಡೈರೆಕ್ಟರ್‌ನ್ನು ಕರೆಸಿ ಮಾತನಾಡಿ. ಇಂತಹ 50 ಕೇಸ್ ಬಂದಿವೆ. ಅವನಿಗೆ ಹೊಲದಲ್ಲಿ ಅಪಘಾತ ಆಗುತ್ತದೆ. ಆಮೇಲೆ ಅವನು ಆಸ್ಪತ್ರೆಗೆ ಹೋಗಿ ಅಲ್ಲಿ ಸಾಯುತ್ತಾನೆ. ಅದಕ್ಕೆ ಪರಿಹಾರ ಕೊಡುವುದಿಲ್ಲ. ಇಂತಹ ಅಧಿಕಾರಿಗಳನ್ನು ಏಕೆ ಇಟ್ಟುಕೊಂಡಿದ್ದೀರಿ. ತಾವು ಎ.ಪಿ.ಎಂ.ಸಿ. ಅಧ್ಯಕ್ಷರು ಇಂತದ್ದನ್ನು ಹೇಳಬೇಕು. ಅಲ್ಲಿ ಒಂದು ಬೋರ್ಡ್ ಇದೆ ಅದಕ್ಕೆ ಯಾವ ಅಧಿಕಾರ ಇಲ್ಲ. 10 ರೂಪಾಯಿ ಖರ್ಚು ಮಾಡಬೇಕಾದರೆ

ಇವರಿಗೆ ಬರೆಯಬೇಕು. ಇಂಥಾದ್ದಕ್ಕೆ ತಿದ್ದುಪಡಿ ತನ್ನಿ ನಿಮ್ಮ ಹೆಸರು ಉಳಿಯುತ್ತದೆ. ಇಲ್ಲಿ ಏನಾಗಿದೆ ಅಧಿಕಾರಿಗಳು ದುಡ್ಡು ತೆಗೆದುಕೊಂಡು ಮಾಡುತ್ತಾರೆ. ನೂರು ರೂಪಾಯಿ ಕೊಟ್ಟವನಿಗೆ ಮಂಜೂರು ಮಾಡುವುದು. ನಮ್ಮ ಚಾರಿಟಿ ಕಮೀಷನರ್ ಆಫೀಸಿನಲ್ಲಿ ನಡೆದಿದೆ ನೋಡಿ 10 ಪರ್ಸೆಂಟ್ ಹಣ ಕೊಟ್ಟರೆ ಕೊಡುತ್ತಾನೆ. ಬೆಳಗಾಂ ಡಿವಿಜನ್‌ನಲ್ಲಿ. ದೇವರ ದುಡ್ಡು ಬಿಡುವುದಿಲ್ಲ ನೋಡಿ. ದೇವರ ದುಡ್ಡು ತಿನ್ನುವುದಕ್ಕೆ ಶುರು ಮಾಡಿದ್ದಾರೆ. ಇಂತಹ ಕಾಲ ಬಂದಿದೆ. ನಾನು ಈ ಬಗ್ಗೆ ಎಲ್ಲಾ ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ. ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಿ. ಹೊಲದಲ್ಲಿ ಬಿದ್ದು ಸತ್ತಿದ್ದಾನೆ ಅಂದರೆ ಆ ರೀತಿ ಇಲ್ಲ ಅವನು ಆಸ್ಪತ್ರೆಗೆ ಹೋಗಿ ಸತ್ತಿದ್ದಾನೆ ಎಂದು ರಿಜೆಕ್ಟ್‌ಮಾಡಿದ್ದಾರೆ. ಇದರಲ್ಲಿ ಏನು ತಪ್ಪು. ಇಂತದ್ದು ಹಲವಾರು ಇವೆ. ಆಮೇಲೆ ಆ ಎ.ಪಿ.ಎಂ.ಸಿ. ಯಲ್ಲಿ ಯಾವ ಅಧಿಕಾರ ಇಲ್ಲ. ಹೆಸರಿಗೆ ಮೆಂಬರ್ಸ್ 10 ರೂಪಾಯಿ ಖರ್ಚು ಮಾಡಬೇಕಾದರೆ ಇಲ್ಲಿಗೆ ಕಳುಹಿಸಿಕೊಡಬೇಕು. ಹಿಂದೆ ನೀವೇಕೆ ಮಾಡಲಿಲ್ಲ ಎಂದು ಕೇಳಬೇಡಿ. ಈಗ ನಿಮ್ಮ ಗಮನಕ್ಕೆ ಬಂದ ಮೇಲಾದರೂ ಮಾಡಬೇಕಲ್ಲಾ ಮಾನ್ಯ ಡಿ.ಆರ್. ಪಾಟೀಲರೆ, ತಾವು ಮಾತನಾಡಬೇಕು. ಇದುಸರಿ ಅಂದ್ರೆಸರಿ ಎಂದು ಮಾತನಾಡಿ. ತಾವು ಅಧ್ಯಕ್ಷರಾಗಿದ್ದವರು. ಇಲ್ಲಿ ಈಗ ಎಂ.ಎಲ್.ಎ. ಆಗಿದ್ದೀರಿ. ಬಹಳ ಅನುಭವ ಇದ್ದವರು ತಾವು. ಈ ಬಗ್ಗೆ ತಾವು ಹೇಳಬೇಕು. ಹೇಳಿ ತಿದ್ದುಪಡಿ ತರಬೇಕು. ಇನ್ನು ಹಲವು ಅಂಶಗಳನ್ನು ಹೇಳಿದ್ದೀರಿ ಅದು ಅಡ್ಡಿ ಇಲ್ಲ. ಈ ಎರಡು ಅಂಶಗಳು ಇದರಲ್ಲಿ ಪ್ರಾಮುಖ್ಯವಾದವುಗಳು. ತಾವು ಎರಡು ವರ್ಷ ಎಂದು ಇದ್ದಿದ್ದು ಒಂದು ವರ್ಷ ಮುಂದುವರಿಸಬೇಕೆಂದು ಇದೆಯೆಲ್ಲಾ ಒಂದು ವರ್ಷ ಮುಂದುವರಿಸಬೇಕೆಂದು ಇಟ್ಟಿದ್ದು ತಪ್ಪು. ಎರಡು ವರ್ಷದಲ್ಲಿ ಚುನಾವಣೆ ಆಗಬೇಕು. ನಾವು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿದ್ದೇವೆ. ಆಮೇಲೆ ಸರಳ ಬಹುಮತ ಎಂದು ಏನು ಇಟ್ಟಿದ್ದೀರಿ ಅದನ್ನು ತೆಗೆಯಿರಿ. ಮತ್ತು ಹಾಜರಿದ್ದ ಸದಸ್ಯರಲ್ಲಿ ಅಂತ ಏನು ಹೇಳಿದ್ದೀರಿ ಅದನ್ನು ತೆಗೆಯಿರಿ. ಮೊದಲು ಇದ್ದಂತೆ 2:3 ಬಹುಮತ ಎಂದು ಇರಲಿ ಮತ್ತು ಇವೆಲ್ಲವೂ ಎ.ಪಿ.ಎಂ.ಸಿ. ಯಲ್ಲಿ ಮಂಜೂರು ಆಗುವಂತೆ ಎ.ಪಿ.ಎಂ.ಸಿ.ಗೆ ಕೆಲವು ಅಧಿಕಾರ ಕೊಟ್ಟು ತಿದ್ದುಪಡಿ ತರಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೇ, ಎ.ಪಿ.ಎಂ.ಸಿ. ಕಾನೂನಿಗೆ ತಿದ್ದುಪಡಿ ತಂದಿರುವುದನ್ನು ನಾನು ಸ್ವಾಗತಿಸಿ ಎರಡು ವಿಚಾರಗಳನ್ನು ಹೇಳಬಯಸುತ್ತೇನೆ. ಅಧಿಕಾರದಲ್ಲಿ ಇರುವವರು ಯಾವಾಗಲೂ ಮೆಜಾರಿಟಿ ವಿಶ್ವಾಸವನ್ನು ಕಳೆದುಕೊಂಡರು ಅಂದರೆ ಅವರು ನೈತಿಕವಾಗಿ ಕುರ್ಚಿಯನ್ನು ತ್ಯಾಗ ಮಾಡಬೇಕು. ಆ ಮಟ್ಟದ ನೈತಿಕ ಮಟ್ಟ ನಮ್ಮ ಸಾರ್ವಜನಿಕ ಜೀವನದಲ್ಲಿ ಇಲ್ಲದ್ದಕ್ಕೆ ನೀವು ಮೆಜಾರಿಟಿ ಕಳೆದುಕೊಂಡಿರಿ ಅಂದರೆ ಅವರನ್ನು ತೆಗೆಯಬೇಕು ಎನ್ನುವುದಕ್ಕೆ ಕಾನೂನು ತರುವಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ನಮ್ಮ ದೇಶದಲ್ಲಿ ನಿರ್ಮಾಣವಾಗಿದೆ. ಅವರು ಅವಿಶ್ವಾಸ ಸೂಚನೆಯೊಳಗೆ ನಾಮಿನೇಷನ್ ಸದಸ್ಯರಿಗೆ ವೋಟಿಂಗ್ ತರಬಾರದೆಂದು ಹೇಳಿದರು. ನಮ್ಮ ಸರ್ಕಾರ ಇದ್ದಾಗ ನಾಮಿನೇಷನ್ ಮಾಡುವುದನ್ನೇ ಕೈ ಬಿಟ್ಟಿತ್ತು. ಕಾನೂನಿನಲ್ಲಿದ್ದ ಅವಕಾಶವನ್ನು ತೆಗೆದುಹಾಕಿತ್ತು. ಮುಂದೆ ಎಸ್.ಎಸ್. ಪಾಟೀಲರ ಸರ್ಕಾರ ಬಂದು ಮೇಲೆ ಚುನಾವಣೆಯೊಳಗೆ ಸೋತ ಮೇಲೆ ನಾಮಿನೇಷನ್ ಮಾಡಿದರು. ನಮ್ಮ ಕಡೆ ಒಂದು ಗಾದೆ ಮಾತಿದೆ: ಸೂಳೆ ಮುಪ್ಪಾಗಿ ಜೋಗಿತಿ ಆದಳು ಅಂತ. ಅಧಿಕಾರ ಹೋದಮೇಲೆ ಇವರಿಗೆ ಬುದ್ಧಿ ಬರುತ್ತದೆ, ಇದ್ದಾಗ ಯಾವ ಸದ್ಬುದ್ಧಿ ಬರುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಅದಕ್ಕಾಗಿಯೇ ನಾವು ಮಾಡುತ್ತೇವೆ ಎಂದು ಹೇಳಿಬಿಡಿ. ಮುಗಿದೇಹೋಯಿತು. ನೀವು ಮಾಡಿದಿರಿ ನಾವು ಮಾಡುವುದಿಲ್ಲ ಅಂದರೆ ಮುಗಿದುಹೋಯಿತು. ನಾವು ಮಾಡಿದಂತೆ ನೀವು ಮಾಡುವವರಲ್ಲ ಅಂತ ಮಾಡಿಬಿಡಿ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) : ಇಂಗ್ಲಿಷಿನಲ್ಲಿ ಒಂದು ಹೇಳಿಕೆ ಇದೆ. ಡೆವಿಲ್ ಕೋಟಿಂಗ್ ದಿ ಸ್ಕ್ರಿಪ್ಟ್ಸ್ ಅಂತ, ಕನ್ನಡದಲ್ಲಿ ಪಿಶಾಚಿಯಿದೆಯಲ್ಲಾ ಅದು ಬುದ್ಧಿ ಮಾತು ಹೇಳಿತು ಅಂತ. ಹಿಂದೆ ಮಾಡಿದ್ದನ್ನು ಈಗ ಸಮರ್ಥನೆ ಮಾಡುತ್ತಿದ್ದಾರಲ್ಲಾ ಚುನಾವಣೆಯಲ್ಲಿ ಸೋತು, ಆಮೇಲೆ ನಾಮಿನೇಷನ್ ಮಾಡಿಕೊಂಡು, ಯಾರ್‍ಯಾರನ್ನು ಎಲ್ಲೆಲ್ಲಿ ತರಬೇಕು ಅಂದುಕೊಂಡು ಈಗ ನೀವು ತಂದರೆ ತಪ್ಪು ಅಂತಾರಲ್ಲಾ, ಅದರ ಅವಧಿಯನ್ನೂ ವಿಸ್ತರಿಸಿಕೊಂಡು, ಅದನ್ನು ಅವರು ಡೆವಿಲ್ ಕೋಟಿಂಗ್ ದಿ ಸ್ಕ್ರಿಪ್ಟ್ಸ್ ಎಂದು ಹೇಳುತ್ತಿರುವುದು.

\+ ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಅಧ್ಯಕ್ಷರೇ, ಇದು 1966 ರಲ್ಲಿ ತಂದದ್ದು. ಆಗ ಕೆ.ಹೆಚ್. ಪಾಟೀಲರು, ಎಚ್.ಕೆ. ಪಾಟೀಲರು, ರಂಗನಾಥರು ಇಂತಹ ಹೇಮಾಹೇಮಿಗಳು ಸಹಕಾರ ಸಚಿವರಾಗಿದ್ದಾಗ ಆದದ್ದು, ಆಗ ತಂದ ಅವಧಿಯೇ ಎರಡು ವರ್ಷ, ಈಗ ಅದನ್ನು 4 ವರ್ಷಕ್ಕೆ ಮಾಡಿಕೊಂಡು ಬಂದಿರುವುದು ತಮ್ಮ ಅವಧಿಯಲ್ಲಿ. ಅದನ್ನು ಡಿ.ಆರ್. ಪಾಟೀಲರು ಸಮರ್ಥನೆ ಮಾಡುತ್ತಿದ್ದಾರಲ್ಲಾ ಎಂದು ನಾನು ಹೇಳುವುದು. ಅವರು ಎ.ಪಿ.ಎಂ.ಸಿ. ಅಧ್ಯಕ್ಷರೂ ಆಗಿ ಅದನ್ನು ಸರಿಯೆಂದು ಹೇಳುತ್ತಿದ್ದಾರಲ್ಲಾ ಎಂದು ನೋವಾಗುತ್ತಿದೆ.

ಶ್ರೀ ಡಿ.ಆರ್. ಪಾಟೀಲ್ : ಕಾನೂನಿನಲ್ಲಿ ಮೊದಲನೇ ಕಮಿಟಿ ನಾಮಿನೇಟ್ ಮಾಡುತ್ತಾರೆ. ಅವರಿಗೆ ಎರಡೇ ವರ್ಷ ಅಧಿಕಾರ ಇತ್ತು ಎಂದರೆ ಏನೇನು ಮಾಡಬೇಕೆಂದು ಅಂದು ಕೊಳ್ಳುತ್ತಾರೋ ಆ ಮಾರ್ಕೆಟ್‌ನಲ್ಲಿ ಅದಕ್ಕೆ ಅವಕಾಶವೇ ಸಿಗುವುದಿಲ್ಲ, ಟೈಂ ಬೇಕಾಗುತ್ತದೆ. ಆದಕ್ಕಾಗಿ ಮೂರು ನಾಲ್ಕು ವರ್ಷ ಅವರಿಗೆ ಟೈಮಿರಲಿ ಅಂತ, ಒಂದು ಒಳ್ಳೆ ತಳಪಾಯ ಮುಂದಿನ ಆಡಳಿತಕ್ಕೆ ಹಾಕಿಹೋಗಲಿ ಎಂದು ನಮ್ಮ ಸರ್ಕಾರ ಮಾಡುತ್ತಿದೆ. ಅದು ತಪ್ಪು ಎಂದು ಅನ್ನಬೇಡಿರಿ. ಇನ್ನೂ ಕೇಳುವುದು ಕೇಳುತ್ತೀರಿ, ನಾಮಿನೇಟೆಡ್ ಬಾಡೀನೇ ಬೇಡ ಇಮ್ಮೀಡಿಯೇಟ್ ಎಲೆಕ್ಟೆಡ್ ಬಾಡೀನೆ ಬರಬೇಕು ಎಂದು ಹೇಳಿದ್ದರೆ ಒಪ್ಪಬಹುದಾಗಿತ್ತು. ಆದರೆ ನಿಮಗೆ ನಾಮಿನೇಷನ್ ಇರಬೇಕು. ಏಕೆಂದರೆ ಅದರ ಸವಿಯನ್ನೆಲ್ಲಾ ಉಂಡಿದ್ದೀರಿ ನೋಡಿ, ಆದರೆ ಟೈಮಿಷ್ಟೇ ಇರಬೇಕೆಂದು ಏನು ಹೇಳುತ್ತಿದ್ದೀರಿ ಅದು ಸರಿಯಲ್ಲ. ಚುನಾಯಿತ ಮಂಡಲಿಯನ್ನೇ ತರುವ ಬಗ್ಗೆ ವಿಚಾರ ಮಾಡಿರಿ ಅಂದರೆ ಮುಂದೆ ಅವಕಾಶ ಬಂದಾಗ ಅದನ್ನು ನಾವು ವಿಚಾರ ಮಾಡುತ್ತೇವೆ. ಇನ್ನು ಎ.ಪಿ.ಎಂ.ಸಿ.ಗೆ ಹೆಚ್ಚು ಅಧಿಕಾರ ಕೊಡಬೇಂದಿರಲ್ಲಾ, ಅದಕ್ಕೆ ನಾನು ಸಹಮತ ವ್ಯಕ್ತಮಾಡುತ್ತೇನೆ. ನಮ್ಮ ಪಾರ್ಲಿಮೆಂಟೆರಿ ಮಿನಿಸ್ಟರಿಗೆ, ನಮ್ಮ ಚೀಫ್ ಮಿನಿಸ್ಟರಿಗೆ ನಮ್ಮ ಪಾರ್ಟಿಯೊಳಗೆ ಆದನ್ನು ತಂದು ಜಿಲ್ಲಾಪಂಚಾಯಿತಿ ತಾಲ್ಲೂಕು ಪಂಚಾಯಿತಿಗಳಿಗೆ ಹೇಗೆ ಅಧಿಕಾರ ಕೊಟ್ಟೆವೋ ಹಾಗೆ ಎ.ಪಿ.ಎಂ.ಸಿ.ಗೂ ಅಧಿಕಾರ ಕೊಡುವಂತಹ ಪ್ರಸ್ತಾವನೆ ನಾವು ಮುಂದಿನ ವಿಧಾನ ಸಭೆಯೊಳಗೆ ತರುತ್ತೇವೆ. ಈಗಿರುವುದಂತೂ ಸರಿಯಾಗಿದೆ. ಯಾವನು ಮೆಜಾರಿಟಿ ಕಳೆದುಕೊಂಡಿರುತ್ತಾನೆ, ಅವ ಅಧಿಕಾರ ಬಿಡಬೇಕು, ಇದು ತತ್ವರೀ ಅಷ್ಟೆ. ಇದಕ್ಕೆ ತಾವೆಲ್ಲರೂ ಬೆಂಬಲ ಕೊಡುವುದು ಒಳ್ಳೆಯದು.

\+ ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲ) : ಅಧ್ಯಕ್ಷರೇ ನಾನು ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ತಿದ್ದುಪಡಿಯನ್ನು ತೀವ್ರವಾಗಿ ವಿರೋಧಿಸುತ್ತಾ, ವಿರೋಧಿಸಬೇಕಾದ ಇದರಲ್ಲಿನ ಪ್ರಮುಖ ಅಂಶದ ಬಗ್ಗೆ ನಮ್ಮ ನಾಯಕರು ಮಾತನಾಡಿದ್ದಾರೆ. ಸರ್ಕಾರ ಈ ತಿದ್ದುಪಡಿ ತರುವಂಥ ಉದ್ದೇಶವೇ ದುರುದ್ದೇಶ. ಇದನ್ನು ಸದುದ್ದೇಶದಿಂದ ತಂದಿದ್ದರೆ ನಾನು ವಿರೋಧಿಸುತ್ತಿರಲಿಲ್ಲ. ಕಳೆದ 6 ವರ್ಷದಿಂದ ಎ.ಪಿ.ಎಂ.ಸಿ. ಯನ್ನು ಹತ್ತಿರದಿಂದ ಶಾಸಕನಾಗಿ ನೋಡಿದ್ದೇನೆ, ಅನೇಕ ಹಿರಿಯರ ಅನುಭವವನ್ನೂ, ಇಂದಿನ ಸಾರ್ವಜನಿಕ ಜೀವನವನ್ನೂ ನೋಡಿದ್ದೇವೆ. ನಾವೇ ರೈತರು ಕೊಟ್ಟಿರುವ ಟ್ಯಾಕ್ಸ್ ಎ.ಪಿ.ಎಂ.ಸಿ. ಯಲ್ಲಿ ಲಕ್ಷಾಂತರ ರೂ. ಬಿದ್ದಿದ್ದರೂ ಅವರು ನಮ್ಮೂರ ಕೆರೆ ರಿಪೇರಿ ಮಾಡಿ ಕೊಡಿರಪ್ಪ ಅಂದರೆ ಅದನ್ನು ಮಾಡುವುದಿಲ್ಲ. ಮಾಡುವುದಕ್ಕೆ ಅವಕಾಶ ಕೊಡಿ ಎಂದು ಬೊಬ್ಬೆ ಹೊಡೆದುಕೊಂಡೆವು, ಕೊಡುವುದಿಲ್ಲ. ಎ.ಪಿ.ಎಂ.ಸಿ.ಗೆ ಸಾಗಿಸುವ ನಮ್ಮೂರ ರಸ್ತೆಯಿದೆಯಲ್ಲಾ ಅದನ್ನು ನಾವು ಬೆಳೆದ ಬೆಳೆಯನ್ನು ಎ.ಪಿ.ಎಂ.ಸಿ.ಗೆ ಮಾರಿ ಅಲ್ಲಿ ಸಂಗ್ರಹವಾದ ತೆರಿಗೆ ಹಣದಿಂದ ಅದನ್ನು ರಿಪೇರಿ ಮಾಡಿಕೊಡಿ ಅಂದೆವು, ಹಳ್ಳಿ ರಸ್ತೆಗಳನ್ನೆಲ್ಲಾ ಹೇಳೋರಿಲ್ಲ ಕೇಳೋರಿಲ್ಲ, ಪಿ.ಡಬ್ಲ್ಯೂ.ಡಿ.ಜೆಡ್.ಪಿ. ಗಂತೂ ಜೀವಾನೇ ಇಲ್ಲ. ಆಗಲೂ ಕೊಡಲಿಲ್ಲ. ಹಾಗೇ ಗೋಡೋನ್‌ಗಳು. ಎ.ಪಿ.ಎಂ.ಸಿ. ಯಲ್ಲಿ ಹಣವಿದೆ, ಸಾಲ ತೆಗೆದುಕೊಂಡು ಯಾರೂ ಎ.ಪಿ.ಎಂ.ಸಿ. ನಡೆಸುತ್ತಿಲ್ಲ. ನಾವು ಬೆಳೆದ ಮಾಲು ಇಟ್ಟುಕೊಳ್ಳಲಿಕ್ಕೆ ಗೊಡೋನು ಕಟ್ಟಿಕೊಳ್ಳಲು 3, 4, 5 ಲಕ್ಷ ಕೊಡಿ ಅಂದರೆ ಇವರಿಗೆ ಅವಕಾಶವಿಲ್ಲ ಅಂದರೆ ರೈತರಿಗೆ ಬೇಕಾದಷ್ಟು ಮಾಡಲು ಏನೂ ಅವಕಾಶವಿಲ್ಲ. ಹೋಗಲಿ ನಾವು ಬೆಳೆದ ಬೆಳೆಯನ್ನು ಪೇಟೆಗೊಯ್ಯಲು ಒಂದು ವಾಹನದ ವ್ಯವಸ್ಥೆ ಮಾಡಿಕೊಡಿರಿ ಅಂದರೆ ಅಲ್ಲಿ ವ್ಯಾಪಾರಸ್ಥರಿದ್ದಾರಲ್ಲ ಅವರಿಗಾಗಿ ವಾಹನ ಓಡಾಡುತ್ತದೆ. ಹಳ್ಳಿಗಳಿಗೆ ಬರುವುದಿಲ್ಲ ಅವು. ಇನ್ನೂ ಒಂದು ಹೆಚ್ಚಿನ ವಾಹನ ಮಾಡಿಕೊಡಿ, ಇಲ್ಲಾಂದರೆ ರೈತರ ಶೋಷಣೆಯಾಗುತ್ತದೆ ಅಂದರೆ ಅದಕ್ಕೂ ಇವರಿಗೆ ಮನಸ್ಸಿಲ್ಲ. ಎ.ಪಿ.ಎಂ.ಸಿ. ಸಭೆಗೆ ನಮಗೆ ಆಹ್ವಾನವೂ ಇಲ್ಲ, ಆದರೆ ನಾವು ಜಿಲ್ಲಾಪಂಚಾಯಿತಿ, ತಾಲ್ಲೂಕು ಪಂಚಾಯ್ತಿ ಗ್ರಾಮಪಂಚಾಯ್ತಿ ಸಭೆಗಳಿಗೆಲ್ಲಾ ಶಾಸಕರು ಎಂದು ನಮ್ಮನ್ನು ಕರೆಯುತ್ತಾರೆ, ಆದರೆ ಎ.ಪಿ.ಎಂ.ಸಿ. ಸಭೆಗಳಿಗೆ ನಮ್ಮನ್ನು ಕರೆಯುವುದಿಲ್ಲ, ಹೇಳುವುದೂ ಇಲ್ಲ, ಕೇಳುವುದೂ ಇಲ್ಲ. ಆ ಎ.ಪಿ.ಎಂ.ಸಿ. ನಮ್ಮಿಂದಲೇ ಹುಟ್ಟಿದ್ದು, ಈ ಗೌರವಾನ್ವಿತ ಸಭೆಯ ಸದಸ್ಯರನ್ನು ಕರೆಯುವುದೇ ಇಲ್ಲ.

ಅಧ್ಯಕ್ಷರು : ಮುಂದಿನ ಅಧಿವೇಶನದಲ್ಲಿ ಒಂದು ತಿದ್ದುಪಡಿ ತನ್ನಿ.

4.20 ಪಿ.ಎಂ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾಡೋಣ. ಇವರಿಗೆ ಪ್ರಾಮಾಣಿಕವಾಗಿ ಎ.ಪಿ.ಎಂ.ಸಿ. ಗಳನ್ನು ಸುಧಾರಿಸಬೇಕು, ಆ ಮೂಲಕ ರೈತರಿಗೆ ಒಳ್ಳೆಯದು ಮಾಡಬೇಕೆಂಬ ಬಗ್ಗೆ ಕಾಳಜಿಯಿಲ್ಲ ಅನ್ನುವುದಕ್ಕೆ ಈ ಮಾತು ಹೇಳುತ್ತಿದ್ದೇನೆ ನಾನು. ಇಷ್ಟೇ ಅಲ್ಲ, ನಮ್ಮ ಎ.ಪಿ.ಎಂ.ಸಿ.ಗಳ ಹಣವನ್ನು ಕೃಷ್ಣ ಜಲ ಭಾಗ್ಯ ನಿಗಮಕ್ಕೆ ಒಯ್ಯುತ್ತಾರೆ. ಇವರೇ ಸ್ವಯಂ ರೈತರ ಆವರ್ತನಿಧಿ ಮಾಡುವುದಕ್ಕಾಗುವುದಿಲ್ಲ, ಅದಕ್ಕಾಗಿ ಎ.ಪಿ.ಎಂ.ಸಿ.ಯಿಂದ ತೆಗೆಯುತ್ತಾರೆ. ನಾನು ಹೇಳುವುದು ರೈತರ ಪ್ರಾಥಮಿಕ ಅಗತ್ಯತೆಗಳೇನಿವೆಯೋ ಅದಕ್ಕೆ ಈ ಹಣ ಬಳಸಿ ಅದರೆ ಅದರ ಬದಲು

ತಮ್ಮ ರಾಜಕೀಯ ಉದ್ದೇಶಕ್ಕೋಸ್ಕರ ಇಲ್ಲಿ ಸಿಂಪಲ್ ಮೆಜಾರಿಟಿಗೆ ಮೂವ್ ಮಾಡುವುದು, ಅವಧಿಯನ್ನು ವಿಸ್ತರಣೆ ಮಾಡಿಕೊಳ್ಳುವುದು, ಇಂತಹ ತಿದ್ದುಪಡಿಗಳನ್ನೆಲ್ಲಾ ನಾವು ಹೇಗೆ ಒಪ್ಪಿಕೊಳ್ಳಬೇಕು? ಹಾಗಾಗಿ ಇದು ರಾಜಕೀಯ ಉದ್ದೇಶಕ್ಕೆ ತಂದಿರುವ ತಿದ್ದುಪಡಿ ಇರುವುದರಿಂದ ಇದನ್ನು ತೀವ್ರವಾಗಿ ವಿರೋಧಿಸುತ್ತೇವೆ; ಸದನದಲ್ಲಿ ಇದನ್ನು ಪಾಸು ಮಾಡಬಾರದೆಂಬ ಆಗ್ರಹ ನಾನು ಮಾಡುತ್ತಿದ್ದೇನೆ. ಬದಲಿಗೆ ಎ.ಪಿ.ಎಂ.ಸಿ. ಮೂಲಕ ರೈತರಿಗೆ ನಿಜವಾಗಿ ಒಳ್ಳೆಯ ಕೆಲಸ ಆಗುವಂತಹ ತಿದ್ದುಪಡಿಗಳನ್ನು ತನ್ನಿರಿ, ಈಗ ಹೇಳಿದರಲ್ಲಾ, ರೈತಸಂಜೀವಿನಿ ಬಗ್ಗೆ, ಅದು ಮಾಡಿಯೂ ಉಪಯೋಗವಿಲ್ಲದಂತಾಗುತ್ತಿದೆ ಎಂದು; ಜನಪರವಾದ ತಿದ್ದುಪಡಿ ತಂದು ಅಂತಹ ಕೆಲಸ ಮಾಡಿ. ರೈತರು ಕೊಟ್ಟ ತೆರಿಗೆ ಹಣದಿಂದ ನಿಮ್ಮ ಎ.ಪಿ.ಎಂ.ಸಿ. ಅಧಿಕಾರಿಗಳು ಡಾಂಬರು ಮಾಡಿದಲ್ಲೇ ಡಾಂಬರು ಮಾಡುವುದಕ್ಕೆ, ಕಮಾನು ಮಾಡುವುದಕ್ಕೆ, ಕಾಂಪೌಂಡ್ ಕಟ್ಟುವುದಕ್ಕೆಂದು ಕಟ್ಟಿರುವ ಹಣವಲ್ಲ. ಎ.ಪಿ.ಎಂ.ಸಿ. ಅಧಿಕಾರಿಗಳು ರೈತರ ಹಣ ಹೇಗೆ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆಂದರೆ ಮಾರ್ಕೆಟ್‌ಯಾರ್ಡಿನಲ್ಲಿ ಒಳ್ಳೊಳ್ಳೆ ರಸ್ತೆಗಳಿವೆ, ಇವರಿಗೆ ಅವಕಾಶವಿದೆ, ವರ್ಷವರ್ಷವೂ ಒಂದೊಂದು ಕೋಟಿ, ಲಕ್ಷಗಟ್ಟಲೆ ರೂ. ಹೋಯಿತು ಯಾವನೋ ಅಧಿಕಾರಿ ಬಂದವನಿಗೆ ಕಾಪೌಂಡ್ ಎತ್ತರ ಒಂದು ಫೂಟು ಎತ್ತರ ಕಡಿಮೆ ಇದೆ ಅನ್ನಿಸಿತು, ಮೂರು ಫೂಟು ಎತ್ತರ ಮಾಡಿದ. ಮತ್ತೊಬ್ಬ ಅಧಿಕಾರಿಗೆ ಅನ್ನಿಸಿತು ಇನ್ನೂ ಕಳ್ಳ ಹಾರಬಹುದು ಅಂತ, ಅವನು ಕಾಂಪೌಂಡ್ ಎತ್ತರ ಇನ್ನೂ ಎರಡು ಫೂಟು ಹೆಚ್ಚಿಸಿದ. ಇನ್ನೊಬ್ಬ ಅಧಿಕಾರಿ ಬಂದ, ಅವನಿಗೆ ನಮ್ಮ ಎ.ಪಿ.ಎಂ.ಸಿ.ಗೆ ಹೋಗುವಾಗ ಕಮಾನಿಲ್ಲದಿದ್ದರೆ ಹೇಗೆ? ಅದಕ್ಕಾಗಿ ಲಕ್ಷಾವಧಿ ಹಣ ಖರ್ಚಾಯಿತು. ನಮ್ಮ ರೈತರಿಗೆ ಕುಡಿಯುವುದಕ್ಕೆ ನೀರು ಕೊಡಿ ಅಂದರೆ ಆಗುವುದಿಲ್ಲ, ಹೊಲಕ್ಕೆ ನೀರು ಕೊಡಿ ಅಂದರೆ ಆಗುವುದಿಲ್ಲ, ರಸ್ತೆ ಕೊಡಲು ಆಗುವುದಿಲ್ಲ, ಮಾರುಕಟ್ಟೆಗೆ ಹೋಗಲು ವಾಹನ ಕೊಡುವುದಿಲ್ಲ, ಆದರೆ ಎ.ಪಿ.ಎಂ.ಸಿ. ದುಡ್ಡಿನಲ್ಲಿ ಇವರು ಮಜಾ ಉಡಾಯಿಸುತ್ತಾರೆ, ಆ ದುಡ್ಡಿನಲ್ಲಿ ಎಸಿ ಬಂಗ್ಲೆ ಬೇಕು, ಮೂರು ಕಾರು ಬೇಕು ರೈತರ ಹಣ ರೈತರೇ ಉಪಯೋಗಿಸುವ ಬಗ್ಗೆ ಇವರಿಗೆ ಪ್ರಾಮಾಣಿಕ ಕಳಕಳಿ ಇಲ್ಲ. ಹಾಗಾಗಿ ನಾವಿದನ್ನು ತೀವ್ರ ವಿರೋಧ ಮಾಡುತ್ತೇವೆ. ಸದುದ್ದೇಶದಿಂದ ನೀವು ಬಿಲ್ ಮೂವ್ ಮಾಡಿ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಇದನ್ನು ನಿಶ್ಚಿತವಾಗಿ ಹಿಂತೆಗೆದುಕೊಳ್ಳಬೇಕು ಅಂತ ಒತ್ತಾಯ ಮಾಡುತ್ತಾ ನನ್ನ ಮಾತು ಮುಗಿಸುತ್ತೇನೆ.

+ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಅಧ್ಯಕ್ಷರೇ, ಕರ್ನಾಟಕ ಕೃಷಿ ಉತ್ಪನ್ನ ತಿದ್ದುಪಡಿ ವಿಧೇಯಕ 2001 - ನಮ್ಮ ಮುಂದಿದೆ ಇದರಲ್ಲಿ ಕೊನೆಯಲ್ಲಿ ಒಂದು ವಿಷಯ ಬರೆದಿದ್ದಾರೆ.

> ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಅಧಿವೇಶನ ಇಲ್ಲದ್ದರಿಂದ ಮೇಲ್ಕಂಡ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ'

ಎಂದು ಆರ್ಡಿನೆನ್ಸ್ ಹೊರಡಿಸಿ ಇವತ್ತು ರಿಪ್ಲೇಸ್ಮೆಂಟಿಗೆ ತಂದಿದ್ದಾರೆ. ಸಹಕಾರ ವಲಯದಲ್ಲಿ ಅವಿಶ್ವಾಸ ನಿರ್ಣಯ ಅನ್ನುವುದೇ ಇಲ್ಲ. ಅದರ ಒಂದು ಭಾಗವಾಗಿರುವ ಎ.ಪಿ.ಎಂ.ಸಿ.ಯಲ್ಲಿ ಅವಿಶ್ವಾಸ ನಿರ್ಣಯ ಇದ್ದರೂ ಸೈತ ಮೂರನೇ ಎರಡು ಬಹುಮತ ಎಂದು ಇತ್ತು. ಸಚಿವರು

ಇದಕ್ಕೆ ಸಕಾರಣವನ್ನು ಕೊಡಬೇಕಾಗುತ್ತದೆ. 66ನೇ ಇಸವಿಯಿಂದ ಇಲ್ಲಿಯವರೆಗೆ ಸುಮಾರು 36 ವರ್ಷ ಇದ್ದ ಕಾನೂನಿನ ತಿದ್ದುಪಡಿ ಮಾಡಬೇಕಾದರೆ ಇವರು ಕಂಡಿರುವ ಕಾರಣಗಳೇನು? ಮೂರನೇ ಎರಡು ಬಹುಮತ ಇದ್ದರೆ ಏತಕ್ಕೆ ಅನಾನುಕೂಲವಾಗುತ್ತದೆ? ಅದನ್ನು ಹೇಳಿದರೆ ವಿಧೇಯಕಕ್ಕೆ ಒಪ್ಪಿಗೆ ಕೊಡಲು ನಮಗೆ ಅನುಕೂಲವಾಗುತ್ತದೆ. ಮೂರನೇ ಎರಡು ಬಹುಮತವನ್ನು ಸಿಂಪಲ್ ಮೆಜಾರಿಟಿ ಮಾಡಿಕೊಂಡು 35 ವರ್ಷ ಇದ್ದ ಒಳ್ಳೆಯ ವಿಷಯವನ್ನು ಏತಕ್ಕೆ ತಿದ್ದುಪಡಿ ಮಾಡುತ್ತಿದ್ದಾರೆ ಎಂಬುದಕ್ಕೆ ಸರ್ಕಾರ ವಿವರಣೆ ಕೊಡಬೇಕು. ಇದರಿಂದ ತುಂಬಾ ಅನ್ಯಾಯವಾಗುತ್ತದೆ. ಎ.ಪಿ.ಎಂ.ಸಿ. ಯಲ್ಲಿ ಬಹಳ ಅವ್ಯವಹಾರ ನಡೆಯಲು ಇದು ಕಾರಣ ತರುತ್ತದೆ. ಅಧ್ಯಕ್ಷರಾದವರು ಸದಸ್ಯರನ್ನು ಜೊತೆಯಲ್ಲಿ ಇಟ್ಟುಕೊಳ್ಳಲಾರದ, ಅವರ ಅಧಿಕಾರ ದುರುಪಯೋಗವಾಗುವ ಸಂದರ್ಭ ಬರುತ್ತದೆ. ಇದನ್ನು ವಾಪಸ್ ಪಡೆಯಬೇಕು ಎಂದು ಹೇಳಿ, ನನ್ನ ಮಾತು ಮುಗಿಸುತ್ತೇನೆ.

+ಶ್ರೀ ಜ.ಯಪ್ರಕಾಶ ಕೆ. ಹೆಗಡೆ (ಬ್ರಹ್ಮಾವರ್) : ಅಧ್ಯಕ್ಷರೇ, ತಿದ್ದುಪಡಿಯ ಉದ್ದೇಶವನ್ನು ಸಚಿವರು ಹೇಳಿದರು, ಗ್ರಾಮಪಂಚಾಯಿತಿ, ವಿಧಾನಸಭೆ ಮತ್ತು ಪಾರ್ಲಿಮೆಂಟಿನಲ್ಲಿ ಸಿಂಪಲ್ ಮೆಜಾರಿಟಿ ಇದೆ ಎಂದರು. ಗ್ರಾಮಪಂಚಾಯಿತಿಯಲ್ಲಿ ಸಿಂಪಲ್ ಮೆಜಾರಿಟಿಯಲ್ಲ, ಮೂರನೇ ಎರಡು ಬಹುಮತ, ಏಕೆಂದರೆ ಅಲ್ಲಿ ಪಕ್ಷಾಧಾರವಾಗಿ ಸ್ಪರ್ಧಿಸುವುದಿಲ್ಲ. ಪಾರ್ಲಿಮೆಂಟ್ ಮತ್ತು ವಿಧಾನಸಭೆಯಲ್ಲಿ ಪಾರ್ಟಿಬೇಸಿಸ್‌ನಲ್ಲಿ ಕಂಟೆಸ್ಟ್ ಮಾಡುವುದರಿಂದ ಸಿಂಪಲ್ ಮೆಜಾರಿಟಿ ಪ್ಲಸ್ ಪಕ್ಷಾಂತರ ವಿರೋಧಿ ಕಾಯಿದೆ ಇದೆ. ಯಾಕೆ ಯಾರು ಈ ಪಕ್ಷಾಂತರ ವಿರೋಧಿ ಕಾಯಿದೆ ತಂದರು ಎಂಬುದನ್ನು ಆಲೋಚಿಸಬೇಕಾಗುತ್ತದೆ. ಅದನ್ನು ತಂದವರು ನಿಮ್ಮ ನಾಯಕರೇ. ಯಾಕೆಂದರೆ ಸಿಂಪಲ್ ಮೆಜಾರಿಟಿ ಇದ್ದಾಗ ಅಚೆಯಿಂಚೆ ಹಾರಿದರೆ ಸರ್ಕಾರ ಉರುಳುತ್ತದೆ ಎಂದು ಈಗಲೂ ಆ ಕಾಯಿದೆ ಇದ್ದರೂ ಆ ಕಡೆಯಿಂದ ಈ ಕಡೆಗೆ ಹಾರುವುದು, ಕಾನೂನನ್ನು ಸರ್‌ಕಂವೆಂಟ್ ಮಾಡಿಕೊಂಡು ಯಾರ್‍ಯಾರು ಎಲ್ಲೆಲ್ಲಿ ಹೋಗುತ್ತಿದ್ದಾರೆಂದು ನೋಡುತ್ತಿದ್ದೇವೆ ಎಂದು ದಿವಸ ನನಗೆ ಸಪೋರ್ಟಾಗಿ ಮಾತನಾಡಿದರು, ಮಾರನೇ ದಿವಸ ಆ ಕಡೆ ಸಪೋರ್ಟಾಗಿ ಮಾತನಾಡುತ್ತಿದ್ದರು. ನನಗೆ ಆಶ್ಚರ್ಯವಾಯಿತು. ಬನ್ನಿಕೋಡ್‌ರವರು ಪಕ್ಕದಲ್ಲೇ ಇದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಅಧ್ಯಕ್ಷರೆ, ನಾವು ಪಕ್ಷಾತೀತವಾಗಿ ಪಕ್ಷೇತರರಾಗಿ ಆಯ್ಕೆಯಾದವರು, ನಮ್ಮ ಜನತೆ ಏನು ಆದೇಶ ಕೊಟ್ಟಿದ್ದಾರೋ ಆ ಪ್ರಕಾರ ಇದ್ದೇವೆಯೇ ವಿನಾ ಯಾವುದೇ ಪಕ್ಷಕ್ಕೆ ಸೇರಿದವರಲ್ಲ.

ಶ್ರೀ ಜಯಪ್ರಕಾಶ ಕೆ. ಹೆಗಡೆ : ಮಾನ್ಯ ಕಾನೂನು ಸಚಿವರು ಆಗಲೇ ಎಸ್.ಎಸ್. ಪಾಟೀಲರಿಗೆ ಏನೋ ಹೇಳಿದರು, ಅದಕ್ಕೆ ಎಸ್.ಎಸ್. ಪಾಟೀಲರು ಆ ಕಡೆ ಬಂದಾಗ ಉತ್ತರ ಹೇಳುತ್ತಾರೆ. ಆದ್ದರಿಂದ ಪಕ್ಷಾಂತರ ಕಾಯಿದೆ ಇದ್ದಾಗ ಸಿಂಪಲ್ ಮೆಜಾರಿಟಿ ನಾನು ಒಪ್ಪುತ್ತೇನೆ. ಆದರೆ ಆ ಕಾಯಿದೆ ಇಲ್ಲದಾಗ ಸರಳ ಬಹುಮತ ತಂದಾಗ, ಇದು ಎಷ್ಟು ಸಲ ಬದಲಾವಣೆ ಆಗುತ್ತದೆ ಎಂಬುದು ಗೊತ್ತಿಲ್ಲ, ಪ್ರಾಯಶಃ ಪಾರ್ಟಿ ಲೇಬಲ್ ಇಲ್ಲದ ಅಲ್ಲಿ ಸಹ ಸ್ವತಂತ್ರರಾಗಿರಬೇಕಾಗುತ್ತದೆ. ಅಲ್ಲಿ ಆಡಳಿತದಲ್ಲಿ ಸರಿಯಾಗದಿದ್ದಾಗ ಬದಲಾವಣೆ

ಮಾಡುವರು, ಇದನ್ನೆಲ್ಲಾ ನಾವು ನೋಡಿದ್ದೇವೆ. ಆದ್ದರಿಂದ ಸರಳ ಬಹುಮತವೆಂಬ ತಿದ್ದುಪಡಿ ಏನು ತಂದಿದ್ದೀರಿ ಅದನ್ನು ವಾಪಸ್ ಪಡೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಅಧ್ಯಕ್ಷರೇ, ಇವರು ಎರಡು ಮೂರು ತಿದ್ದುಪಡಿ ತಂದಿದ್ದಾರೆ. ಎಲ್ಲರೂ ಆಗಲೇ ಅದರ ಬಗ್ಗೆ ವಿವರವಾಗಿ ಹೇಳಿದ್ದಾರೆ. ಪ್ರಕರಣ 10. 44, 44(1), 44(2) ಮತ್ತು 63ಕ್ಕೆ ತಿದ್ದುಪಡಿ ತಂದಿದ್ದೀರಿ. ಈ ತಿದ್ದುಪಡಿ ತರುವ ಬದಲು ನಮಗೆ ಜನತಂತ್ರದಲ್ಲಿ ನಂಬಿಕೆಯಿಲ್ಲ, ಸರ್ಕಾರ ನಮ್ಮದು, ಹಾಗಾಗಿ ಎಲ್ಲಾ ಸಮಿತಿಗಳಿಗೂ ನಮ್ಮ ಕಾರ್ಯಕರ್ತರನ್ನು ನಾಮಿನೇಟ್ ಮಾಡಿ ಅಧ್ಯಕ್ಷರನ್ನಾಗಿ ಮಾಡಿ ಖಾಯಂ ಆಗಿ ಇಟ್ಟುಕೊಳ್ಳುತ್ತೇವೆ ಎಂದು ಹೇಳಿಬಿಡಲಿ. ಹಿಂದೆ ನೀವೇ ಅಧಿಕಾರದಲ್ಲಿದ್ದಾಗ ತಂದಿದ್ದ ಕಾನೂನುಗಳಿವು. ಮತ್ತೆ ಮತ್ತೆ ನಿಮ್ಮ ಮನಸಿಗೆ ಬಂದಂತೆಲ್ಲಾ ಇವನ್ನು ತಿದ್ದುವುದು ಸರಿಯಲ್ಲ. ಈಗಾಗಲೇ ಎಲ್ಲಾ ಕೃಷಿ ಉತ್ಪನ್ನಗಳ ಬೆಲೆ ಬಿದ್ದುಹೋಗಿದೆ. ಅದಕ್ಕೇನು ಮಾಡಬೇಕು? ಎ.ಪಿ.ಎಂ.ಸಿ.ಗಳ ಕರ್ತವ್ಯವೇನು? ತೂಕ ಸರಿಯಾಗಿ ನೋಡುತ್ತಿದ್ದಾರಾ. ಅವರಿಗೆ ಎಷ್ಟು ಅಧಿಕಾರ ಕೊಡಬೇಕು ಎಂದು ಯೋಚಿಸುವ ಬದಲು.......

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಸೆಂಟ್ರಲಿನ ಫಿಲ್ಮ್ ಅವಾರ್ಡಿನಲ್ಲಿಯೂ ಪಾರ್ಟಿ ಬೇಸಿಸ್ ಮೇಲೆ ಕೊಟ್ಟಿದ್ದಾರೆ ಎಂದು ಜಗಳ ನೋಡಿ, ಮೂರು ಜೂರಿಗಳು ರಾಜೀನಾಮೆ ಕೊಟ್ಟು ಹೋಗಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ವಿವರವಾಗಿ ಸಚಿವರು ಹೇಳಲಿ. ಈ ರೀತಿ ತಿದ್ದುಪಡಿ ಮಾಡುವುದರಿಂದ ನಿಮ್ಮ ಹಿಡಿತಕ್ಕೆ ಎಷ್ಟು ಎ.ಪಿ.ಎಂ.ಸಿ. ಬರುತ್ತವೆ. ಇಲ್ಲದಿದ್ದರೆ ಎಷ್ಟು ಎ.ಪಿ.ಎಂ.ಸಿ. ವಿರೋಧ ಪಕ್ಷದವರ ಹಿಡಿತದಲ್ಲಿರುತ್ತವೆ? ಅದನ್ನಾದರೂ ಹೇಳಿ. ಏಕೆಂದರೆ ತಿದ್ದುಪಡಿ ತರುವ ಉದ್ದೇಶ ಏನೂ ವಿವರವಾಗಿ ಇಲ್ಲಿಲ್ಲ. ಮತ್ತೆ, ರೈತಸಂಜೀವಿನಿ ಮತ್ತು ಫ್ಲೋರ್‌ಪ್ರೈಸ್ ಸ್ಕೀಮಿಗೆ ದುಡ್ಡು ಕೊಡುವುದಕ್ಕೆ ಹೇಳುತ್ತಾರೆ. ನಿರ್ದೇಶಕರಿಗೆ ವಿತರಣೆ ಮಾಡಲು ಅವಕಾಶ ಕೊಡಲಾಗಿದೆ ಎಂದು ಯಾಕೆ? ಎ.ಪಿ.ಎಂ.ಸಿ. ಸಮಿತಿ ಏತಕ್ಕೆ ನಿರ್ಣಯ ಮಾಡಬಾರದು? ಬದಲಿಗೆ ಸಮಿತಿ ಇದನ್ನು ನಿರ್ಧರಿಸಬೇಕೆಂದು ತನ್ನಿ. "ವಿಮಾ ಯೋಜನೆಗೆ ಕೃಷಿ ಮಾರುಕಟ್ಟೆ ನಿರ್ದೇಶಕರು ನಿರ್ಧರಿಸಬಹುದಾದಂತೆ" ಎಂದು ಇದೆಯಲ್ಲಾ. ಸ್ವಲ್ಪ ನೋಡಿ, ಅದು ಸರಿಯಾಗುತ್ತದೆಯೇ ಎಂದು.

ಶ್ರೀ ಆರ್.ಬಿ. ತಿಮ್ಮಾಪುರ್ : ಮಾನ್ಯ ಅಧ್ಯಕ್ಷರೇ, ಸಮಿತಿಗಳಲ್ಲಿ ಹಣ ಒಟ್ಟು ಎಷ್ಟಿದೆ, ರಾಜ್ಯಮಟ್ಟದಲ್ಲಿ ರೈತ ಬೆಲೆ ಕುಸಿತಕ್ಕೆ ಒಳಗಾದಾಗ, ತಾಪತ್ರಯಕ್ಕೆ ಒಳಪಟ್ಟಾಗ, ಅಂಕಿಸಂಖ್ಯೆಗಳನ್ನು ಅಭಿವೃದ್ಧಿಗಳನ್ನು ಗಮನದಲ್ಲಿಟ್ಟುಕೊಂಡು ನಿರ್ದೇಶಕರು ಡೈರೆಕ್ಷನನ್ನು ಕೊಡುವುದಕ್ಕೆ ಅವಕಾಶ ಇದೆ. ಆ ಸಮಿತಿಗಳಿಗೆ ಡೈರೆಕ್ಷನನ್ನು ಕೊಟ್ಟು ಇಷ್ಟು ಹಣವನ್ನು ಈ ಆವರ್ತ ನಿಧಿಗೆ ಕೊಡಬೇಕೆಂದು ಅವಕಾಶ ಕಲ್ಪಿಸಿದೆ.

ಶ್ರೀ ಅರಗ ಜ್ಞಾನೇಂದ್ರ : ನೀವು ತಿದ್ದುಪಡಿಯನ್ನು ತಂದಿದ್ದೀರಲ್ಲಾ, ಅದರಲ್ಲಿ ಸಮಿತಿ ಎಂದು ಹೇಳಿ ಇಲ್ಲ.

ಶ್ರೀ ಆರ್.ಬಿ. ತಿಮ್ಮಾಪುರ್ : ನಿರ್ದೇಶಕರು ನಿರ್ದೇಶಿಸುವಂತೆ ಸಮಿತಿಗಳಿಂದ ವಂತಿಗೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ.

ಶ್ರೀ ಅರಗ ಜ್ಞಾನೇಂದ್ರ : ಇಲ್ಲ. ನೀವು ಓದಿ ನೋಡಿ. ಮಾನ್ಯ ಕಾನೂನು ಸಚಿವರು ದಯವಿಟ್ಟು ಅದರ ಬಗ್ಗೆ ಕ್ಲಾರಿಫಿಕೇಷನನ್ನು ಕೊಡಬೇಕು. ಯಾರು ಹಣವನ್ನು ಕೊಡುವುದು ಎಂದು ಹೇಳಿ. ಬೆಂಗಳೂರಿನಲ್ಲಿರತಕ್ಕ ಇಲಾಖೆಯ ಡೈರೆಕ್ಟರ್ ಕೊಡಬಹುದು ಎಂದು ಆಗಿಬಿಡುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ : ಫ್ಲೋರ್ ಪ್ರೈಸ್ ಸ್ಕೀಮ್‌ಗೆ ಮತ್ತು ಅಪಘಾತ ವಿಮಾ ಯೋಜನೆಗೆ ಕೃಷಿ ಮಾರುಕಟ್ಟೆಯ ನಿರ್ದೇಶಕರು ನಿರ್ಧರಿಸಬಹುದಾದಂತೆ 'ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಮಾರ್ಕೆಟಿಂಗ್' ಎಂದು ಇದೆ. ಇದು ಸರಿಯಲ್ಲ. ಸಮಿತಿಯಲ್ಲಿ ಎಷ್ಟು ಮೊತ್ತ ಇದೆ, ಮತ್ತೊಂದು ನೋಡಿ ಅದನ್ನು ಸಮಿತಿಯವರು ಮಾಡಬೇಕು. ಅದನ್ನು ಹೇಳಿದ್ದಿದ್ದರೆ ನಿಮ್ಮ ಅಮೆಂಡ್ ಮೆಂಟ್‌ಗೆ ಸ್ವಲ್ಪ ಗೌರವ ಬರುತ್ತಿತ್ತು. ಆ ಸಮಿತಿಗಳಿಗೆ ಜವಾಬ್ದಾರಿ ಕೊಡಲಿಕ್ಕೆ ಉಂಟು ಎಂದು ಹೇಳಬಹುದಾಗಿತ್ತು.

ಶ್ರೀ ಆರ್.ಬಿ. ತಿಮ್ಮಾಪುರ್ : ಸಮಿತಿಗಳ ಅಧಿಕಾರ ಹಾಗೂ ಕರ್ತವ್ಯದ ಬಗ್ಗೆ ಏನು ಇರುತ್ತದೆ. ಅದರಡಿ ಇದು ಸೇರಿಕೊಂಡಿದೆ. ಸಮಿತಿಗಳು ಇಂಥ ಸಮಯದಲ್ಲಿ ಏನು ಬೆಲೆ ಕುಸಿತವಾದಾಗ ನಿರ್ದೇಶಕರು ಏನು ನಿರ್ಧರಿಸಿರುತ್ತಾರೆ, ಅದನ್ನು ಕೊಡತಕ್ಕದ್ದು ಅವರ ಕರ್ತವ್ಯ ಎನ್ನುವ ರೀತಿಯಲ್ಲಿ ನಾವು 13ನ್ನು ಸೇರ್ಪಡೆ ಮಾಡತಕ್ಕ ಕೆಲಸವನ್ನು ಮಾಡಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಡೈರೆಕ್ಟರ್ ನಿರ್ದೇಶನ ಮಾಡಿಬಿಟ್ಟರೆ ಅದನ್ನು ಕೊಡುವುದು ಅವರ ಕರ್ತವ್ಯ ಎಂದು ಹೇಳುತ್ತಿದ್ದಾರೆ. ಅವರಿಗೇನೂ ಹಕ್ಕಿಲ್ಲ. ಕರ್ತವ್ಯ ಅವರದು. ಎಲೆಕ್ಟೆಡ್ ಬಾಡಿ ನೀವು ಹೇಳಿದಂತೆ ಕೇಳಬೇಕೆನ್ನುವ ಸರ್ವಾಧಿಕಾರದ ಧೋರಣೆಯಾಗುತ್ತದೆ. ಇದು ಯಾವ ರೀತಿಯ ತಿದ್ದುಪಡಿ ಮಾನ್ಯ ಅಧ್ಯಕ್ಷರೇ? ಇದು ಬಹಳ ದೊಡ್ಡ ವಂಚನೆಯಾಗುತ್ತದೆ. ಖಂಡಿತವಾಗಿಯೂ ಇಂಥ ತಿದ್ದುಪಡಿಯನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಇಲ್ಲಿರುವ ಡೈರೆಕ್ಟರ್ ಡೈರೆಕ್ಷನ್ ಕೊಟ್ಟ ಕೂಡಲೇ ಅವರು ಕೊಟ್ಟುಬಿಡಬೇಕು. ಅದು ಅವರ ಕರ್ತವ್ಯ ಎಂದು ಹೇಳಿ ಅದರಲ್ಲಿ ಸೇರಿಸುವುದಕ್ಕೆ ನೀವು ತಂದಿದ್ದೀರಿ ಎಂದು ಹೇಳಿದರೆ ಏನು ಅರ್ಥ? ಕೆಲವು ಎಪಿಎಂಸಿ ಗಳಲ್ಲಿ ಅಲ್ಲಿ ಸಂಬಳ ಕೊಡುವುದಕ್ಕಿಲ್ಲ, ಅಲ್ಲಿ ಚಹಾ ಕುಡಿಯುವುದಕ್ಕೂ ದುಡ್ಡಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಇಲ್ಲೇನಾಗುತ್ತದೆ ಎಂದರೆ ಎಪಿಎಂಸಿ, ಆವರ್ತ ನಿಧಿ ಮತ್ತು ಬೇರೆ ಕೊಡುವುದಕ್ಕೆ ಒಪ್ಪುವುದೇ ಇಲ್ಲ. ಈ ಒಂದು ಪವರ್ಸ್ ಇಲ್ಲದಿದ್ದರೆ ಅವರು ಸಮಿತಿಗಳವರು ಹೇಳುತ್ತಾರೆ, ನೀವು ಕೊಡಲೇಬೇಡಿ ಎಂದು. ನಿಮಗೆ ಕೊಡುವುದಿಲ್ಲ ಎಂದು. We have no powers to divert the funds unless that is incorporated. ಬೇರೆ ಬೇರೆ ಕಡೆ ಕೊಡುವುದಕ್ಕಾಗುವುದಿಲ್ಲ. ಅದು ಆಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಉದಾಹರಣೆಗಾಗಿ ಆವರ್ತ ನಿಧಿ ತೆಗೆಯಿರಿ ಎಂದು ಹೇಳಿ. ಬೆಂಗಳೂರಿನಲ್ಲಿ ಎಪಿಎಂಸಿ ಇದೆ. ಬೆಂಗಳೂರಿನಿಂದ ಮಾತ್ರ ದುಡ್ಡು ಬರುತ್ತೇನು?

ಇಡೀ ರಾಜ್ಯದ್ದು ಎಲ್ಲಾ ಬಂದಿರುತ್ತದೆ. ಕೊಡಿ ಇನ್ನೊಂದಕ್ಕೆ ಎಂದರೆ ಅವರು ಕೊಡುವುದಿಲ್ಲ. ನಾನೇನು ಸಲಹೆ ಮಾಡಿದ್ದೆ ಎಂದರೆ ದಯವಿಟ್ಟು ಅದನ್ನು ಸರ್ಕಾರಕ್ಕೇ ಇಟ್ಟುಕೊಳ್ಳಿ. ನೀವು ಬೇಕಾದರೆ ಪವರ್ಸ್‌ನ್ನು ಡೆಲಿಗೇಟ್ ಮಾಡಿ. ಬೇಡ ಎನ್ನುವುದಿಲ್ಲ. ಪವರ್ಸ್ ಸರ್ಕಾರಕ್ಕೆ ಇರಬೇಕು.

ಶ್ರೀ ಆರಗ ಜ್ಞಾನೇಂದ್ರ : ನಾನು ಹೇಳುವುದು ರೈತರಿಂದ ಚುನಾಯಿತರಾಗಿರತಕ್ಕ ನಿರ್ದೇಶಕರಿಗೆ, ಸಮಿತಿಗೆ ಪವರ್‌ನ್ನು ಇದರಲ್ಲಿ ಕಸಿಯುತ್ತಿದ್ದಾರೆ. ಇದು ಜನತಂತ್ರ ವ್ಯವಸ್ಥೆಗೆ ಮಾರಕವಾಗಿರತಕ್ಕ ತಿದ್ದುಪಡಿ. ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಹುಡುಗಾಟವೇ? ನಿಮ್ಮ ಡೈರೆಕ್ಟರ್ ಏನು ಮಾಡುತ್ತಿದ್ದಾರೆ ಸ್ವಾಮಿ. ನಾನು ಈಗಾಗಲೇ ಹೇಳಿದನಲ್ಲಾ, ಕೆಲವು ಎಪಿಎಂಸಿ ಗಳಲ್ಲಿ ಆ ಸಮಿತಿಯವರು ಸಭೆ ಸೇರಿದರೆ ಚಹಾ ಕುಡಿಯುವುದಕ್ಕೂ ದುಡ್ಡಿಲ್ಲ. ಇನ್ನು ಕೆಲವು ಎಪಿಎಂಸಿ ಗಳಲ್ಲಿ ನಮ್ಮ ಶಿವಮೊಗ್ಗ ಉದಾಹರಣೆಗೆ ಅಡಿಕೆ ಮಾರುಕಟ್ಟೆ ಇದೆ, ಅಲ್ಲಿ ಕೋಟಿಗಟ್ಟಲೆ ದುಡ್ಡು ಇದೆ. ಅಲ್ಲಿ ಇದೇ ನಿಮ್ಮ ಡೈರೆಕ್ಟರ್ ಅಲ್ಲಿ ನಾವು ಏನಾದರೂ ಮಾರುಕಟ್ಟೆ ಯಾರ್ಡನ್ನು ಸರಿಮಾಡಬೇಕು, ತೀರ್ಥಹಳ್ಳಿಯಲ್ಲಿ ಒಂದು ಮಾರುಕಟ್ಟೆ ಪ್ರಾಂಗಣವನ್ನು ರಚನೆ ಮಾಡಬೇಕು ಎಂದು ಹೇಳಿದರೆ....

ಶ್ರೀ ಟಿ.ಬಿ. ಚಂದ್ರೇಗೌಡ : ಇಲ್ಲಿ ಆದೇಶವನ್ನು ಕೊಡುವುದು ದರವನ್ನು ನಿರ್ಧರಿಸುವುದಕ್ಕೆ ಮಾತ್ರ ಓದಿಸ್ವಾಮಿ "ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆಗೆ ಕೃಷಿ ಮಾರುಕಟ್ಟೆಯ ನಿರ್ದೇಶಕರು ನಿರ್ಧರಿಸಬಹುದಾದಂಥ ದರದಲ್ಲಿ" ಅವರೇನು ನಿರ್ಧಾರ ಮಾಡುತ್ತಾರೆ. ಆ ದರವನ್ನು ಕೊಡಿ ಎಂದು ಕೇಳುತ್ತಾರೆಯೇ ಹೊರತು ಇನ್ನೇನೂ ಅಲ್ಲ.

(ಗೊಂದಲ)

ಅಧ್ಯಕ್ಷರು : ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ವಿಶ್ವೇಶ್ವರ ಹೆಗಡೆಯವರು ಒಂದು ಮಾತನ್ನು ಹೇಳಿದರು ಸ್ವಾಮಿ. ನಾವು 15 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೆವು. ಅದನ್ನು ನಿಲ್ಲಿಸಿಬಿಟ್ಟೆವು ಎಂದು. ಕೆಲವು ಎಪಿಎಂಸಿಗಳು ರಿಲೀಸ್ ಮಾಡಲಿಲ್ಲ. ಕೆಲವು ಎಂಪಿಎಂಸಿಗಳು ನಮ್ಮದೇ ಅದು ನಮ್ಮದು. ನಾವು ರಿಲೀಸ್ ಮಾಡುವುದಿಲ್ಲವೆಂದರು. ಅದಕ್ಕೇ ಅದು ನಿಂತುಹೋಗಿದ್ದು. ಆಮೇಲೆ ಇದನ್ನು ಡೈರೆಕ್ಟರ್ ಎಂದು ಮಾಡಿದಂಥ ಉದ್ದೇಶ ಆಗ ನಾವು ಇಲ್ಲಿಂದ ಹಣವನ್ನು ಪೂಲ್ ಮಾಡಿ ಬಂದಂಥದ್ದನ್ನು ಬೇರೆ ಕಡೆಗೆ ಡೈವರ್ಟ್ ಮಾಡುವುದು. ಅದು ಉದ್ದೇಶ.

ಶ್ರೀ ಆರಗ ಜ್ಞಾನೇಂದ್ರ : ಫ್ಲೋರ್ ಪ್ರೈಸ್ ಸ್ಕೀಮ್‌ಗೆ ಮತ್ತು ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆಗೆ ಕೃಷಿ ಮಾರುಕಟ್ಟೆಯ ನಿರ್ದೇಶಕರು, ನಿರ್ಧರಿಸಬಹುದಾದಂತೆ ಅಂಥ ದರದಲ್ಲಿ ವಂತಿಗೆಯನ್ನು ನೀಡುವುದು. ಅದು ಕರ್ತವ್ಯ ಎಂದು ಹೇಳಿ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ತತ್‌ಕ್ಷಣ ತೀರ್ಮಾನವನ್ನು ತೆಗೆದುಕೊಳ್ಳಬೇಕು. ತತ್‌ಕ್ಷಣ ತೀರ್ಮಾನ ತೆಗೆದುಕೊಳ್ಳುವುದು ಎಂದರೆ ಸಮಿತಿ ಕರೆದು ತೀರ್ಮಾನವನ್ನು ಮಾಡುವತನಕ ವಿಮಾಯೋಜನೆಗೆ ಕಾಯುವುದಕ್ಕಾಗುವುದಿಲ್ಲ. ಅದಕ್ಕೇನು ಮಾಡುತ್ತಾರೆ, ಆ ಸಮಯದಲ್ಲಿ

ನಿರ್ದೇಶಕರೇನು ದರವನ್ನು ನಿಗದಿ ಮಾಡುತ್ತಾರೆ, ಅದನ್ನು ಕೊಡಿ. ಆಮೇಲೆ ಅದನ್ನು ಕಮಿಟಿಯಲ್ಲಿ ಅಪ್ರೂವ್ ಮಾಡಿಕೊಡಿ. ಅರ್ಥಮಾಡಿಕೊಂಡರೆ ಅದು ಬಹಳ ಸಿಂಪಲ್ ಆಗುತ್ತದೆ. ಪೂರ್ಣ ಅವರಿಗೇ ಸ್ವಾತಂತ್ರ್ಯವನ್ನು ಕೊಟ್ಟಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಇಲ್ಲಿ ಏನಾಗಿದೆ ಎಂದರೆ ಇದು ಹಿಂದೆ ಇತ್ತು. ಯಾರಾದರೂ ಅಗ್ರಿಕಲ್ಚರಲ್ ಆಪರೇಷನ್ಸ್ ಮಾಡುತ್ತಿದ್ದಾಗ ಯಾರಾದರೂ ಸತ್ತರೆ ಅವರಿಗೆ 25 ಸಾವಿರ ರೂ, ಕೈ ಮುರಿದರೆ 15 ಸಾವಿರ ರೂ, ಕಾಲು ಮುರಿದುಕೊಂಡರೆ ಇಷ್ಟು ಎಂದು ಇದೆಲ್ಲಾ ನಿಗದಿತ ದರಗಳೆಲ್ಲಾ ಇತ್ತು. ಇದನ್ನು ಪುನಃ ನಿರ್ದೇಶಕರು ನಿಶ್ಚಯ ಮಾಡಬೇಕಾಗಿಲ್ಲ. ಸರ್ಕಾರದ ಲೆವೆಲ್‌ನಲ್ಲಿ ಇದೊಂದು ನಿರ್ಧರಣೆಯಾಗಲಿ. ಪುನಃ ನಿರ್ದೇಶಕರುಗಳಿಗೆ ಕೊಡುವ ಹಕ್ಕೇನು?

ಶ್ರೀ ಡಿ.ಬಿ. ಚಂದ್ರೇಗೌಡ : ಅಧಿಕಾರದ ಪ್ರಶ್ನೆಯಲ್ಲ ಇದು. ಮಾನ್ಯ ಎಸ್.ಎಸ್. ಪಾಟೀಲರು ಹೇಳಿದ್ದನ್ನು ನೀವು ಕೇಳಿದಿರೋ ಇಲ್ಲವೋ ಗೊತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ವಾಪಸ್ ಬಂದಿರತಕ್ಕ ಪ್ರಕರಣಗಳು ಇವೆ. ಅದಕ್ಕೂ ಕೂಡ ಅದು ಸರ್ಕಾರಕ್ಕೆ ಬಂದು ಅಪ್ರೂವಲ್ ತೆಗೆದುಕೊಂಡು ಹೋಗುವುದು ಎಂದರೆ ಅವನು ಸತ್ತುಹೋಗಿರುತ್ತಾನೆ. ಅರ್ಧಂಬರ್ಧ ಬದುಕುವುದಕ್ಕಾದರೂ ಸಾಧ್ಯ ಇರುತ್ತದೆ. ದರ ನಿಗದಿ ಮಾಡುವುದು ಮಾತ್ರ ಸೇರಿರುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ದರವನ್ನು ಏನು ಕೊಡಬೇಕೆಂದು ಈಗಾಗಲೇ ನಿಗದಿ ಮಾಡಿದ್ದೀರಿ. ಅದನ್ನು ಕೊಡುವುದಕ್ಕೆ ಅಮೆಂಡ್‌ಮೆಂಟ್‌ನ ಅವಶ್ಯಕತೆ ಇಲ್ಲ. ಈಗಾಗಲೇ ಇರುವ ಕಾನೂನು ಸಾಕಾಗುತ್ತದೆ. ಇಲ್ಲಿರತಕ್ಕದ್ದು ಸಮಿತಿಯಲ್ಲಿರುವ ಹಣವನ್ನು ಶಿವಮೊಗ್ಗ ಮಾರುಕಟ್ಟೆಯಲ್ಲಿ ಇರುವ ಹಣ ಎಕ್ಸೆಸ್ ಆಗಿ ಉಳಿದಿರತಕ್ಕ ಹಣವೇ? ಈ ಸ್ಕೀಮ್‌ಗೆ ಡೈವರ್ಟ್ ಮಾಡುವುದಕ್ಕೆ ಇಲ್ಲಿಯ ನಿರ್ದೇಶಕರಿಗೆ ಡೈರೆಕ್ಟರ್, ಅಗ್ರಿಕಲ್ಚರ್ ಮಾರ್ಕೆಟಿಂಗ್ ಇವರಿಗೆ ಅಧಿಕಾರವನ್ನು ಕೊಡುವುದಕ್ಕೆ ಇದು ಅಮೆಂಡ್‌ಮೆಂಟ್.

ಶ್ರೀ ಡಿ.ಬಿ. ಚಂದ್ರೇಗೌಡ : ಕೆಲವು ಬಾರಿ ಇಂತಿಷ್ಟು ಅಪಘಾತಕ್ಕೆ ಇಂತಿಷ್ಟು ಹಣ ಎಂದು ಹೇಳಿ ತಕ್ಷಣ ನಿಗದಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಅದು ನಿಗದಿಯಾಗಿದೆ.

ಶ್ರೀ ಬಿ.ಎಸ್. ಬಚ್ಚೇಗೌಡ : ಆ ಪವರ್‌ನ್ನು ಸರ್ಕಾರ ಇಟ್ಟುಕೊಳ್ಳಲಿ.

ಶ್ರೀ ಅರಗ ಜ್ಞಾನೇಂದ್ರ : ನಾನು ಹೇಳುವುದು ಎಪಿಎಂಸಿ ಯ ನಿರ್ದೇಶಕರಿಗೆ ಇರತಕ್ಕ ಈ ಹಕ್ಕನ್ನು ಯಾವುದೇ ಕಾರಣಕ್ಕೂ ಕಿತ್ತುಕೊಳ್ಳಬೇಡಿ. ನಿಮ್ಮ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ, ನೀವೆಲ್ಲಾ ಹಕ್ಕನ್ನು ವಿಕೇಂದ್ರಿಕರಣ ಮಾಡುತ್ತೇವೆ ಎಂದು ಹೇಳಿ ಒಂದು ಕಡೆ ಹೇಳುವುದು. ಇನ್ನೊಂದು ಕಡೆ ಎಪಿಎಂಸಿ ಯವರನ್ನು ಕಿತ್ತುಕೊಳ್ಳುವುದು. ಈಗಾಗಲೇ ಎಪಿಎಂಸಿಯವರು ಪುಕ್ಸಾಟೆ ಪಟೇಲರು.

ಶ್ರೀ ಡಿ.ಬಿ. ಚಂದ್ರೇಗೌಡ : ಡೈರೆಕ್ಟರ್, ಸರ್ಕಾರದ ಪರವಾಗಿ ಅಲ್ಲಿರುತ್ತಾರೆ. ಉಳಿದಂಥವರೆಲ್ಲಾ ಇರುತ್ತಾರೆ. ಇದು confined to the certain limited question of fixing this. ಅವರು ಎಷ್ಟು ಮಾಡಬೇಕು, ಏನು ಮಾಡಬೇಕು, ಪರಿಷ್ಕೃತ ದರ ಮಾಡಬೇಕು ಎಂದು ಹೇಳಿ ಕಾಲವನ್ನು ಕಳೆಯುತ್ತಾರೆ, ಅದ್ದರಿಂದ ಅದಕ್ಕೊಂದು ಅಧಿಕಾರವಿದ್ದರೆ ತಕ್ಷಣ ಕೊಡುತ್ತಾರೆ ಎನ್ನುವ ಅರ್ಥದಲ್ಲಿ ಅದನ್ನು ಹಾಕಿದ್ದೇದೆ.

ಶ್ರೀ ಎಸ್.ಎಸ್. ಪಾಟೀಲ್ : ಇಲ್ಲಿ ಏನಾಗಿದೆ ಎಂದರೆ ಆ ಛೇರ್ಮೆನರಿಗೆ ಯಾವ ಅಧಿಕಾರವೂ ಇಲ್ಲ. ಹತ್ತು ರೂಪಾಯಿಗಳನ್ನು ಬಳಸಬೇಕಾದರೂ ಅವನು ಇಲ್ಲಿಗೆ ಬರಬೇಕು. ಆ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ ಎಂದು ನಾನು ಹೇಳುತ್ತಿರುವುದು. ಇದನ್ನೇನು ಮಾಡಿಕೊಂಡಿದ್ದೀರಿ, ಇದು ಸರಿ ಇದೆ. ಏಕೆಂದರೆ ನೀವು ಆವರ್ತ ನಿಧಿ ಮಾಡಬೇಕು, ಎಂದರೆ ವಿರುದ್ಧ ಮಾಡುತ್ತಾರೆ. ಇದನ್ನು ತೆಗೆದುಕೊಳ್ಳಿ. ಆದರೆ ಅಲ್ಲಿ ತಿದ್ದುಪಡಿ ಮಾಡಿ ಅವರಿಗೆ ಅಧಿಕಾರ ಕೊಡತಕ್ಕದ್ದು ಸರಿಯಲ್ಲ. ರೈತ ಸಂಜೀವಿನಿಗೆ ಕೊಡುವುದು ಕೂಡ ಡೈರೆಕ್ಟರ್‌ಗೆ ಬರುವುದು ಎಂದರೆ ಆ ಬೋರ್ಡ್ ಏಕೆ ಇರಬೇಕು? ಅವರಿಗೆ ಅಲ್ಲಿ ಅಧಿಕಾರವನ್ನು ಕೊಡಿ. ಇದನ್ನು ಸರ್ಕಾರಕ್ಕೆ ಇಟ್ಟುಕೊಳ್ಳಿ. ಪವರ್ಸ್‌ನ್ನು ನಿರ್ದೇಶಕರೇ ಬೇಕಾದರೆ ಡೆಲಿಗೇಟ್ ಮಾಡಲಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಇದನ್ನು ಓದಿ ನೋಡಿ. ಅರ್ಥಾತ್ ಸಂಬಂಧವಿಲ್ಲ. ಆ ಅಮೆಂಡ್‌ಮೆಂಟ್‌ಗೆ ಕಾನೂನು ಸಚಿವರು ಏನು ಹೇಳುತ್ತೀರಿ. ಇದರ ಬಗ್ಗೆ ನಮಗೆ ಫೈನಲ್ ಆಗಿ ವಿವರಣೆಯನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಸುಮ್ಮನೆ ನಾವು ಇಲ್ಲಿ ಬ್ಲೈಂಡ್ ಆಗಿ ನಿಮಗೆ ಅಧಿಕಾರವನ್ನು ಕೊಟ್ಟುಕೊಂಡು ಮಾಡುವುದಕ್ಕೆ ನಮಗಂತೂ ಒಪ್ಪಿಗೆ ಇದಕ್ಕೆ ಇಲ್ಲ. ಏಕೆಂದರೆ ಈಗಾಗಲೇ ಮಾರುಕಟ್ಟೆ ನಿರ್ದೇಶಕರ ಕಛೇರಿ ಏನಾಗಿದೆ, ನಿಮಗೆ ಅನುಭವಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ನಮಗಂತೂ ಸಾಕಷ್ಟು ಶಂಖ ಹೊಡೆದುಕೊಂಡು ಸಾಕಾಗಿದೆ. ಶಿವಮೊಗ್ಗ ಎಪಿಎಂಸಿ ಯಲ್ಲಿ 10-12 ಕೋಟಿ ರೂಪಾಯಿಗಳಿದ್ದರೂ ನಮಗೆ ಒಂದು ದಮಡಿ ಕಾಸನ್ನು ಖರ್ಚು ಮಾಡುವುದಕ್ಕಾಗುತ್ತಿಲ್ಲ. ನನ್ನ ಕ್ಷೇತ್ರಕ್ಕೆ ಒಂದು ಮಾರುಕಟ್ಟೆ ಪ್ರಾಂಗಣವನ್ನು ಮಾಡಬೇಕು, ಐದು ವರ್ಷವಾಗಿದೆ. ಇನ್ನೂ ಕೂಡ ಟೆಂಡರನ್ನು ಇವರು ಕರೆಯುತ್ತಿಲ್ಲ. ಇವರ ಕಛೇರಿ, ಇವರ ಛೇಂಬರ್‌ಗಳನ್ನು ರಚನೆ ಮಾಡುವಂತಹದು, ಇವರಿಗೆ ಬಂದಿರತಕ್ಕದ್ದಕ್ಕೆಲ್ಲಾ ಕ್ವೈರಿ ಹಾಕಿ ವಾಪಸ್ ಕಳುಹಿಸುವಂತಹದಕ್ಕೆ ಮಾತ್ರ ಇದು ಸೀಮಿತ ಆಗಿದೆಯೇ ವಿನಹ ಇಲ್ಲಿದ್ದ ರೈತರಿಗೆ ಸಹಾಯ ಮಾಡಬೇಕು ಎನ್ನುವುದಕ್ಕೋಸ್ಕರ ಇಲ್ಲ. ರೈತ ಬೆಳೆದಿರತಕ್ಕಂಥಹ ಬೆಳೆಯನ್ನು ಮಾರಾಟ ಮಾಡಿದಾಗ ಬರತಕ್ಕಂತಹ ಸೆಸ್ ಇದು. ಅದರಿಂದಾಗಿ ನಾವು ಈ ರೀತಿಯ ಪ್ರಕರಣವನ್ನು ಒಪ್ಪಲಿಕ್ಕೆ ಸಾಧ್ಯ ಇಲ್ಲ. ನೀವು ಅನವಶ್ಯಕವಾಗಿ ರಾಜಕಾರಣಕ್ಕೋಸ್ಕರದ ತಂದಿರತಕ್ಕದ್ದು ಇದು. ಪ್ರಾಮಾಣಿಕವಾಗಿ ರೈತರಿಗೆ ಸಹಾಯ ಮಾಡತಕ್ಕದ್ದು ಅಲ್ಲ. ಅದ್ದರಿಂದಾಗಿ ಈ ರೀತಿ ಇವತ್ತು ಶಿವಮೊಗ್ಗ ಎಪಿಎಂಸಿಯಲ್ಲಿ ಏನಾಗಿದೆ ಎಂದು ಹೇಳುತ್ತೇನೆ. ನಾನು ಮೊನ್ನೆ ಕೂಡ ಹೇಳಿದೆ ಮಾನ್ಯ ಮಂತ್ರಿಗಳೇ. ಆರು ತಿಂಗಳಾಗಿದೆ ಎನ್‌ಕ್ವೈರಿ ಆಗಿ. ಸುಮಾರು 50 ಲಕ್ಷ ರೂಪಾಯಿಗಳ ದುರುಪಯೋಗ ಅಲ್ಲಿ ಆಗಿದೆ. ಕಳಪೆ ಕಾಮಗಾರಿ ಆಗಿದೆ. ಎಲ್ಲಾ ವಿಚಾರಣೆ ಆಗಿ ರಿಪೋರ್ಟ್ ನಿಮ್ಮ ಹತ್ತಿರ ಬಂದರೆ ಆರು ತಿಂಗಳಿಂದ ರಿಪೋರ್ಟ್‌ನ್ನು ಏಕೆ ನೀವು ಮುಚ್ಚಿಡುತ್ತೀರಿ? ಅವರಿಗಾದರೂ ಅಲ್ಲಿ ಅಧಿಕಾರ ಕೊಟ್ಟಿದ್ದರೆ ಅಲ್ಲಿ

ನಿರ್ದೇಶಕರ ಮಂಡಳಿ ಕ್ರಮ ಕೈಗೊಳ್ಳುತ್ತಿತ್ತು. ಆ ಗುತ್ತಿಗೆದಾರ, ಇಂಜಿನಿಯರ್ ಬಂದು ಯಾರನ್ನೋ ಕಾಂಟ್ಯಾಕ್ಟ್ ಮಾಡಿದ್ದಾನೆ. ಇಲ್ಲದಿದ್ದರೆ ನೀವು ಆರು ತಿಂಗಳು ವರದಿಯನ್ನು ಮುಚ್ಚಿಡುವಂತಹದು ಏನಿದೆ? ಆ ಫೈಲ್ ನಿಮ್ಮ ಹತ್ತಿರ ಬರಲಿಲ್ಲವೇ ಎಂಬುದನ್ನು ಸತ್ಯವಾಗಿ ಹೇಳಿ. 50 ಲಕ್ಷ ರೂಪಾಯಿಗಳು ಎಪಿಎಂಸಿ ಯಲ್ಲಿ ದುರುಪಯೋಗ ಆಗಿ ಕಳಪೆ ಕಾಮಗಾರಿ ಎಂದು ಸಾಬೀತಾದರೂ ಕೂಡ ಇನ್ನೂ ಕೂಡ ಯಾವುದೇ ಒಬ್ಬ ಜಿ ಇ ಮೇಲೆ ಕ್ರಮ ಕೈಗೊಳ್ಳುವಂತಹ ಶಕ್ತಿ ಇವರಿಗೆ ಇಲ್ಲ ಎಂದು ಆದರೆ ಈ ರೀತಿಯ ಅಮೆಂಡ್‌ಮೆಂಟ್ ತಂದು ನೀವು ಏನು ಮಾಡುವುದಕ್ಕೆ ಹೊರಟಿದ್ದೀರಿ?

ಶ್ರೀ ಆರ್.ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾತನಾಡುವಾಗ ಯಾರೋ ಗುತ್ತಿಗೆದಾರರು, ಯಾರನ್ನೋ ಭೇಟಿ ಆಗಿದ್ದಾರೆ ಎನ್ನುವ ಮಾತನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು. ಏಕೆ ಹೇಳುತ್ತಿದ್ದೇನೆಂದರೆ ಅಲ್ಲಿ ಚುನಾಯಿತ ಪ್ರತಿನಿಧಿಗಳು ಇದ್ದಾರೆ. ಅವರಿಗೆ ಇಷ್ಟೊಂದು ಕಳಪೆ ಕಾಮಗಾರಿ ಆಗಿರುವ ಬಗ್ಗೆ ಅರಿವು ಇದೆ. ಡೈರೆಕ್ಟರ್ ಹತ್ತಿರ ಆರು ತಿಂಗಳಿಂದ ಬಂದಿದೆ ಎಂದು ಇವತ್ತು ನನ್ನ ಗಮನಕ್ಕೆ ತಂದಿದ್ದಾರೆ. ಅದು ಏನಾಗಿದೆ ಎಂದು ಎನ್‌ಕ್ವೈರಿ ಮಾಡುತ್ತೇನೆ. ಆದರೆ ಯಾರೋ ಕಂಟ್ರಾಕ್ಟರ್, ಎಲ್ಲೋ ಬಂದರು, ಎಂದು ಹೇಳುವುದಿಲ್ಲ. ಅಲ್ಲಿ ಚುನಾಯಿತ ಪ್ರತಿನಿಧಿಗಳು ಇದ್ದಾರೆ. ಅವರಿಗೆ ನೀವು ಅಧಿಕಾರ ಕೊಡಿ ಎಂದು ಒನ್ ಸೈಡ್ ಹೇಳುತ್ತೀರಿ. ಇನ್ನೊಂದು ಕಡೆ ಅಲ್ಲಿ ಭಾರೀ ಕಳಪೆ ಮಟ್ಟದ ಕೆಲಸಗಳು ಆಗುತ್ತಿವೆ ಎಂದು ಹೇಳುತ್ತೀರಿ. ಇದು ನನಗೆ ಅರ್ಥ ಆಗಲಾರದು.

(ಗೊಂದಲ)

ಅಧ್ಯಕ್ಷರು : ನೀವು ಯಾರಿಗೂ ಯೀಲ್ಡ್ ಆಗಬೇಡಿ. ಅರಗ ಜ್ಞಾನೇಂದ್ರ ನೀವು ಮುಂದುವರಿಸಿ.

ಶ್ರೀ ಅರಗ ಜ್ಞಾನೇಂದ್ರ : ತಾವು ನನ್ನ ರಕ್ಷಣೆಗೆ ಬರಬೇಕು. ನಾನು ಪೂರ್ಣ ಮಾತನಾಡುವ ತನಕ ಬೇರೆ ಯಾರೂ ಮಾತನಾಡಬೇಡಿ ಎಂದು ಅವರಿಗೆ ನಿರ್ದೇಶನ ಕೊಟ್ಟು ಬಿಡಿ. ಮಾನ್ಯಮಂತ್ರಿಗಳೇ ನೀವು ಹೇಳುತ್ತಿದ್ದೀರಿ. ಮಾರುಕಟ್ಟೆ ಸಮಿತಿಯವರೇ ಇದನ್ನು ಕಂಡು ಹಿಡಿದಿದ್ದು. ಈ ಪ್ರಕರಣವನ್ನು ನೀವಲ್ಲ ಕಂಡು ಹಿಡಿದಿದ್ದು, ಅವರೇ ಕಂಡು ಹಿಡಿದಿದ್ದು ಅಥವಾ ಇಲ್ಲಿರತಕ್ಕ ನಿಮ್ಮ ನಿರ್ದೇಶಕರಲ್ಲ ಕಂಡು ಹಿಡಿದಿದ್ದು. ಅಲ್ಲಿರತಕ್ಕಂತಹ ಚುನಾಯಿತ ಪ್ರತಿನಿಧಿಗಳು ಕಂಡು ಹಿಡಿದರೆ, ನೀವು ಏನು ಮಾಡಿದಿರಿ? ಕೇಂದ್ರ ಮಾರುಕಟ್ಟೆಯಿಂದ ಎನ್‌ಕ್ವೈರಿ ಮಾಡಿ ಕಳುಹಿಸಿದಿರಿ. ರಿಪೋರ್ಟ್ ಬಂದು ಆರು ತಿಂಗಳಿಂದ ಮುಚ್ಚಿಟ್ಟಿದ್ದು ಯಾವ ಅಧಿಕಾರಿ? ಅವನ ಮೇಲೆ ಏನು ಕ್ರಮವನ್ನು ನೀವು ತೆಗೆದುಕೊಂಡಿದ್ದೀರಿ ಎಂಬುದನ್ನು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ರೈತರಿಗೆ ಕೊಟ್ಟಿರತಕ್ಕಂಥಹ ಹಣ ಇವತ್ತು ಅಂದಾದುಂದಿಯಾಗಿ ವೆಚ್ಚ ಆಗುತ್ತಿದೆ. ಅಲ್ಲಿರತಕ್ಕಂಥಹ ಎಪಿಎಂಸಿ ಮಾರುಕಟ್ಟೆಯ ಒಬ್ಬ ಸಮಿತಿಯವರಿಗೆ ಒಬ್ಬ ಜೆ.ಇ. ಯನ್ನು ಸಸ್ಪೆಂಡ್ ಮಾಡುವಂತಹ ಅಧಿಕಾರವನ್ನು ಇವತ್ತು ನೀವು ಕೊಡಲಿಲ್ಲ. ಇವತ್ತು ಮತ್ತೆ ಅಧಿಕಾರವನ್ನು ಕೇಂದ್ರೀಕೃತ ಮಾಡಲಿಕ್ಕೆ ಹೊರಟಿದ್ದೀರಿ. ಲೂಟಿ ಮಾಡಲಿಕ್ಕೆ ಹೊರಟಿದ್ದೀರಿ. ಮತ್ತೆ ಅಲ್ಲಿಯ ಎಪಿಎಂಸಿಯ ಅಧ್ಯಕ್ಷರನ್ನು ಇಳಿಸುವುದು ಹೇಗೆ? ನಿಮ್ಮವರನ್ನು

ಏರಿಸುವುದು ಹೇಗೆ? ಎಂಬ ಬಗ್ಗೆ ಯೋಚನೆ ಮಾಡುತ್ತಿದ್ದೀರಿ. ನಿಮ್ಮ ರಾಜಕೀಯದಲ್ಲಿ ಸೋತವರನ್ನು ಅವರಿವರನ್ನು ರೀಹ್ಯಾಬಿಲಿಟೇಟ್ ಮಾಡುವಂತಹ ಸೆಂಟರಾ ನೀವು?

ಶ್ರೀ ಡಿ.ಬಿ. **ಚಂದ್ರೇಗೌಡ** : ಏಕೆ ಆಗಬಾರದು ಹೇಳಿ?

ಶ್ರೀ ಆರಗ **ಜ್ಞಾನೇಂದ್ರ** : ಏಕೆ ಆಗಬೇಕು? ದುಡ್ಡು ಯಾರದ್ದು? ಏಕೆ ಆಗಬೇಕು ಹೇಳಿ.

ಶ್ರೀ ಡಿ.ಬಿ. **ಚಂದ್ರೇಗೌಡ** : ಏಕೆ ಆಗಬೇಕು ಎಂದರೆ ನೀವು ಸ್ಯಾಪ್ರನ್ಯೆಸ್ ಮಾಡಿದ್ದೀರಲ್ಲಾ ಮೇಲೆ, ಅದೇ ತರಹ ಇಲ್ಲೂ ಆಗುತ್ತದೆ.

ಶ್ರೀ ಆರಗ **ಜ್ಞಾನೇಂದ್ರ** : ಮೇಲುಗಡೆ ಎಲ್ಲರನ್ನೂ ಕೈ ತೋರಿಸಲು ಹೊರಟಿದ್ದಾರೆ.

(ಗೊಂದಲ)

ಶ್ರೀ ಆರಗ **ಜ್ಞಾನೇಂದ್ರ** : ನಿಮ್ಮದು ರೀಹ್ಯಾಬಿಲಿಟೇಷನ್ ಸೆಂಟರ್.

ಶ್ರೀ ಡಿ.ಬಿ. **ಚಂದ್ರೇಗೌಡ** : ಯಾವ ಸರ್ಕಾರ ಅಧಿಕಾರದಲ್ಲಿ ಇರುತ್ತದೋ ಅದು ಸ್ವಲ್ಪ ವ್ಯಾಪ್ತಿ ಮೀರಿ ಕೆಲಸ ಮಾಡುತ್ತದೆ. ಇದನ್ನು ಯಾರೂ ತಪ್ಪಿಸುವುದಕ್ಕೆ ಆಗುವುದಿಲ್ಲ. ನೀವು ಬಂದರೂ ಮಾಡಬೇಕಾಗುತ್ತದೆ.

ಶ್ರೀ **ವಿಶ್ವೇಶ್ವರ ಹೆಗಡೆ ಕಾಗೇರಿ** : ಇವರು ಸಮರ್ಥಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಹಾಗಾಗಿ ಮೇಲೆ ಕೇಂದ್ರ ಸರ್ಕಾರದ ಬಗ್ಗೆ ಹೇಳುತ್ತಿರುವುದು..

(ಗೊಂದಲ)

ಅಧ್ಯಕ್ಷರು : ಮಾನ್ಯ ಜ್ಞಾನೇಂದ್ರ ಅವರೇ, ಮುಗಿಸಿ ಬೇಗ. ನೀವು ಮಾತನಾಡುವಾಗ ಅಧ್ಯಕ್ಷರನ್ನು ನೋಡಿ ಮಾತನಾಡಿ.

ಶ್ರೀ ಆರಗ **ಜ್ಞಾನೇಂದ್ರ** : ನಾವು ಇಂತಹದನ್ನು ಕರೆಕ್ಟಾಗಿ ಹೇಳಿದರೆ ಕಾಗಕ್ಕ ಗುಬ್ಬಕ್ಕನ ಕಥೆ ಹೇಳುತ್ತಾರೆ. ಇವರು ಯಾರ್ಯಾರನ್ನು ರೀಹ್ಯಾಬಿಲಿಟೇಷನ್ ಮಾಡಿದ್ದಾರೆ ಎಂದು ನೋಡಿದರೆ ಗೊತ್ತಾಗುತ್ತದೆ. ಯೋಜನಾ ಆಯೋಗಕ್ಕೆ ಐ.ಎ.ಎಸ್. ಅಧಿಕಾರಿ ರಾಜೀನಾಮೆ ಕೊಟ್ಟು ಆಂಧ್ರದಲ್ಲಿ ಎಲೆಕ್ಷನ್ ನಿಂತು ಬಂದವರಿಗೆ ನೀವು ರೀಹ್ಯಾಬಿಲಿಟೇಷನ್ ಮಾಡಿದಿರಿ. ನಿಮ್ಮ ಸರ್ಕಾರದ ಕಾರ್ಯದರ್ಶಿಗೆ ಎಷ್ಟು ಸಂಬಳ, ಅದಕ್ಕಿಂತ ಜಾಸ್ತಿ ಅವರಿಗೆ ಕೊಡುತ್ತಿದ್ದೀರಿ. ಆಂಧ್ರದ ಚುನಾವಣೆಯಲ್ಲಿ ಸೋತು ಬಂದಿರತಕ್ಕ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಇಲ್ಲಿಟ್ಟುಕೊಂಡು ಸಂಬಳ ಕೊಡುತ್ತೀರಿ. ಈ ರೀತಿಯ ರೀಹ್ಯಾಬಿಲಿಟೇಷನ್ ಸೆಂಟರ್‌ಗಳನ್ನು ನಿಮ್ಮ ಕಾಂಗ್ರೆಸ್‌ನವರು ಮಾಡುತ್ತಾ ಹೋಗುತ್ತೀರಿ. ನಿಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಎಂದು ಹೇಳಿದರೆ - ಏನು ಅರ್ಥ ಇದೆ? ನೀವು ಮಾತಲಿಲ್ಲ. ಆಂಧ್ರದಲ್ಲಿ ಚುನಾವಣೆಯಲ್ಲಿ ನಿಂತು ಸೋತು ಬಂದಿರತಕ್ಕ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಇಲ್ಲಿ ರೀಹ್ಯಾಬಿಲಿಟೇಟ್ ಮಾಡಲಿಲ್ಲ? ನಿಮ್ಮ ಸರ್ಕಾರದ ಕಾರ್ಯದರ್ಶಿಗಿಂತ ಅವರಿಗೆ ಹೆಚ್ಚು ಸಂಬಳ ಕೊಡುತ್ತಿದ್ದೀರಿ. ಕರ್ನಾಟಕ ರಾಜ್ಯದ ಜನರ ಬೊಕ್ಕಸದಿಂದ ತೆಗೆದು ಸಂಬಳ ಕೊಡುತ್ತಿದ್ದೀರಿ.

ಅಧ್ಯಕ್ಷರು : ತಾವು ಅಮೆಂಡ್‌ಮೆಂಟ್ ಬಗ್ಗೆ ಮಾತನಾಡಿ. ನೀವು ಮುಗಿಸದಿದ್ದರೆ ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಇದು ರೆಲೆವೆಂಟ್ ವಿಚಾರ. ರೀಹ್ಯಾಬಿಲಿಟೇಷನ್ ಸೆಂಟರ್‌ಗಳನ್ನು ನೀವು ಮಾಡಲಿಕ್ಕೆ ಹೊರಟಿರುವುದು ರೆಲೆವೆಂಟ್.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವರು ಕೇಂದ್ರದಲ್ಲಿ ಯಾರ್‍ಯಾರನ್ನು ರೀಹ್ಯಾಬಿಲಿಟೇಷನ್ ಮಾಡಿದ್ದಾರೆ? ರಾಜ್ಯದಲ್ಲಿ, ಹೊರಗೆ..

ಶ್ರೀ ಅರಗ ಜ್ಞಾನೇಂದರ : ಕೇಂದ್ರದ ಬಗ್ಗೆ ಮಾತನಾಡಲು ಅಲ್ಲಿ ಲೋಕಸಭೆ ಇದೆ. ಅಲ್ಲಿ ಮಾತನಾಡಲಿ. ನಾವು ಕರ್ನಾಟಕ ರಾಜ್ಯದ ಜನರ ಹಿತದೃಷ್ಟಿ ಇಟ್ಟುಕೊಂಡು ವಿಧಾನಸಭೆಯಲ್ಲಿ ಮಾತನಾಡುವ ಹಕ್ಕು ಇದೆ. ನಾನು ಮಾತನಾಡುತ್ತೇನೆ. ಇಂತಹ ತಿದ್ದುಪಡಿಯನ್ನು ತಂದು...

(ಗೊಂದಲ)

ಅಧ್ಯಕ್ಷರು : ತಾವು ಮುಗಿಸುತ್ತೀರೋ ಇಲ್ಲವೋ?

SRI D.B. CHANDRE GOWDA:- It is always in a democratic set up, the opposition will always have their say and the Government will have its way. ನೀವು ಸೋತವರನ್ನು ಅಪಾಯಿಂಟ್ ಮಾಡಿಲ್ಲವಾ? ನಿಮ್ಮ ಕೇಂದ್ರ ಸರ್ಕಾರ ಮಾಡಿಲ್ಲವಾ? ಅಸೆಂಬ್ಲಿ ಚುನಾವಣೆಯಲ್ಲಿ ಸೋತವರನ್ನು ಛೇರ್ಮನ್ ಮಾಡಲಿಲ್ಲವಾ? ಈ ರಾಜ್ಯದಲ್ಲೇ.

ಶ್ರೀ ಅರಗ ಜ್ಞಾನೇಂದ್ರ : ಸ್ವಾಮಿ ಯಾರನ್ನು? ಸರ್ಕಾರಿ ಅಧಿಕಾರಿ, ಐ.ಎ.ಎಸ್. ಅಧಿಕಾರಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಕರ್ನಾಟಕ ರಾಜ್ಯದಲ್ಲಿ ಐ.ಎ.ಎಸ್. ಅಧಿಕಾರಿ ಆಗಿದ್ದು ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಂಡು ಹೋಗಿ ಆಂಧ್ರದಲ್ಲಿ ಚುನಾವಣೆಗೆ ನಿಂತು ಸೋತು ಇಲ್ಲಿಗೆ ಬಂದಿದ್ದಾರೆ. ಆ ಮನುಷ್ಯನನ್ನು ರೀಹ್ಯಾಬಿಲಿಟೇಟ್ ಮಾಡಲಿಲ್ಲವಾ ನೀವು.

(ಗೊಂದಲ)

ಅಧ್ಯಕ್ಷರು : ತಾವು ಮುಗಿಸುವುದಿಲ್ಲ. ಮಾನ್ಯ ಬಚ್ಚೇಗೌಡರನ್ನು ನಾನು ಮಾತನಾಡಲು ಕರೆಯುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಇಂತಹ ಅಮೆಂಡ್‌ಮೆಂಟ್‌ಗಳನ್ನು ನಾವು ತಿರಸ್ಕಾರ ಮಾಡುತ್ತೇವೆ. ಇದು ರಾಜಕೀಯ ದುರುದ್ದೇಶದಿಂದ ತಂದಿರತಕ್ಕಂಥಹ ಅಮೆಂಡ್‌ಮೆಂಟ್.

ಇದನ್ನು ದಯವಿಟ್ಟು ಸರ್ಕಾರ ವಾಪಸ್ ಪಡೆಯಬೇಕು; ರಾಜ್ಯದ ಜನತೆಯ ಹಿತದೃಷ್ಟಿಯಿಂದ ವಾಪಸ್ ಪಡೆಯಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಓಟು ಹಾಕೋಣ. ವಾಪಸ್ ಏಕೆ ತೆಗೆದುಕೊಳ್ಳಬೇಕು.

+ ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೆ, ಏನು ತಿದ್ದುಪಡಿ ಮಸೂದೆಯನ್ನು ಮಾನ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರು ತಂದಿದ್ದಾರೆ, ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ಆಗಿ ಇದರ ಬಗ್ಗೆ ವಿರೋಧ ವ್ಯಕ್ತಪಡಿಸಿ ಅದನ್ನು ಅವರು ವಾಪಸ್ ಪಡೆಯಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇದು ಸರ್ಕಾರೀ ತತ್ವಕ್ಕೆ ಮಾರಕ, ಮತ್ತು ತಿಲಾಂಜಲಿಯನ್ನು ಕೊಡುವಂತಹ ವ್ಯವಸ್ಥೆ. ಏಕೆಂದರೆ ಕಾರಣ ಇವರು ಕೊಟ್ಟಿದ್ದಾರೆ. ಈಗಾಗಲೇ ಎರಡು ವರ್ಷ ಒಂದು ಹೊಸ ಸಮಿತಿ ನೇಮಕ ಮಾಡಿದ ಮೇಲೆ ಅವಕಾಶ ಇದೆ. ಆದಾದ ಮೇಲೆ ಅದನ್ನೇ ಮತ್ತೆ ಒಂದು ವರ್ಷ ಮುಂದುವರಿಸಿಕೊಂಡು ಹೋಗಬಹುದು ಎಂದು ಇದೆ. ಈಗ ಅದಕ್ಕೆ ಇನ್ನೂ ಒಂದು ವರ್ಷ ಅವಧಿ, ಅಂದರೆ ನಾಲ್ಕು ವರ್ಷ ಕೊಡುವಂತಹದು. ಎರಡು ವರ್ಷದ ಅವಧಿಯಲ್ಲೇ ಚುನಾವಣೆ ಆಗಬೇಕು. ಇರುವಂತಹ ಎರಡು ವರ್ಷದಲ್ಲಿಯೇ ಆ ಚುನಾವಣೆ ಆಗುವಂತಹ ಒಂದು ವ್ಯವಸ್ಥೆ ಬೇರೆ. ಅದು ಮಾಡದೇ ಮತ್ತೆ ಇನ್ನೊಂದು ವರ್ಷ ಕೊಡುವಂತಹದು, ಎಕ್ಸಟೆನ್‌ಷನ್ ಅವಧಿ. ಅದರಲ್ಲಿ ನಾಲ್ಕು ವರ್ಷ ಮಾಡಿಕೊಂಡಿರತಕ್ಕದ್ದು. ಮಾನ್ಯ ಸಚಿವರು ಇದನ್ನು ತಂದು ನಾಲ್ಕು ವರ್ಷ ನಾವು ನಡೆಸಿಕೊಂಡು ಹೋಗುವಂತಹ ಸಮಿತಿ ಎಂದಿದ್ದಾರೆ. ಈ ಸಮಿತಿಗಳು ಏನು ಮಾಡುತ್ತಿವೆ? ಈ ಸಮಿತಿಗಳು ಏನು ಮಾಡುತ್ತಿವೆ ಎಂಬ ಬಗ್ಗೆ ಮಾನ್ಯ ಸದಸ್ಯರಾದಂತಹ ಅರಗ ಜ್ಞಾನೇಂದ್ರ, ವಿಶ್ವೇಶ್ವರ ಹೆಗಡೆ ಅವರುಗಳು ಹೇಳಿದರು. ಬೇಕಾದಷ್ಟು ಅವ್ಯವಹಾರಗಳು ಆಗುವಂತಹದು. ಸೆಸ್ ವಸೂಲಿನಲ್ಲಿ ಅಲ್ಲಿರತಕ್ಕಂಥಹ ಅಡ್ಮಿನಿಸ್ಟ್ರೇಟರ್, ಅಲ್ಲಿರತಕ್ಕಂಥಹ ಸೆಕ್ರೆಟರಿ, ಬೇಕಾದಷ್ಟು ಕಡೆ ಹೋಗುವುದು, ಸೆಸ್ ವಸೂಲಿ ಮಾಡುವುದು. ಸರಿಯಾದ ಜಮಾ ಅದಕ್ಕೆ ಇಲ್ಲ. ರಸೀದಿ ಹಾಕುವುದಿಲ್ಲ. ಅವನು ಹೇಳುವಾಗ ಎರಡು ಸಾವಿರ ರೂಪಾಯಿ ಮಾಲು ಇದೆ ಎಂದರೆ ಎಂದು ಸಾವಿರ ಎಂದು ಅವನ ಹತ್ತಿರ ಕಡಿಮೆ ಮಾಡಿಕೊಳ್ಳುವುದು. ಅಂತಹ ರಸೀದಿ ಹಾಕುವುದು. ಇಂತಹ ವ್ಯವಸ್ಥೆಗಳಿಗೆ ಇದು ಮಾಡುವಂತಹದು. ಅದಕ್ಕಾಗಿ ಇದಕ್ಕೆ ಆಡಳಿತ ಮಂಡಳಿ ಬಂದರೆ, ಚುನಾಯಿತ ಪ್ರತಿನಿಧಿಗಳು ಬಂದಾಗ ಜವಾಬ್ದಾರಿ ಇರುತ್ತದೆ. ಹೌದು ನಾವು ಏನಕ್ಕೆ ಉತ್ತರ ಹೇಳಬೇಕು. ರೈತರಿಗೆ ಉತ್ತರ ಹೇಳಬೇಕು ಎಂದು ಜವಾಬ್ದಾರಿ ಇರುತ್ತದೆ. ಅದಕ್ಕೆ ಇದನ್ನು ನಾಲ್ಕು ವರ್ಷ ಮಾಡುವಂತಹದು. ಈ ಒಂದು ದುರುದ್ದೇಶದಿಂದ ತಂದಿರತಕ್ಕಂಥಹ ತಿದ್ದುಪಡಿ. ದಯವಿಟ್ಟು ಇದನ್ನು ವಾಪಸ್ ಪಡೆಯಿರಿ. ತಮ್ಮ ಕಾಲದಲ್ಲಿ ಇದು ಆಗಬಾರದು. ನೀವೇನು ಒಳ್ಳೆಯ ಆಡಳಿತ ಕೊಡುತ್ತೇವೆ, ಪಾರದರ್ಶಕ ಆಡಳಿತ ಎಂದು ಹೇಳುತ್ತೀರಿ, ಇದು ಪಾರದರ್ಶಕ ಅಲ್ಲ. ಇದು ಪಾರದರ್ಶಕದ ವ್ಯವಸ್ಥೆ ಅಲ್ಲ, ಇದು ರೈತರಿಗೆ ಮೋಸ ಮಾಡುವಂತಹ ವ್ಯವಸ್ಥೆ ಅಷ್ಟೇ. ಇದು ಯಾರೋ ಅಧಿಕಾರಿಗಳು, ಯಾರೋ ದಲ್ಲಾಳಿಗಳು ಅಲ್ಲಿರುವಂತಹವರು ತಿನ್ನುವ ವ್ಯವಸ್ಥೆಗೆ ನೀವು ನಾಲ್ಕು ವರ್ಷ ಅವರಿಗೆ ಸಮಯ ಕೊಡುತ್ತೀರೇ ಚುನಾಯಿತರಾಗಿ ಆಡಳಿತ ಮಾಡಲಿ ಎಂದು ಹೇಳಿ ಪ್ರಜಾಪ್ರಭುತ್ವದ ಪದ್ಧತಿ ಪ್ರಕಾರ ಇದು ಕೊಡುವಂತಹ ವ್ಯವಸ್ಥೆ ಅಲ್ಲ. ಆದ್ದರಿಂದ ಈ ತಿದ್ದುಪಡಿಯನ್ನು ವಾಪಸ್ ಪಡೆಯಬೇಕು. ನಂತರ ಈಗಾಗಲೇ ಹೇಳಿದೆ,

ಇದು ಸಹಕಾರಿ ತತ್ವ ಅಲ್ಲ. ಇದು ಮಾರುಕಟ್ಟೆ, ವ್ಯಾಪಾರ ವ್ಯವಹಾರದಲ್ಲಿ ಕೂತುಕೊಳ್ಳುವಂತಹದು. ಸಹಕಾರಿ ಕ್ಷೇತ್ರದಲ್ಲಿ ಅವಿಶ್ವಾಸ ತರುವಂತಹ ವ್ಯವಸ್ಥೆ ಅಲ್ಲಿ ಇಲ್ಲ. ಇದಕ್ಕೆ ಮಾರುಕಟ್ಟೆ ಸಮಿತಿಯಲ್ಲಿ ಮಾತ್ರ ಅವಕಾಶ ಇರುವಂತಹದು. ಆ ಮಾರುಕಟ್ಟೆ ಸಮಿತಿ ಈಗ ಟೂ ಥರ್ಡ್‌ಮೆಜಾರಿಟಿ ಎಂದು ಇತ್ತು. ಇವತ್ತು ಸಿಂಪಲ್ ಮೆಜಾರಿಟಿ ಎಂದು ತರುವಂತಹ ವ್ಯವಸ್ಥೆ. ಏನು ಒನ್ ಥರ್ಡ್ ಮೆಂಬರ್ಸ್ ಕೊಟ್ಟರೆ ಅವಿಶ್ವಾಸ ಅಧ್ಯಕ್ಷರ ಮೇಲೆ ಉಪಾಧ್ಯಕ್ಷರ ಮೇಲೆ, ಅವತ್ತು ಒಂದು ಸಮಯ ನಿಗದಿ ಮಾಡಿ ಅವತ್ತು ಇರುವಂತಹ ಸದಸ್ಯರಲ್ಲಿಯೇ ಎಷ್ಟಾದರೂ ಆಗಬಹುದು; ನಾಮಿನೇಟೆಡ್ ಸದಸ್ಯರು ಆಗಬಹುದು, ಬೇರೆಯವರು ಆಗಬಹುದು. ಯಾರಾದರೂ 4,6,8 ಎಷ್ಟು ಸಂಖ್ಯೆ ಸಮಿತಿಯಲ್ಲಿ ಇರುತ್ತದೋ, ಅದರಲ್ಲಿ ಬಹುಮತ ಬಂತು ಎಂದು ಹೇಳಿ ಘೋಷಣೆ ಮಾಡಿಕೊಂಡು ಆಚೆ ಹೋದರೆ ಅಥವಾ ಒಂದು ರೆಸಲ್ಯೂಷನ್ ಮಾಡಿದರೆ ಇಷ್ಟು ದಿವಸ ಆದ ಮೇಲೆ ಆ ರೆಸಲ್ಯೂಷನ್ ಎಫೆಕ್ಟ್‌ಗೆ ಬಂತು ಎಂದು ಹೇಳಿ ಅಧ್ಯಕ್ಷರು : ಉಪಾಧ್ಯಕ್ಷರನ್ನು ಆಚೆ ಇಡುವಂತಹ ವ್ಯವಸ್ಥೆ. ಇಂತಹದನ್ನು ನಾವೆಲ್ಲೂ ನೋಡಲಿಲ್ಲ. ಇಂತಹ ಒಂದು ಪರಿಸ್ಥಿತಿಯನ್ನು ಇನ್‌ಕಾರ್ಪೊರೇಟ್ ಮಾಡಿ ಮಾಡುವಂತಹ ವ್ಯವಸ್ಥೆ. ಅದಕ್ಕೆ ಇದರಲ್ಲಿ ಏನು ಆಗುತ್ತದೆ ಎಪಿಎಂಸಿ ಗಳಲ್ಲಿ ಅಂದರೆ ವರ್ಷ ಇದ್ದುದ್ದನ್ನು ಆರು ತಿಂಗಳಿಗೆ ತಂದಿದ್ದಾರೆ. ಆರು ತಿಂಗಳಿಗೆ ಒಂದೊಂದು ಸಮಿತಿಗಳು ಆಡಳಿತ ಇನ್ನು ಮುಂದೆ ಮಾಡುವಂತಹದು. ವರ್ಷವಾದರೂ ಕಾಯಬಹುದಿತ್ತು. ಇನ್ನು ಆರಾರು ತಿಂಗಳಿಗೆ ಒಬ್ಬೊಬ್ಬರು. ಅವನು ಆ ಸದಸ್ಯರುಗಳನ್ನು ಚೆನ್ನಾಗಿ ಇಟ್ಟು ಕೊಳ್ಳಬೇಕು. ಡೈರೆಕ್ಟರ್ಸ್‌ನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಅವನಿಗೆ ಇಷ್ಟು ವ್ಯವಸ್ಥೆ ಎಂದು ಕೊಡದಿದ್ದರೆ ತಿಂಗಳಿಗೆ ಇಷ್ಟು ಸಾವಿರ ಎಂದು ಅವನೇನಾದರೂ ಮಾಮೂಲಿ ಕೊಡದೇ ಇದ್ದರೆ ಅವನ ಕಥೆ ಮುಗಿಯಿತು. ಮಾತನಾಡಿಕೊಂಡು ಎತ್ತಿ ಹಾಕಿ ಬಿಡುತ್ತಾರೆ. ಡಿಮ್ಯಾಂಡ್ ಮಾಡುತ್ತಾರೆ. ಈ ಎಪಿಎಂಸಿ ಚೆನ್ನಾಗಿದೆ. ಇದರಲ್ಲಿ ಇಷ್ಟು ಸಾವಿರ ಕೊಟ್ಟರೆ ನಿನ್ನನ್ನು ಅಧ್ಯಕ್ಷನನ್ನಾಗಿ ಮುಂದುವರಿಸುತ್ತೇನೆ ಎಂದೆಲ್ಲಾ ಹೇಳುತ್ತಾರೆ. ಕೆಲವು ಕಡೆ ಮೀಟಿಂಗ್‌ಗಳಿಗೆ ಹೋಗುವುದಕ್ಕೆ ದುಡ್ಡು ತೆಗೆದುಕೊಳ್ಳುತ್ತಾರೆ. ಕೈ ಎತ್ತಿ ಮೀಟಿಂಗ್‌ಗೆ ಬರಬೇಕಾದರೆ ದುಡ್ಡು ಕೊಡಿ ಎಂದು ಕೇಳುತ್ತಾರೆ. ಆ ಸದಸ್ಯರಿಗೆ ರಾತ್ರಿ ಹೋಗಿ ಡೈರೆಕ್ಟರ್ ದುಡ್ಡು ಕೊಡಬೇಕು. ಇನ್ನೂ ಏನೇನೋ ಕೊಡಬೇಕು. ಇಲ್ಲದಿದ್ದರೆ ಅವರು ಕೈ ಎತ್ತುವುದಿಲ್ಲ. ಮೀಟಿಂಗ್‌ಗೇ ಒಳಗೇ ಬರುವುದಿಲ್ಲ.

4.50 ಪಿ.ಎಂ.

ಆದುದರಿಂದ, ದಯವಿಟ್ಟು ತಾವು ಇದನ್ನು ವಾಪಸ್ಸು ಪಡೆಯಬೇಕು. ತಾವೇನು ಸರಳ ಬಹುಮತ ತಂದಿದ್ದೀರಿ, ಇದರ ಬದಲು ಮೂರನೇ ಎರಡು ಭಾಗದಷ್ಟು ಬಹುಮತವಿದ್ದರೆ ಅದಕ್ಕೆ ಬೆಲೆ ಬರುತ್ತದೆ ಮತ್ತು ಅಧ್ಯಕ್ಷರಾದವರು ಕಾರ್ಯನಿರ್ವಹಿಸಬಹುದಾಗಿರುತ್ತದೆ. ಇನ್ನೊಂದು ವಿಚಾರವಾಗಿ ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಬಹಳಷ್ಟು ವಾದ ಮಾಡಿರುವುದೇನೆಂದರೆ, ನಿರ್ದೇಶಕರಾದವರಿಗೆ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಮಾಡುವುದಕ್ಕೆ ಅಧಿಕಾರದ ಅವಕಾಶ ಮಾಡಿಕೊಟ್ಟಿದ್ದೀರಿ, ಇದು ಸರ್ಕಾರದ ನಿಯಂತ್ರಣದಲ್ಲಿರಲಿ ಹಾಗೂ ಸರ್ಕಾರವೇ ಅಧಿಕಾರವನ್ನು ಹಂಚಲಿ. ಯಾರು ನಿರ್ದೇಶಕರಿದ್ದಾರೆ, ಅವರ ಮನಸೋ ಇಚ್ಛೆ ಕೊಡುವುದಾಗಬಾರದು, ರೈತರ ಹಣ ದುರುಪಯೋಗವಾಗಬಾರದು. ಆ ಸದುದ್ದೇಶದಿಂದ

ಕೆಲವು ವಿಚಾರಗಳನ್ನು ವಾಪಸ್ಸು ಪಡೆಯಬೇಕೆಂದರು. ಆದರೆ, ನಾನು ಹೇಳುವುದೇನೆಂದರೆ, ಸರ್ಕಾರ ಮಂಡಿಸಿರುವ ಈ ವಿಧೇಯಕವನ್ನೇ ಒಟ್ಟಾರೆ ವಾಪಸ್ಸು ಪಡೆಯಬೇಕೆಂದು ಮಾನ್ಯ ಸಚಿವರಿಗೆ ಹಾಗೂ ಸರ್ಕಾರಕ್ಕೆ ಒತ್ತಾಯ ಮಾಡುತ್ತಾ, ಸರ್ಕಾರ ತಂದಿರುವ ತಿದ್ದುಪಡಿಯನ್ನು ವಿರೋಧಿಸುತ್ತಾ, ಅಧ್ಯಕ್ಷರಾದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿ ಕುರಿತು ನನಗೆ ಮಾತನಾಡಬೇಕೆಂಬ ಮನಸ್ಸು ಇರಲಿಲ್ಲ. ಕಳೆದ 2-3 ತಿಂಗಳುಗಳಿಂದಲೂ ತಾವು ಈ ತಿದ್ದುಪಡಿಯನ್ನು ತರಬೇಕೆಂದು ಪ್ರಯತ್ನಿಸಿದ್ದೀರಿ. ಆದರೆ, ಪ್ರಸಕ್ತ ಸಾಲಿನ ವರ್ಷದ ಆಯವ್ಯಯ ಮುಂಗಡ ಪತ್ರವನ್ನು ಓದಿದ ಬಳಿಕ ಇವೊತ್ತು ಇಡೀ ರಾಜ್ಯಾದ್ಯಂತವಿರುವ ಎ.ಪಿ.ಎಂ.ಸಿ. ಗಳಿಗೆ ಬಹಳ ಮಹತ್ವ ಬರುತ್ತದೆ. ತಮಗೆ ಗೊತ್ತಿರುವಂತೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ 'ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನಾಲ್ಕು ನೂರು ಕೋಟಿ ರೂಪಾಯಿಗಳ 'ಆವರ್ತ ನಿಧಿ' ಇಟ್ಟು, ಕೇಂದ್ರ ಸರ್ಕಾರದಿಂದ ಇನ್ನೂರು ಕೋಟಿ ರೂಪಾಯಿಗಳ ಸಹಾಯ ಕೇಳುತ್ತೇವೆ. ರೈತರ ಪಾಲಿಗೆ ನಿಜವಾಗಿಯೂ ಸಹಾಯ ಮಾಡುವ ದೃಷ್ಟಿಯಿಂದ ಆವರ್ತ ನಿಧಿ ಸ್ಥಾಪಿಸಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದವರು ನಿರ್ವಹಿಸುತ್ತಿರುವ ಕೆಲಸವನ್ನು ಎ.ಪಿ.ಎಂ.ಸಿ.ಗಳಿಗೆ ವಹಿಸಿಕೊಡುವುದಾಗಿ ತಮ್ಮ ಆಯವ್ಯಯ ಪತ್ರದ ಭಾಷಣದಲ್ಲಿ ತಿಳಿಸಿದ್ದಾರೆ. ತಮಗೆ ಜ್ಞಾಪಕವಿರಬಹುದು. ಸದರಿ ನಿಗಮದಲ್ಲಿದ್ದ ವ್ಯವಸ್ಥಾಪಕ ನಿರ್ದೇಶಕರೊಬ್ಬರನ್ನು ಅವಮಾನಗೊಳಿಸಿದ ಒಂದು ವಾರದಲ್ಲಿಯೇ ಅವರ ಕ್ಷಮೆ ಯಾಚಿಸಿ ಮತ್ತೆ ವಾಪಸ್ಸು ಕರೆಸಿಕೊಂಡರಲ್ಲಾ, ಆ ನಿಗಮದ ಕುರಿತು ನಾನು ಹೇಳುತ್ತಿದ್ದೇನೆ. ನಿಗಮದ ಜವಾಬ್ದಾರಿಯನ್ನು ಇವೊತ್ತು ಕರ್ನಾಟಕ ರಾಜ್ಯದಲ್ಲಿರುವ ಎ.ಪಿ.ಎಂ.ಸಿ. ಗಳಿಗೆ ಕೊಡುವುದಕ್ಕೆ ಸರ್ಕಾರ ಹೊರಟಿದೆ. ಇದು ಒಂದು ರೀತಿಯಲ್ಲಿ ಸರಿಯೋ ತಪ್ಪೋ ಎಂಬುದು ಟ್ರಯಲ್ ಅಂಡ್ ಎರರ್ ಎಂದು ತಿಳಿದುಕೊಳ್ಳಬಹುದೇ ಹೊರತು ಎ.ಪಿ.ಎಂ.ಸಿ. ಯಲ್ಲಿ ಕುಳಿತಿರುವ ಒಬ್ಬ ಅಧಿಕಾರಿ ಇದನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ. ನಿನ್ನೆ ವಿಧಾನ ಪರಿಷತ್ತಿನಲ್ಲಿ ಯಾರೋ ಒಬ್ಬ ಮಾನ್ಯ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳನ್ನು ಉದ್ದೇಶಿಸಿ ತಾವು ಬಹಳ ಉನ್ನತವಾದ ಸ್ಥಾನಕ್ಕೆ ಹೋಗತಕ್ಕಂಥ ಎಲ್ಲಾ ಲಕ್ಷಣಗಳೂ ತಮ್ಮಲ್ಲಿ ಕಾಣುತ್ತಿವೆ' ಎಂದಿದ್ದಾರೆ. ಬಹುಶಃ ಮುಖ್ಯಮಂತ್ರಿಗಳಿಗೆ ಅದರಿಂದ ಪ್ರೇರಣೆಯಾಗಿದ್ದರೆಂದು ನಾನು ಭಾವಿಸುತ್ತೇನೆ. ಅವರು ಏನು ಹೇಳಿದ್ದಾರೆಂದರೆ, ತಮಗೆ ಗೊತ್ತಿರುವಂತೆ, ಓ.ಎ.ಪಿ. ವಿತರಿಸುವ ಕಾರ್ಯವನ್ನು ಗ್ರಾಮ ಪಂಚಾಯಿತಿಗಳಿಗೆ ಕೊಡುವಷ್ಟು ವಿಕೇಂದ್ರಿಕರಣದಲ್ಲಿ ಇವರಿಗೆ ನಂಬಿಕೆ ! ಅಂಗನವಾಡಿಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನೂ ಸಹ ಗ್ರಾಮ ಪಂಚಾಯಿತಿಗಳಿಗೆ ಕೊಡುವಷ್ಟು ವಿಕೇಂದ್ರಿಕರಣದಲ್ಲಿ ಇವರಿಗೆ ನಂಬಿಕೆ ! ಶಾಲೆಗಳ ಉಸ್ತುವಾರಿ ನೋಡಲು ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳ ಸದಸ್ಯರಿಗೆ ಕೊಡುವಷ್ಟು ವಿಕೇಂದ್ರಿಕರಣದಲ್ಲಿ ಇವರಿಗೆ ನಂಬಿಕೆ ! ನನಗಿಂತಲೂ ಹೆಚ್ಚಿನ ಅನುಭವವಿರುವ, ಜನರಿಗೆ ಹತ್ತಿರವಾಗಿ, ಕೆಳ ಹಂತದಲ್ಲಿ ಕಾರ್ಯನಿರ್ವಹಿಸುವ ಗೌರವಾನ್ವಿತ ಸದಸ್ಯರುಗಳು ಸದನದಲ್ಲಿರುವುದರಿಂದ ತಾವು ದಯವಿಟ್ಟು ಹೇಳಬೇಕು: ಇದನ್ನೆಲ್ಲಾ ಮಾಡುವುದಕ್ಕಾಗುತ್ತದೆಯೇ? ಇದನ್ನು ಮಾಡಿದರೆ ನಮ್ಮ-ನಿಮ್ಮ ಪರಿಸ್ಥಿತಿ ಏನಾಗುತ್ತದೆಂಬುದನ್ನು ವಿಚಾರ ಮಾಡಬೇಕು. ವಿಕೇಂದ್ರಿಕರಣವಾದ ಬಳಿಕ ಇವೊತ್ತಿನ ವ್ಯವಸ್ಥೆ

ಎಷ್ಟರಮಟ್ಟಿದೆ ಅವ್ಯವಸ್ಥೆಯಾಗಿದೆ ಎಂಬುದನ್ನು ತಾವು ನೋಡಿದ್ದೀರಿ. ಅಲ್ಲದೆ, ರಾಜ್ಯಾದ್ಯಂತ ನೀರಾವರಿ ಸೊಸೈಟಿಗಳನ್ನು ಸ್ಥಾಪಿಸಬೇಕೆಂದು ತಾವು ಬಹಳ ಉತ್ಸಾಹದಿಂದ ಹೊರಟಿರಿ. ಟೇಲ್ ಎಂಡ್‌ಗೆ ಒಬ್ಬರು, ಮದರ್ ಲ್ಯಾಂಡ್‌ಗೆ ಒಬ್ಬರು, ಫಾದರ್ ಲ್ಯಾಂಡ್‌ಗೆ ಒಬ್ಬರು, ಸೆಂಟ್ರಲ್ ಲ್ಯಾಂಡ್‌ಗೆ ಒಬ್ಬರು ಎಂಬಂತೆ ಎಲ್ಲಾ ಕಡೆಗಳಲ್ಲೂ ಒಂದೊಂದು ಸೊಸೈಟಿ ಸ್ಥಾಪಿಸಿದಿರಿ. ಈಗ ಆ ಕುರಿತ ಉತ್ಸಾಹವೇ ಕಡಿಮೆಯಾಗಿದೆ. ಸಣ್ಣ ನೀರಾವರಿ ಮಂತ್ರಿಗಳಂತೂ ಬಹಳ ನಿರುತ್ಸಾಹದಿಂದಿದ್ದಾರೆ. ಅವರ ಪರಿಸ್ಥಿತಿ ಹೇಗಿದೆ ಎಂಬುದನ್ನು ಅವರ ಇಲಾಖಾಧಿಕಾರಿಗಳಿಂದ ಕೇಳಿ ತಿಳಿದಿದ್ದೇನೆ. ಅವರ ಇಲಾಖೆಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಭಾರಿ ಮೊತ್ತದ ಹಣವನ್ನು ಅವರ ಇಲಾಖೆಗೆ ಕೊಟ್ಟಿದ್ದಾರೆ. ಏಕೆಂದರೆ, 'ಜಲ ಸಂವರ್ಧಿನಿ ಕಾರ್ಯಕ್ರಮ' ದಲ್ಲಿ ಕಳೆದ ವರ್ಷ 25,000 ಕೆರೆಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳುತ್ತೇವೆಂದು ಹೇಳಿದ್ದು, ಪ್ರಸಕ್ತ ವರ್ಷ ಅದು 5,000 ಕ್ಕೆ ಇಳಿದಿದೆ. ಅವರು ಸ್ವಲ್ಪ ವಾಸ್ತವವಾಗಿ ನೆಲದ ಹತ್ತಿರ ಬಂದಿರುವುದರಿಂದ ಮುಂದೆ ಅದು 1,000ಕ್ಕೆ ಇಳಿಯುತ್ತದೋ ಇಲ್ಲವೇ 500ಕ್ಕೆ ಇಳಿಯುತ್ತದೋ ಪರ್‌ಫಾರ್ಮೆನ್ಸ್ ಬಜೆಟ್ ನೋಡಿದಾಗ ಗೊತ್ತಾಗುತ್ತದೆ. ಈ ಕುರಿತು ಪರ್‌ಫಾರ್ಮೆನ್ಸ್ ಬಜೆಟ್ ನೋಡಿ ಮಾತನಾಡಬೇಕೆಂದು ಅವರೇ ಹೇಳಿದ್ದಾರೆ. ನಾನು ಈ ಮಾತನ್ನು ಏಕೆ ಹೇಳಿದೆನೆಂದರೆ, ನೀರಾವರಿ ಸೊಸೈಟಿಗಳು ಕಾಂಗ್ರೆಸ್ಸೀಕರಣವಾಯಿತು. ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಅಧಿಕಾರವನ್ನು ಎ.ಪಿ.ಎಂ.ಸಿ.ಗಳಿಗೆ ಕೊಟ್ಟು ಅದಕ್ಕೆ ನಾಲ್ಕು ನೂರು ಕೋಟಿ ರೂಪಾಯಿಗಳ....

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಆರ್. ನೀಲಕಂಠಪ್ಪನವರು ಎದ್ದು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : ನೀಲಕಂಠಪ್ಪನವರೆ, ಮಾನ್ಯ ಸಿಂಧ್ಯರವರು ಮಾತನಾಡುತ್ತಿದ್ದು ಅವರು ಯೀಲ್ಡ್ ಆಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ತಾವು ನನ್ನ ರಕ್ಷಣೆಗೆ ಬರಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಅಧ್ಯಕ್ಷರೆ, ಮಾನ್ಯ ನೀಲಕಂಠಪ್ಪನವರಿಗೆ ಮಾತನಾಡಲು ಅನಂತರ ಅರ್ಧ ಗಂಟೆಯ ಅವಕಾಶ ಮಾಡಿಕೊಡಿ, ಮಾತನಾಡಲಿ.

ಶ್ರೀ ಬಿ.ಆರ್. ನೀಲಕಂಠಪ್ಪ : ಆಯಿತು, ಕುಳಿತುಕೊಳ್ಳಿ, ನಾವೂ ಮಾತನಾಡುವುದಕ್ಕೆ ಬಂದಿರುವುದು.

ಅಧ್ಯಕ್ಷರು : ತಾವು ಆ ತರಹ ಮಾತನಾಡಬಾರದು.

ಶ್ರೀ ಬಿ.ಎನ್. ಬಚ್ಚೇಗೌಡ : ಸದನದ ನಾಯಕರು ಮಾತನಾಡುತ್ತಿರುವಾಗ ಈ ರೀತಿ ಮಧ್ಯೆ ಮಾತನಾಡಿದರೆ ಹೇಗೆ?

ಅಧ್ಯಕ್ಷರು : ನೀಲಕಂಠಪ್ಪನವರೇ, ತಮಗೆ ಯೀಲ್ಡ್ ಆಗದಿದ್ದರೆ ತಾವು ಮಾತನಾಡ ಬಾರದು.

ಶ್ರೀ ಬಿ.ಆರ್. ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೆ, ಅವರು ವಿಷಯವನ್ನು ಬೇರೆಡೆಗೆ ತಿರುಗಿಸುತ್ತಿದ್ದಾರೆ. ರಾಜ್ಯದಲ್ಲಿ ನೀರಾವರಿ ಸಂಘಗಳು ಈಗ ತಾನೇ ಜನ್ಮ ತಾಳಿರುವುದರಿಂದ ಅದರ ಕಾರ್ಯಾಚರಣೆ ಗಮನಿಸಬೇಕಾದರೆ ಇನ್ನೂ ಒಂದು ವರ್ಷ ಕಾಲ ಬೇಕಾಗುತ್ತದೆ. ಸಂಘಗಳು ಈಗಾಲೇ ಹಾಳಾಗಿದೆ ಎಂದರೆ ಏನರ್ಥ? ಅವು ಇನ್ನೂ ಕಾರ್ಯಾಚರಣೆ ಪ್ರಾರಂಭಿಸಿಲ್ಲ. ನೀರಾವರಿ ಸಚಿವರು ಬಹಳ ಉತ್ಸಾಹದಿಂದ ಸಂಘಗಳನ್ನು ಪ್ರಾರಂಭಿಸಿದ್ದಾರೆ. ಇದರಲ್ಲಿ ಹಣವನ್ನು ತೊಡಗಿಸುತ್ತಿದ್ದು ಯಾವ್ಯಾವ ರೀತಿ ಕಾರ್ಯಾಚರಣೆ ಮಾಡಬೇಕೆಂದು ಮಾನ್ಯ ಮಂತ್ರಿಗಳು ಹೇಳುತ್ತಿರುವಾಗ, ಒಂದು ವರ್ಷ ಕಾಲ ಕಾದು ನೋಡುವುದಕ್ಕಿಂತ ಮುಂಚಿಯೇ ವ್ಯವಸ್ಥೆ ಸರಿಯಿಲ್ಲವೆಂದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಬಿ.ಆರ್. ನೀಲಕಂಠಪ್ಪನವರು ನನ್ನ ಒಳ್ಳೆಯ ಸ್ನೇಹಿತರಾಗಿದ್ದು, ವಿದ್ಯಾರ್ಥಿ ದಿಸೆಯಿಂದ ನಾವಿಬ್ಬರೂ ಒಟ್ಟಿಗಿದ್ದವರೇ. ಅವರು ನಮ್ಮ ಪಕ್ಷದಲ್ಲಿದ್ದು ಶಾಸಕರಾಗಿದ್ದರು. ಮೊನ್ನೆ ಒಂದು ಸಾರಿ ಅವರ ಕ್ಷೇತ್ರಕ್ಕೆ ನಾನು ಹೋಗಿ ಪ್ರಮಾದವೆಸಗಿದ್ದೇನೆ. ಈ ಬಗ್ಗೆ ಅವರಲ್ಲಿ ವೈಯಕ್ತಿಕವಾಗಿ ಕ್ಷಮೆಯಾಚಿಸಿದ್ದೇನೆ. ತಮಗೆ ಗೊತ್ತಿರುವಂತೆ ನಾನು ತಮ್ಮ ಮೇಲೆ ಬಹಳ ನಂಬಿಕೆಯಿಟ್ಟಿರುವವನು. ತಮ್ಮ ಹೆಸರನ್ನು ಕಾರ್ಯಕ್ರಮದ ಪಟ್ಟಿಯಲ್ಲಿ ನಮೂದಿಸಿದ್ದರೂ ಸಹ ತಾವು ಬರಲಿಲ್ಲವಾದ್ದರಿಂದ ನಾನು ಸದರಿ ಕಾರ್ಯಕ್ರಮವನ್ನು ಉದ್ಘಾಟಿಸಿ ವಾಪಸ್ಸು ಬಂದಿದ್ದೇನೆ. ಏಕೆಂದರೆ, ರಾಜ್ಯದಲ್ಲಿ ಒಬ್ಬ ಜವಾಬ್ದಾರಿ ವ್ಯಕ್ತಿಯಾಗಿರುವ ನಮ್ಮ ಕ್ಷೇತ್ರಕ್ಕೆ ನನಗೆ ಗೊತ್ತಿಲ್ಲದಂತೆ ಒಬ್ಬ ಮಂತ್ರಿಗಳು ಬಂದರೆ ನನ್ನ ಮನಸ್ಸಿಗೆ ಎಷ್ಟು ನೋವಾಗುತ್ತದೋ ಅಷ್ಟೇ ನೋವು ನಿಮಗೂ ಆಗುತ್ತದೆಂದು ನಾನು ಮಾಡಲಿಲ್ಲ. ತಮ್ಮ ಮಾತುಗಳನ್ನು ಕೇಳಬೇಕೆಂದೇ ನಾನು ನಿಮಗೆ ಯೀಲ್ಡ್ ಆಗಿದ್ದೆ. ನೀರಾವರಿ ಮಂತ್ರಿಗಳು ನಿಮ್ಮನ್ನು ಯಾವಾಗ ತಮ್ಮ ಲಾಯರ್ ಆಗಿ ನೇಮಿಸಿಕೊಂಡರೆಂದು ನನಗಿನ್ನೂ ಗೊತ್ತಾಗಿಲ್ಲ! ಏಕೆಂದರೆ, ಸಣ್ಣ ನೀರಾವರಿ ಮಂತ್ರಿಗಳು ಸದನದಲ್ಲಿದ್ದಾರೆ.

ಶ್ರೀ ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಾವು ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದಂಥ ಸಂದರ್ಭದಲ್ಲಿ ಮಾನ್ಯ ಹಿರಿಯ ಸದಸ್ಯರಾಗಿರುವ ಸಿಂಧ್ಯರವರು ಬಹಳ ಪ್ರೋತ್ಸಾಹ ಕೊಟ್ಟಿರುವವರಾಗಿದ್ದು, ಎಲ್ಲಾ ಹಿರಿಯ ಮಾನ್ಯ ಸದಸ್ಯರುಗಳೊಂದಿಗೆ ಚರ್ಚಿಸಿದ ತರುವಾಯ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಅಂದರೆ, ಸಂಘದಲ್ಲಿ ಯಾವುದೇ ತರಹದ ಕಾಂಗ್ರೆಸ್ಸೀಕರಣವಾಗಲಿ ಅಥವಾ ಜನತಾದಳ ಅಥವಾ ಬಿ.ಜೆ.ಪಿ. ಮತ್ತೊಂದು ಪಕ್ಷಗಳ ಆಧಾರದ ಮೇಲೆ ಯಾವುದು ಮಾಡಬಾರದೆನ್ನುವ ಕಾರಣಕ್ಕೋಸ್ಕರವೇ ಖಾತೆ, ಪಹಣಿಯುಳ್ಳವರಿಗೆ ಮಾತ್ರ ಸದಸ್ಯತ್ವವಿರಬೇಕೆಂದು ಅವಕಾಶ ಕಲ್ಪಿಸಿಕೊಟ್ಟಿರುವಾಗ ತಾವು ಹೇಳಿರುವಂತೆ ಅಲ್ಲಿ ಕಾಂಗ್ರೆಸ್ಸಿಕರಣ ಹೇಗೆ ಉಂಟಾಗುತ್ತದೆ? ಸಂಘಗಳನ್ನು ಈಗ ತಾನೇ ಪ್ರಾರಂಭಿಸಿರುವುದರಿಂದ ಚುನಾವಣೆಗೆ ಇನ್ನು 3-4 ವರ್ಷಗಳಿರುವುದರಿಂದ ಈಗಲೇ ತಾವು ಆ ರೀತಿ ಹೇಳಿದರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ: ಸಣ್ಣ ನೀರಾವರಿ ಸಚಿವರು ನಮ್ಮ ಜಿಲ್ಲೆಯವರಾಗಿದ್ದು, ಅವರ ಬಗ್ಗೆ ನಮಗೆ ಬಹಳ ಗೌರವವಿದೆ. ಪ್ರಾರಂಭದಲ್ಲಿ ಸಣ್ಣ ನೀರಾವರಿ ಖಾತೆಯನ್ನು ಯುವಕರಿಗೆ ಕೊಟ್ಟಾಗ ಬಹಳ ಚೆನ್ನಾಗಿ ನಿರ್ವಹಿಸುತ್ತಿದ್ದರು. ನೀರಾವರಿ ಸಂಘಗಳು

'ಕಾಂಗ್ರೆಸ್ಸೀಕರಣ' ಆಗಿರದೆ ಪ್ರಸಕ್ತ ವರ್ಷದ ಆಯವ್ಯಯ ಮುಂಗಡ ಪತ್ರದಿಂದ ಕಾಂಗ್ರೆಸ್‌ನಲ್ಲೂ ಗುಂಪುಗಾರಿಕೆಯ ಸ್ಫೋಟವುಂಟಾಗಿದೆ. ಅವರ ಇಲಾಖೆಗೆ ಹಣ ಕೊಟ್ಟರೆ, ಈ ಇಲಾಖೆಯನ್ನು ನಿರ್ವಹಿಸುತ್ತಿರುವ ಮಂತ್ರಿಗಳಿಗೆ ಮತ್ತು ಬಂಗಾರಪ್ಪನವರಿಗೆ ಹೆಸರು ಬರುತ್ತದೆನ್ನುವ ಒಂದೇ ಕಾರಣಕ್ಕಾಗಿ ಹಣ ಕೊಡಲಿಲ್ಲ.

ಅಧ್ಯಕ್ಷರು : ನೋ ಕಾನ್‌ವರ್ಸೇಷನ್ ಪ್ಲೀಸ್. ಸಿಂಧ್ಯರವರೆ, ತಾವು ಬೇರೆಯವರಿಗೆ ಯೀಲ್ಡ್ ಆಗಬಾರದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಇನ್ನು ವಿಷಯಕ್ಕೆ ಬರುತ್ತೇನೆ. ನಾನು ಈ ಕುರಿತು ಒಂದು ಪೀಠಿಕೆ ಹಾಕಿದೆ ಅಷ್ಟೆ. ಏಕೆಂದರೆ, ಅವರ ಮನಸ್ಸನ್ನು ಪರಿವರ್ತಿಸುವುದು ನನಗೆ ಬಹಳ ಅವಶ್ಯಕವಾಗಿದೆ. ಸದನದಲ್ಲಿ ಕೆ.ಹೆಚ್. ರಂಗನಾಥ್, ಕಾಗೋಡು ತಿಮ್ಮಪ್ಪನವರೂ ಒಳಗೊಂಡಂತೆ ಸಚಿವ ಸಂಪುಟದ ಇನ್ನೂ ಅನೇಕ ಮಂತ್ರಿಗಳಿದ್ದಾರೆ. ಆರ್.ಬಿ. ತಿಮ್ಮಾಪ್ಪೂರ್ ರವರು ಒಳ್ಳೆಯ ಹೆಸರು ಪಡೆಯಬೇಕೆಂಬ ಕಾರಣದಿಂದ ಬಹಳ ಉತ್ಸಾಹದಿಂದ ದುಡಿಯುತ್ತಿರುವುದನ್ನು ನಾನು ಮೆಚ್ಚುತ್ತೇನೆ. ನೀವು ಒಳ್ಳೆಯ ಕೆಲಸಗಳನ್ನು ತೆಗೆದುಕೊಳ್ಳಬೇಕು. ಏಕೆಂದರೆ, 1965 ರಲ್ಲಿ ತಂದಂಥ ಈ ಕಾನೂನಿಗೆ 35 ವರ್ಷಗಳ ನಂತರ ನೀವು ತಿದ್ದುಪಡಿ ತರುತ್ತಿರಬೇಕಾದರೆ ಅದರಲ್ಲಿ ಎಂತಹ ಘನ ಉದ್ದೇಶ ಇರಬೇಕೆನ್ನುವುದು ಸಾರ್ವಜನಿಕರಿಗೆ ಗೊತ್ತಾಗಬೇಕಲ್ಲಾ, ಅದಕ್ಕೋಸ್ಕರ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ತಮ್ಮ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದೇನೆ. ತಾವು ದಯವಿಟ್ಟು ಯೋಚನೆ ಮಾಡಿ. ತಾವು ಎರಡು ತಪ್ಪುಗಳನ್ನು ಮಾಡುತ್ತಿದ್ದೀರಿ. ಮೊದಲನೆಯದು, ಮೂರನೇ ಎರಡು ಭಾಗದಷ್ಟು ಬಹುಮತವಿರುವುದನ್ನು ಸರಳ ಬಹುಮತವಾಗಿಸುವುದು; ಎರಡನೆಯದು, ವರ್ಷಕ್ಕೊಮ್ಮೆ ತರಬೇಕೆಂದಿದ್ದ ಅವಿಶ್ವಾಸ ಸೂಚನೆಯನ್ನು ಆರು ತಿಂಗಳಿಗೊಮ್ಮೆ ತರುವುದಾಗಿದೆ. ಇದಿಷ್ಟೇ ತಿದ್ದುಪಡಿ, ಇದು ಬಿಟ್ಟರೆ ಮತ್ತೇನೂ ಇಲ್ಲ. ಯಾವತ್ತೂ ಆಡಳಿತ ಪಕ್ಷಕ್ಕೆ ಅಜೀರ್ಣವಾಗುವಷ್ಟು ಬಹುಮತವಿರಬಾರದು. ಇದ್ದರೆ ಬಹಳ ತೊಂದರೆಯಾಗುತ್ತದೆ, ಸೊಕ್ಕು ಬರುತ್ತದೆ, ಗೌರವ ಬರುತ್ತದೆ, ಗರ್ವ ಬರುತ್ತದೆ. ಶ್ರೀಮಾನ್ ರಾಜೀವ್‌ಗಾಂಧಿಯವರು ಬದುಕಿದ್ದಂಥ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಿ ವೀರೇಂದ್ರ ಪಾಟೀಲರು ಆಗುತ್ತಾರೆಂದು ಹೇಳಿದ್ದರು. ಕಾಂಗ್ರೆಸ್‌ನ ಸಾಂಪ್ರದಾಯಿಕವಾಗಿರುವ ಮತದಾರರ ಜೊತೆಗೆ, ವೀರೇಂದ್ರ ಪಾಟೀಲರ ಅಭಿಮಾನಿಗಳೂ ಬೆಂಬಲವನ್ನು ಕೊಟ್ಟಂಥ ಸಂದರ್ಭದಲ್ಲಿ ಕಾಂಗ್ರೆಸ್‌ನ ಇತಿಹಾಸದಲ್ಲಿ ಎಂದೂ ಗಳಿಸದಿರುವಷ್ಟು ಬಹುಮತವನ್ನು ಅಂದರೆ 184 ಸೀಟುಗಳನ್ನು ಪಡೆದಿದ್ದರು. ದುರ್ದೈವದಿಂದ ವೀರೇಂದ್ರ ಪಾಟೀಲರಿಗೆ ಹೆಚ್ಚು ಕಮ್ಮಿಯಾಯಿತು. ಅದಾದ ಮೇಲೆ ಬಂಗಾರಪ್ಪನವರು ಬಂದರು ಒಳ್ಳೆಯ ಕೆಲಸ ಮಾಡುತ್ತಿದ್ದರು. ಆಗ ಏನಾಯಿತು? ಇಲ್ಲಿ ಬಂಗಾರಪ್ಪನವರ ವಿರುದ್ಧ ಧರಣಿಯಾಯಿತು. ಬಂಗಾರಪ್ಪನವರನ್ನು ತೆಗೆದರು, ಅನಂತರ ವೀರಪ್ಪಮೊಯ್ಲಿಯವರು ಬಂದರು. ಆಗ ತಮ್ಮ ಸರ್ಕಾರ ಯಾವ ಸ್ಥಿತಿಗೆ ಬಂತು? ಮೂರನೇ ಒಂದು ಭಾಗ ತಮ್ಮ ಸದಸ್ಯರು ಈ ವೆಲ್‌ನಲ್ಲಿ ಬಂದಿದ್ದರು. ಏಕೆಂದರೆ ಹೆಚ್ಚಾಗಿ ಬಹುಮತ ಬಂದು ಬಿಟ್ಟರೆ ಅಜೀರ್ಣವಾಗಿ ಬಿಡುತ್ತದೆ. ನನ್ನ ಅನುಭವದಲ್ಲಿ ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ತಾವು ಸ್ವಾಭಾವಿಕವಾಗಿ ಸಿ.ಎಲ್.ಪಿ. ಸಭೆಯಲ್ಲಿ ಚರ್ಚೆ ಮಾಡಿರುತ್ತೀರಿ. ಕಾಂಗ್ರೆಸ್

ಶಾಸಕಾಂಗ ಸಭೆಯಲ್ಲಿ, ಇವತ್ತು ಎ.ಪಿ.ಎಂ.ಸಿ. ನವರು ಬೇರೆಯುವರಿದ್ದಾರೆ, ನಮ್ಮದು ಮೆಜಾರಿಟಿಯಾಗಬೇಕು ಎಂಬ ಅವಸರದಲ್ಲಿ ಮೂರನೇ ಎರಡು ಭಾಗವಿರುವುದನ್ನು ಸಿಂಪಲ್ ಮಾಡೋಣ, ಆರು ತಿಂಗಳು ಇರುವುದನ್ನು ಮಾಡಿಕೊಂಡು ಬಿಡೋಣವೆಂದು ಹೊರಟಿದ್ದೀರಿ. ಇದರಿಂದ ಅಲ್ಲಿರುವ ಸದಸ್ಯರ ಕಣ್ಣು ಆ ನಾಲ್ಕುನೂರು ಕೋಟಿ ರೂಪಾಯಿಯ ಮೇಲೆ ಬೀಳುತ್ತದೆ. ಜಲಸಮೃದ್ಧಿಯಲ್ಲಿ ಎಲ್ಲರ ಕಣ್ಣು ವಿಶ್ವಬ್ಯಾಂಕ್‌ನಿಂದ ಬರುವ ಒಂದು ಸಾವಿರ ಕೋಟಿಯ ಮೇಲಿದೆ. ಹಾಗೆಯೇ ಇದೂ ಕೂಡ. ಕಾಂಗ್ರೆಸ್ ಎಂಬ ಶಬ್ದವನ್ನು ನಾನು ತಪ್ಪಾಗಿ ಉಪಯೋಗಿಸಿದ್ದರೆ ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಕಡ್ಲೇಕಾಯಿ ಬೀಜಕ್ಕೂ ಕಾಂಗ್ರೆಸ್ ಬೀಜವೆಂದು ಹೇಳುತ್ತಾರೆ. ಕಳೆಗೂ ಕಾಂಗ್ರೆಸ್ ಎಂದು ಹೇಳುತ್ತಾರೆ. ಆದ್ದರಿಂದ ತಾವು ಯಾರೂ ತಪ್ಪು ತಿಳಿದುಕೊಳ್ಳಬೇಡಿ. ಎ.ಪಿ.ಎಂ.ಸಿ.ಯನ್ನು ಕಾಂಗ್ರೆಸ್ಸೀಕರಣ ಮಾಡಲು ಹೊರಟಿದ್ದೀರಿ ಎಂದರೆ ತಮಗೇಕೆ ನೋವಾಗುತ್ತದೆ? ದಯವಿಟ್ಟು ಇದರ ಬಗ್ಗೆ ನೋವು ಮಾಡಿಕೊಳ್ಳಬೇಡಿ, ತಮ್ಮ ಮನಸ್ಸನ್ನು ನೋಯಿಸಬೇಕೆಂದು ನಾನು ಹೇಳಲಿಲ್ಲ. ಈ ತಿದ್ದುಪಡಿಯೇನಿದೆ ಇದು ತಮ್ಮ ಪಕ್ಷಕ್ಕೇ ಮಾರಕವಾಗುತ್ತದೆ. ಅಧಿಕಾರದಲ್ಲಿ ನಾವು ಶಾಶ್ವತವಾಗಿ ಇರತಕ್ಕವರಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದರಿಂದ ತೊಂದರೆಯಾಗುತ್ತದೆ. ತೊಂದರೆ ಮಾಡಬೇಕು ಎಂಬ ದೃಷ್ಟಿಯಿಂದ ಇದನ್ನು ತಂದದ್ದಲ್ಲ. ಎಲ್ಲಾ ಕಾನೂನುಗಳಲ್ಲಿ ಸಿಂಪಲ್ ಮೆಜಾರಿಟಿ ಎನ್ನತಕ್ಕದ್ದು ಇದೆ. ಯಾವ ಕಾನೂನಿನಲ್ಲೂ ಮೂರನೇ ಎರಡು ಭಾಗವೆಂದು ಇಲ್ಲ. ಇದನ್ನು ವಿಶೇಷವಾಗಿ ಎಸ್.ಎಸ್. ಪಾಟೀಲರು ಅನಂತರ ಹುಟ್ಟಿಸಿದ್ದು. ತಾವೇ ಚುನಾವಣೆ ಮಾಡಿದಿರಿ. ಅನಂತರ ತಾವೇ ತಿದ್ದುಪಡಿ ತಂದು ಅದನ್ನು ಭದ್ರ ಮಾಡಿಕೊಳ್ಳಲು ಪ್ರಯತ್ನ ಮಾಡಿದಿರಿ. ಕೆಲವು ಸಲ ನಾವು ಇದನ್ನು ದುರುಪಯೋಗ ಮಾಡಿಕೊಳ್ಳುತ್ತೇವೆ. ನಾವು ಈ ಸಲ ತಂದಿರುವುದರಲ್ಲಿ ಸಿಂಪಲ್ ಮೆಜಾರಿಟಿ ಇರಲಿ, ಕೆಲವು ಕಡೆ ಮೂರನೇ ಎರಡು ಭಾಗ ಮೆಜಾರಿಟಿ ಏನಿದೆ, ಫ್ಲಾಟ್ಸ್‌ಗಳನ್ನು ಮನಸ್ಸಿಗೆ ಬಂದಂತೆ ಹರಾಜು ಮಾಡುವುದು, ಅಲ್ಲಿ ನಮ್ಮ ಪಕ್ಷ ನಿಮ್ಮ ಪಕ್ಷವೆಂದು ಹೇಳುವುದಿಲ್ಲ, ಹತ್ತು ಜನ, ಹನ್ನೊಂದು ಜನ ಇದ್ದರೆ ಅದು ಯಾವುದೇ ಪಕ್ಷವಿರಲಿ ಮನಸ್ಸಿಗೆ ಬಂದಂತೆ ಹಂಚಿಕೊಳ್ಳುವುದು. ಅಂಗಡಿಗಳಿದ್ದರೆ ಆ ಮಾರ್ಕೆಟ್ ಯಾರ್ಡ್‌ನಲ್ಲಿ ಅವರುಗಳೇ ಹಂಚಿಕೊಳ್ಳುವುದು. ಇದರಿಂದಾಗಿ ಅವರುಗಳಿಗೆ ಭಯವೇ ಇಲ್ಲದಂತಾಗಿದೆ. ನಮಗೆ ಮೂರನೇ ಎರಡು ಭಾಗ ಮೆಜಾರಿಟಿ ಇದೆ, ನಮಗೆ ಯಾರು ತೆಗೆಯುತ್ತಾರೆಂದು ಅನೇಕ ಕಡೆಗಳಲ್ಲಿ ತಮಗೆ ಬೇಕಾದಂತೆ ನಡೆದುಕೊಂಡಿರುವುದನ್ನು ನಾವು ಕಣ್ಣಾರೆ ನೋಡಿದ್ದೇವೆ. ತಿದ್ದಿಕೊಳ್ಳಿ ಎಂದರೂ ಕೆಲವು ಸರಿಪಡಿಸಿಕೊಳ್ಳಲು ತಯಾರಿಲ್ಲ, ತಮ್ಮ ಪಕ್ಷದವರೇ ಇರಲಿ ತಿದ್ದಿಕೊಳ್ಳಿ ಎಂದು ನಿರ್ದೇಶನ ಕೊಟ್ಟು ಕೇಳಿ, ಅವರು ತಮ್ಮ ಮಾತನ್ನು ಕೇಳುತ್ತಾರೆಯೇ? ಮೊನ್ನೆ ಜೋಳವನ್ನು ಖರೀದಿ ಮಾಡಲು ಹಣವನ್ನು ಸಂಗ್ರಹ ಮಾಡಿ ಎಂದರೆ ಅದಕ್ಕೆ ಯಾರೂ ಸಹ ಸ್ಪಂದಿಸಲಿಲ್ಲ. ಇದು ಸಾರ್ವಜನಿಕರ ಕೆಲಸ, ನಮ್ಮ ಜವಾಬ್ದಾರಿ ಇದೆ, ಒಗ್ಗಟ್ಟಾಗಿ ಮಾಡಬೇಕು ಎನ್ನತಕ್ಕದ್ದು ಇಲ್ಲ. ವಿರೋಧ ಮಾಡಲು, ಹಂಚಿಕೊಳ್ಳಲು ಎಲ್ಲರೂ ಮುಂದಾಗುತ್ತಾರೆ, ಆದರೆ ಒಳ್ಳೆಯ ಕೆಲಸ ಮಾಡಲು ಯಾವಾಗಲೂ ಒಂದಾಗಿ ನಡೆದುಕೊಂಡಿಲ್ಲ. ಕನಿಷ್ಟ ಪಕ್ಷ ಒಂದು ಲೀಡರ್ ಇದ್ದರೆ, ಭಯವಿದ್ದರೆ ಹೆದರಿಕೊಂಡಾದರೂ ಕಾನೂನಿನ ಪ್ರಕಾರ ನಡೆದುಕೊಳ್ಳುತ್ತಾರೆ ಎನ್ನುವ

ದೃಷ್ಟಿಯಿಂದ ಇದನ್ನು ಸಜೆಸ್ಟ್ ಮಾಡಿದ್ದೇವೆಯೇ ಹೊರತು ಬೇರೆ ಯಾವ ದೃಷ್ಟಿಯಿಂದಲೂ ಅಲ್ಲ. ಆದರ ಮೇಲೆ ಕನಿಷ್ಠ ಪಕ್ಷ ಯಾವುದಾದರೂ ಜವಾಬ್ದಾರಿ, ಸದಸ್ಯರಿಗೆ ತಮ್ಮ ಕರ್ತವ್ಯದ ಅರಿವಾಗಬೇಕು ಎಂಬ ದೃಷ್ಟಿಯಿಂದ ಇದನ್ನು ತರಲಾಗಿದೆಯೇ ಹೊರತು ಬೇರೆ ಯಾವ ದುರುದ್ದೇಶದಿಂದಲೂ ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರನ್ನು ಅಭಿನಂದಿಸುತ್ತೇನೆ. ಇವರ ಮನಸ್ಸನ್ನು ಒಲಿಸಿಕೊಳ್ಳಬೇಕು ಎಂಬ ಉದ್ದೇಶದಿಂದಲೇ ನಾನು ಇದುವರೆಗೆ ಮಾತನಾಡಿದ್ದು. ಏಕೆಂದರೆ ತಮ್ಮ ಮನಸ್ಸು ಬದಲಾವಣೆಯಾಗುತ್ತದೆ. ಎ.ಪಿ.ಎಂ.ಸಿ. ಯಲ್ಲಿ ಸದಸ್ಯರು ಯಾರು ಈ ರೀತಿ ದುರಾಡಳಿತ ಮಾಡುತ್ತಾರೆ ಅವರಿಗೆ ಭಯ ಹುಟ್ಟಬೇಕು. ಆದರೆ ಅವರು ಹೇಳಿದ ರೀತಿ ನೋಡಿದರೆ, ಹೊಟ್ಟೆನೋವು ಇರುವವರಿಗೆ ಜ್ವರದ ಔಷಧಿಯನ್ನು ಕೊಡಲು ಹೊರಟಿರುವಂತಿದೆ. ತಾವು ಇದನ್ನು ಮಾಡುತ್ತಿರುವುದರಿಂದ ಅವರಲ್ಲಿ ಇನ್ನೂ ಭಯ ಕಡಿಮೆಯಾಗುತ್ತದೆ. ಅಲ್ಲಿ ಭ್ರಷ್ಟಾಚಾರ ಯಾವ ರೀತಿಯಲ್ಲಿ ಜಾಸ್ತಿಯಾಗುತ್ತದೆ ಎಂಬ ಬಗ್ಗೆ ಮಾನ್ಯ ಬಚ್ಚೇಗೌಡರು ಬಹಳ ಚೆನ್ನಾಗಿ ಹೇಳಿದರು. ಮೂರನೇ ಎರಡು ಭಾಗ ಮೆಜಾರಿಟಿ ಇರುವುದನ್ನು ಸಿಂಪಲ್ ಮೆಜಾರಿಟಿ ಎಂದು ಮಾಡಿದರೆ ಎಲ್ಲಾ ಸದಸ್ಯರನ್ನು ಒಬ್ಬರಿಗೊಬ್ಬರು ಹಿಡಿದುಕೊಳ್ಳಲು ಪ್ರಯತ್ನ ಮಾಡುತ್ತಾರೆ. ಆವರ್ತ ನಿಧಿಯು ಅವರಿಗೇ ಬರುತ್ತದೆ. ಪ್ರಕ್ಯೂರ್‌ಮೆಂಟ್ ಎಲ್ಲವನ್ನೂ ಪ್ರಿಸರ್ವ ಮಾಡುವುದು ಎಲ್ಲವೂ ಇವರದ್ದೇ ಆಗಿರುತ್ತದೆ. ತಾವು ವರ್ಷಕ್ಕೆ ಒಂದು ಸಲ ಇರುವ ಬಾಡಿ ಕಂಟಿನ್ಯೂಯೇಷನ್‌ನನ್ನು ಆರು ತಿಂಗಳಿಗೆ ಒಂದು ಸಲ ತರುತ್ತೇವೆಂದು ಹೇಳಿದರೆ ಇದು ವರ್‌ಸ್ಟೆಡ್ ಪಂಚಾಯಿತಿಯಾಗುತ್ತದೆ. ಆದ್ದರಿಂದ ತಾವು ಈ ಕಾನೂನನ್ನು ತರಲು ಹೋಗಬೇಡಿ. ತಾವೇನು ಬೋಧನೆ ಮಾಡುತ್ತಿದ್ದೀರಿ ಅದಕ್ಕೆ ವಿರುದ್ಧವಾಗಿ ಇದನ್ನು ತಂದಿದ್ದೀರಿ. ಇದರಿಂದ ಕೇವಲ ಕೆಲವರಿಗೆ ಉಪಯೋಗವಾಗುತ್ತದೆಯೇ ಹೊರತು ಸಾರ್ವಜನಿಕವಾಗಿ ಉಪಯೋಗವಾಗುವುದಿಲ್ಲ. ನಾವು ಇದನ್ನು ನಮ್ಮ ಪಕ್ಷದ ವತಿಯಿಂದ ತೀವ್ರವಾಗಿ ವಿರೋಧ ಮಾಡುತ್ತಿದ್ದೇವೆ.

\+ ಶ್ರೀ **ಗುಂಡಪ್ಪ ವಕೀಲ್ (ಔರಾದ್)** : ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ಇಲ್ಲಿ ಅಂಗೀಕಾರ ಮಾಡಿದ ಮೇಲೆ ತಮ್ಮ ಹಸ್ತಾಕ್ಷರ ಮಾಡಿದ ಮೇಲೆ ಜನವರಿ 24 ರಿಂದ ರೆಟ್ರಾಸ್‌ಪೆಕ್ಟೀವ್ ಆಗಿ ಜಾರಿಗೆ ಬರುತ್ತದೆ. ಆದರೆ ಇನ್ನೂ ಕೂಸೇ ಹುಟ್ಟಿಲ್ಲ. ನನ್ನ ಕ್ಷೇತ್ರದಲ್ಲಿ ನಾಮಕರಣವಾಗಿದೆ, ಔರಾದ್‌ನ ಎ.ಪಿ.ಎಂ.ಸಿ. ಯಲ್ಲಿ ಜನವರಿ 23ಕ್ಕೆ ಅವಿಶ್ವಾಸ ಗೊತ್ತುವಳಿಯ ಬಗ್ಗೆ ನೋಟೀಸ್ ಕೊಟ್ಟಿದ್ದಾರೆ. ಈ ವಿಧೇಯಕ ಜಾರಿಗೆ ಬರುವುದು 24ರ ಜನವರಿಗೆ. 23ರ ಜನವರಿಗೆ ಆ ರೀತಿ ನೋಟೀಸ್ ಕೊಟ್ಟಿದ್ದಾರೆ, ಮಾರ್ಚ್ 7ನೇ ತಾರೀಖಿಗೆ ಅವಿಶ್ವಾಸ ಗೊತ್ತುವಳಿ ಆಗಿಬಿಟ್ಟಿದೆ. ನನ್ನ ಕ್ಷೇತ್ರದಲ್ಲಿ ಎ.ಪಿ.ಎಂ.ಸಿ. ಯಲ್ಲಿ ಅಧ್ಯಕ್ಷರ್‍ಯಾರೂ ಇಲ್ಲ. ಇಲ್ಲಿ ಇನ್ನೂ ಚರ್ಚೆಯಾಗುತ್ತಿದೆ, ಮಂಡನೆಯಾಗಬೇಕು, ಅಂಗೀಕಾರವಾಗಬೇಕು ತಮ್ಮ ಹಸ್ತಾಕ್ಷರವಾಗಬೇಕು ಅನಂತರ ಮೇಲ್ಮನೆಗೆ ಹೋಗಬೇಕು ಇನ್ನು ಮುಂತಾಗಿ ಏನೇನೋ ಇದೆ. ಈ ರೀತಿ ಆಗಬಹುದೇ ಇದಕ್ಕಿಂತ ದೊಡ್ಡ ನಿದರ್ಶನ ಈ ಹೌಸ್‌ಗೆ ಬೇಕೆ? ಇದರ ಬಗ್ಗೆ ಮಾನ್ಯ ಸಚಿವರು ಸ್ವಲ್ಪ ಬೆಳಕು ಚೆಲ್ಲಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇದು ಜನವರಿ 24 ರಿಂದ ಜಾರಿಗೆ ಬರುತ್ತದೆಂದು ಬರೆದಿದ್ದಾರೆ, ಜನವರಿ 23ಕ್ಕೆ ನೋಟೀಸ್ ಕೊಡಬಹುದೇ ಎಂಬ ಬಗ್ಗೆ ನಾನು ಕೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅದನ್ನು ಶಾಸನ ಸಭೆಯಲ್ಲಿ ಮಂಜೂರು ಮಾಡಲು ತಂದಿದ್ದೇವೆ. ಅದಕ್ಕೆ ಅವಧಿ 31ಕ್ಕೆ ಮುಗಿದು ಹೋಗುತ್ತದೆ. ಆದ್ದರಿಂದ ಅದನ್ನು ತಂದಿದ್ದೇವೆ. ಇದು ಹಿಂದೆಯೇ ಜಾರಿಗೆ ಬಂದುಬಿಟ್ಟಿದೆ. ಇದನ್ನೇನೂ ಹೊಸದಾಗಿ ಮಾಡುತ್ತಿರುವುದಲ್ಲ.

ಶ್ರೀ ಗುಂಡಪ್ಪ ವಕೀಲ : ನಮ್ಮ ಎ.ಪಿ.ಎಂ.ಸಿ. ಯಲ್ಲಿ ಇದೇ ಆಧಾರವಾಗಿ ಇಟ್ಟುಕೊಂಡು 23ರ ಜನವರಿಗೆ ಅವಿಶ್ವಾಸ ನಿರ್ಣಯಕ್ಕೆ ನೋಟೀಸ್ ಕೊಟ್ಟಿದ್ದಾರೆ. ಆ ರೀತಿ 23 ರಂದು ನೋಟೀಸ್ ಕೊಡಬಹುದೇ?

ಶ್ರೀ ಡಿ.ಬಿ. ಚಂದ್ರೇಗೌಡ : ಈ ಶಾಸನ ಈಗಾಗಲೇ ಜಾರಿಯಲ್ಲಿದೆ.

ಶ್ರೀ ಆರ್.ಬಿ. ತಿಮ್ಮಾಪುರ : ಸನ್ಮಾನ್ಯ ಅಧ್ಯಕ್ಷರೇ, ಒಟ್ಟಾರೆಯಾಗಿ ಈ ಬಿಲ್ಲಿನ ಬಗ್ಗೆ ಹಿರಿಯ ನಾಯಕರುಗಳು ಹಲವಾರು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಹಿರಿಯ ನಾಯಕರಾದ ಸಿಂಧ್ಯಾರವರು, ಮಾನ್ಯ ಪಾಟೀಲ್‌ರವರು, ಸದಾನಂದಗೌಡರು ಮತ್ತು ಉಳಿದಂತಹ ಹಲವಾರು ಹಿರಿಯ ಸದಸ್ಯರು ಬಹಳ ಉಪಯುಕ್ತ ವಿಷಯಗಳ ಬಗ್ಗೆ ಇಲ್ಲಿ ಮಾತನಾಡಿದ್ದಾರೆ. ಒಟ್ಟು ರಾಜ್ಯದಲ್ಲಿ 141 ಎ.ಪಿ.ಎಂ.ಸಿ. ಗಳಿವೆ. ಅದರಲ್ಲಿ ಸ್ಥಾಪನೆ ಇನ್ನೂ ಹೊಸದಾಗಿ ಆಗಬೇಕಾದ 34, ಚುನಾವಣೆ ನಡೆದಂತಹ 112, ನಾಮ ನಿರ್ದೇಶನ ಮಾಡಲಾಗಿರುವ ಸಮಿತಿಗಳು 10, ಆಡಳಿತಾಧಿಕಾರಿಗಳನ್ನು ನೇಮಕಾತಿ ಮಾಡಿದಂತಹ 15, ಚುನಾವಣೆಯಿಂದ ವಿನಾಯಿತಿ ಪಡೆದಂತಹ 4 ಸೇರಿವೆ. ವಿಭಜನೆ ಮತ್ತು ಸಂಯೋಜನೆ ಮಾಡಿದಾಗ ಈ ನಾಮ ನಿರ್ದೇಶನ ಮಾಡತಕ್ಕಂಥ ಈ ಕಾಲಂನಲ್ಲಿ ಅವಕಾಶವೇನಿದೆ, ಅದರನ್ವಯ ನಾವು ಹೆಚ್ಚಿಗೆ ಎಂದರೆ 15 ಎ.ಪಿ.ಎಂ.ಸಿ. ಗಳಿಗೆ ನಾಮ ನಿರ್ದೇಶನಗಳನ್ನು ಮಾಡಿದ್ದೇವೆ. ಚುನಾವಣೆ ಮಾಡಲಿಕ್ಕೆ ಅವಕಾಶ ಸಿಗಲಾರದೇ ಯಾವ ಒಂದು ಎ.ಪಿ.ಎಂ.ಸಿ. ಸಮಿತಿಯನ್ನು ಬೈಫರ್‌ಕೇಟ್ ಮಾಡುತ್ತಿದ್ದೇವೆ, ಅದು ಇನ್ನೂ ಸದೃಢವಾಗಿ ಬೆಳೆದಿಲ್ಲವೆಂದರೆ ಅಲ್ಲಿ ಮತದಾರರ ಪಟ್ಟಿ ತಯಾರಾಗದೇ ಇದ್ದರೆ, ಆಡಳಿತಾಧಿಕಾರಿಗಳ ಬದಲು ನಾಮ ನಿರ್ದೇಶನದಿಂದ ಈ ಜನಪ್ರತಿನಿಧಿಗಳು ಇರಲಿ ಎಂಬ ಸದುದ್ದೇಶದಿಂದ ಇದನ್ನು ತಂದಿದ್ದೇವೆ. ಇನ್ನೂ ಒಂದು ವರ್ಷ ಮಾಡಲಿಕ್ಕೆ ಅವಕಾಶ ಇರುವ ತಿದ್ದುಪಡಿಯನ್ನು ನಾವೇನು ತಂದಿದ್ದೇವೆಯೋ ಅದರನ್ವಯ ನಾಮ ನಿರ್ದೇಶನ ಮಾಡಲೇಬೇಕಾಗದಂತಹ ಅವಶ್ಯಕತೆ ಇಲ್ಲ. ಚುನಾವಣೆಯನ್ನು ಮಾಡಲಾರದೆ ತೊಂದರೆಯಾದಾಗ, ಅದಕ್ಕೆ ಏನಾದರೂ ತೊಡಕು ಅಥವಾ ತೊಂದರೆಗಳು ಉಂಟಾದಾಗ ಮಾತ್ರ ಒಂದು ವರ್ಷ ಹೆಚ್ಚಿಗೆ ನಾಮ ನಿರ್ದೇಶನ ಮಾಡಬೇಕು ಎನ್ನುವಂತಹ ವಿಷಯವನ್ನು ನಾವು ಇಲ್ಲಿ ತಂದಿದ್ದೇವೆ. ನಾಮ ನಿರ್ದೇಶನ ಮಾಡಿದವುಗಳು ಒಟ್ಟು 15. ಅಲ್ಲಿ ಚುನಾವಣೆ ಮಾಡಲಿಕ್ಕೆ ಆಗಲಿಲ್ಲ. ಅದಕ್ಕೆ ಹಲವಾರು ಕಾರಣಗಳಿವೆ. ಸಾಮಾಜಿಕ, ಗಲಭೆ ಹಾಗೂ ಇನ್ನೂ ಇತರ ಕಾರಣಗಳಿಂದ ಚುನಾವಣೆಗಳು ಆಗಿಲ್ಲ. ಆರ್ಥಿಕ ದೃಷ್ಟಿಯಿಂದ ಒಮ್ಮೊಮ್ಮೆ ಸದೃಢವಾಗಿ ಬೆಳೆದಿರುವುದಿಲ್ಲ. ಯಾವುದೋ ಒಂದು ರಾಜಕೀಯದ ಒತ್ತಡದಿಂದ ಅಥವಾ ಮತ್ತೆ ಯಾವುದೋ ಒತ್ತಡದಿಂದ ಒಮ್ಮೊಮ್ಮೆ ಬೈಫರ್‌ಕೇಟ್ ಆಗಿ ಹೋಗುತ್ತವೆ. ಬೈಫರ್‌ಕೇಟ್ ಆದ ತಕ್ಷಣದಲ್ಲೇ ನಾವು ಚುನಾವಣೆಗೆ ತಯಾರಾಗಿ ಎಂದರೆ ಇನ್ನೂ 3-4 ಲಕ್ಷ ರೂ.ಗಳ ಅವರ ಉತ್ಪನ್ನ ಇರುತ್ತದೆ. ಅಂತಹ ಕಡೆ ಚುನಾವಣೆ ಮಾಡಿ ಏನು ಮಾಡುವುದಕ್ಕಾಗುತ್ತದೆ? ಅದಕ್ಕೆ ಹೆಚ್ಚಿನ ಸಮಯ

ಅಥವಾ ಕಾಲಾವಕಾಶ ಬೇಕು ಅನ್ನತಕ್ಕಂಥ ಸದಿಚ್ಛೆಯಿಂದ 10ನೇ ಪ್ರಕರಣಕ್ಕೆ ಒಂದು ವರ್ಷ ಹೆಚ್ಚಿಗೆ ನಾಮ ನಿರ್ದೇಶನ ಮಾಡತಕ್ಕಂಥ ಅವಕಾಶವನ್ನು ಕಲ್ಪಿಸಿದ್ದೇವೆ. ಇನ್ನು 44ನೇ ತಿದ್ದುಪಡಿಯ ಬಗ್ಗೆ ಹೇಳುವುದಾದರೆ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಬಹುಮತ ಇದ್ದವರು ಅಧಿಕಾರದಲ್ಲಿ ಇರಬೇಕು ಎಂದು ಇದೆ. ಆ ಬಹುಮತ ಕಳೆದುಕೊಂಡವರು ಅಧಿಕಾರದಲ್ಲಿ ಇರುವುದು ಸರಿಯಲ್ಲ. ಉದಾಹರಣೆಗೆ 16 ಜನ ಎ.ಪಿ.ಎಂ.ಸಿ. ನಿರ್ದೇಶಕರಿದ್ದರೆ, ಹಾಲಿ ಇರುವ ನಿಯಮಗಳ ಪ್ರಕಾರ ಮೂರನೇ ಎರಡರಷ್ಟು ಅಂದರೆ 12 ಜನ ವಿರೋಧ ಇದ್ದರೆ ಮಾತ್ರ ಆ ಎ.ಪಿ.ಎಂ.ಸಿ. ಅಧ್ಯಕ್ಷ ಅಧಿಕಾರದಿಂದ ಕೆಳಗಿಳಿಯುತ್ತಾನೆ. 11 ಜನ ವಿರೋಧ ಇದ್ದರೂ ಸಹ ಅವರು ಅಧಿಕಾರದಿಂದ ಇಳಿಯುವುದಿಲ್ಲ, ಅವರೇ ಅಧಿಕಾರದಲ್ಲಿ ಕಂಟಿನ್ಯೂ ಆಗುತ್ತಾರೆ. ಇದರಿಂದಾಗಿ ಅಭಿವೃದ್ಧಿ ಕೆಲಸಗಳು ಕುಂಠಿತವಾಗುತ್ತಿವೆ. ಯಾವ ಠರಾವುಗಳೂ ಕೂಡ ಪಾಸ್ ಆಗುವುದಿಲ್ಲ. ಇವರು ಮಾಡತಕ್ಕಂಥ ಕೆಲಸಗಳನ್ನೆಲ್ಲಾ ಅವರೆಲ್ಲಾ ವಿರೋಧ ಮಾಡಿ ಹೊರಗಡೆ ಹೋಗುತ್ತಾರೆ. ಠರಾವು ಪಾಸ್ ಆಗುವುದಿಲ್ಲ. ಇದರಿಂದ ಕೆಲಸಗಳು ಬಾಕಿ ಉಳಿಯುತ್ತವೆ. ಇಂತಹ ತೊಂದರೆಗಳನ್ನು ನಿವಾರಿಸಬೇಕಾಗುತ್ತದೆ. ಬಹಳ ಪ್ರಾಮುಖ್ಯವಾದ ಅಭಿವೃದ್ಧಿ ಕೆಲಸಗಳ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಎಲ್ಲಾ ನಿಯಮಗಳ ಅನುಸಾರ ವ್ಯವಸ್ಥಿತವಾಗಿ ನಡೆಯತಕ್ಕಂಥ ಇಂತಹ ಒಂದು ಸಂಸ್ಥೆಯಲ್ಲಿ ಯಾವ ಒಂದು ಬಹುಮತ ಇಲ್ಲದಂತಹ ವ್ಯಕ್ತಿ 1-2 ವರ್ಷ ಅಧಿಕಾರದಲ್ಲಿ ಕಂಟಿನ್ಯೂ ಆಗುವುದರ ಬದಲು ಯಾರು ಬಹುಮತವನ್ನು ಹೊಂದಿರುತ್ತಾರೋ ಅವರು ಅಧಿಕಾರದಲ್ಲಿ ಉಳಿಯಬೇಕೆಂಬ ಸದಿಚ್ಛೆ ಮೇರೆಗೆ 'ಸಿಂಪಲ್ ಮೆಜಾರಿಟಿ' ಅಧಿಕಾರದಿಂದ ಕೆಳಗಿಳಿಸಲು ಸಾಕು ಎಂದು ನಾವು ಮಾಡಿದ್ದೇವೆ. ಹಲವಾರು ಸಮಿತಿಗಳು ತೊಂದರೆಯಲ್ಲಿವೆ. ಕೆಲವು ಸಮಿತಿಗಳಲ್ಲಿ ಅಧ್ಯಕ್ಷರುಗಳು ಬೇಕಾಬಿಟ್ಟಿಯಾಗಿ ಕೆಲವೊಂದು ವಿಷಯಗಳಲ್ಲಿ ನಿರ್ಧಾರ ತೆಗೆದುಕೊಂಡಿದ್ದರಿಂದ ತೊಂದರೆಗೀಡಾದ ಎಷ್ಟೋ ಸಮಿತಿಗಳನ್ನು ನಾನು ಕಂಡಿದ್ದೇನೆ. ಉದಾಹರಣೆ ಹೇಳುವುದಾದರೆ, ಚಳ್ಳಕೆರೆ ಸಮಿತಿಯಲ್ಲಿ ಈ ರೀತಿ ಇದೆ. ಅಲ್ಲಿ ಏನೋ ಕೆಲವೊಂದು ಅವ್ಯವಹಾರಗಳು ನಡೆದು ಆ ಸಮಿತಿಯ ನಿರ್ದೇಶಕರುಗಳೆಲ್ಲರ ವಿರೋಧ ಇದ್ದರೂ ಕೂಡ ಸಮಿತಿಯ ಅಧ್ಯಕ್ಷರು ಎಷ್ಟೋ ನಿರ್ಧಾರಗಳನ್ನು ತೆಗೆದುಕೊಂಡಿರುವುದನ್ನು ನಾನು ಕಂಡಿದ್ದೇನೆ. ಇಂತಹ ಎಲ್ಲಾ ತೊಂದರೆ ಮತ್ತು ತೊಡಕುಗಳನ್ನು ಹೋಗಲಾಡಿಸುವ ಸಲುವಾಗಿ ಈ 'ಸಿಂಪಲ್ ಮೆಜಾರಿಟಿ' ತಿದ್ದುಪಡಿಯನ್ನು ತಂದಿದ್ದೇವೆ. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಪಾರ್ಲಿಮೆಂಟ್ ಮತ್ತು ವಿಧಾನಸಭೆಗಳಲ್ಲಿ ಇರತಕ್ಕಂಥ ವ್ಯವಸ್ಥೆಯೇ ಇಲ್ಲಿರುವುದು ಸೂಕ್ತ. ಮಾನ್ಯ ಸದಾನಂದಗೌಡರು ಸಮಿತಿಗಳಲ್ಲಿ ಅವರ ಪಕ್ಷದ ಸದಸ್ಯರು ಕಡಿಮೆ ಇದ್ದಾರೆಂದು ವಿರೋಧಿಸುತ್ತಿದ್ದಾರೆ ಎಂದೆನಿಸುತ್ತದೆ. ಅಧಿಕಾರಕ್ಕೆ ಬರಲಿಕ್ಕೆ ನಾಮ ನಿರ್ದೇಶನದ ವ್ಯಕ್ತಿಗಳಿಂದ ಮತ ಬೇಕು. ಅಧಿಕಾರದಿಂದ ಕೆಳಗಿಳಿಯಲಿಕ್ಕೆ ಬೇಡ ಎಂಬ ಮಾನ್ಯ ಎಸ್.ಎಸ್. ಪಾಟೀಲರ ವಾದಕ್ಕೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ತರಬೇಕೆನ್ನುವುದನ್ನು ನಾನು ಹೇಳಲಿಲ್ಲ. ಎರಡಕ್ಕೂ ಬೇಡ ಎಂದು ನಾನು ಹೇಳಿದ್ದೇನೆ.

ಶ್ರೀ ಆರ್.ಬಿ. ತಿಮ್ಮಾಪುರ : ಮೊದಲೇ ನೀವು ಅದನ್ನು ತಂದಿದ್ದೀರಲ್ಲಾ?

ಶ್ರೀ ಎಸ್.ಎಸ್. ಪಾಟೀಲ್ : ನಾವು ಮಾಡಿದ ತಪ್ಪನ್ನೇ ನೀವೂ ಮಾಡುತ್ತೀರೇನು? ನೀವು ತಪ್ಪು ಮಾಡಿದ್ದನ್ನೇ ಮತ್ತೆ ನಾವೂ ಕೂಡ ಮಾಡುತ್ತಿದ್ದೇವೆ ಎಂದು ಹೇಳಿಬಿಡಿ. ನಾವು ಮಾಡಿದ್ದು ತಪ್ಪೇ? ಅದು ತಪ್ಪಲ್ಲ ಎಂದು ನಾನೇನೂ ಹೇಳಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಹಿರಿಯರಿದ್ದೀರಿ. ತಾವು ಕಲಿಸಿದ ಪಾಠವನ್ನು ನಾವು ಕಲಿಯುವುದು ಬೇಡ ಎಂದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹಿಂದೆ ಆಗಿದ್ದನ್ನು ತೆಗೆದುಕೊಂಡು ಏನು ಮಾಡುತ್ತೀರಿ? ಇವತ್ತಿನ ಕಥೆ ಏನು ಎಂಬುದನ್ನು ಹೇಳಿ. ಈ ಬಿಲ್‌ನಲ್ಲಿ ನಾಮಿನೇಷನ್ ಮಾಡುವುದಕ್ಕೆ ಏನಾದರೂ ತಂದಿದ್ದೀರಾ?

ಶ್ರೀ ಆರ್.ಬಿ. ತಿಮ್ಮಾಪುರ : ಮಾನ್ಯ ಅಧ್ಯಕ್ಷರೇ, ಮೊದಲ ಬಾರಿಗೆ ಚುನಾವಣೆ ನಡೆದು ಇನ್ನು ಅಧ್ಯಕ್ಷರ ಚುನಾವಣೆ ಮಾಡತಕ್ಕಂಥ ವಿಷಯದಲ್ಲಿ ನಾಮ ನಿರ್ದೇಶಕರಿಗೆ ಮತದಾನ ಕೊಡತಕ್ಕಂಥ ವ್ಯವಸ್ಥೆಯಾಯಿತು. ಈಗ ಬಹುಶಃ ನಾವು ಅವಿಶ್ವಾಸ ಗೊತ್ತುವಳಿಯನ್ನು ಮಂಡನೆ ಮಾಡಿದ ನಂತರ, ಬಹುಶಃ ಆಗೇನು ನಾಮ ನಿರ್ದೇಶನದಿಂದ ಏನು ಅಧಿಕಾರಕ್ಕೆ ಬಂದಿದ್ದಾರೋ ಅವರು ಅಧಿಕಾರ ಕಳೆದುಕೊಳ್ಳಬಹುದೇ ವಿನಃ ಅಧಿಕಾರದಲ್ಲಿ ಬಹುಮತ ಇರುವವರಂತೂ ಅಧಿಕಾರ ಕಳೆದುಕೊಳ್ಳುವಂತಹ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಬಹುಶಃ ಮಾನ್ಯ ಪಾಟೀಲರಿಗೆ ನಾಮ ನಿರ್ದೇಶನದಿಂದ ಅಧಿಕಾರಕ್ಕೆ ಬಂದಂತಹ ಸಮಿತಿಗಳು ಹೋಗುತ್ತದೆ ಏನೋ ಎಂಬ ಭಾವನೆಯಿಂದ ಅವರು ಇದಕ್ಕೆ ವಿರೋಧ ಮಾಡುತ್ತಾರೋ ಏನೋ ಎಂಬ ಅನಿಸಿಕೆ ನನ್ನಗಾಗಿದೆ. ಮಾನ್ಯ ಸಹಾಸಂಬಂಧಿಗಳು ಪಕ್ಷ ಅಧಿಕಾರಕ್ಕೆ ಬಂದಾಗ ಅವರು ನಾಮ ನಿರ್ದೇಶನದ ಬಗ್ಗೆ ಏನು ಡಿಸಿಷನ್ ತೆಗೆದುಕೊಳ್ಳುತ್ತಾರೆ ಅಥವಾ ಇನ್ನೇನು ಮಾಡುತ್ತಾರೆ ಎಂಬ ಬಗ್ಗೆ ನಾವೆಲ್ಲರೂ ಕಾದು ನೋಡೋಣ. ನಾಮ ನಿರ್ದೇಶನ ಮಾಡಿದಂತಹ ವ್ಯಕ್ತಿಗಳು ಸರಿಯಾಗಿ ಕೆಲಸ ನಿರ್ವಹಿಸಿಲ್ಲ ಎನ್ನತಕ್ಕಂಥ ಮಾತಿಲ್ಲ. ಮೂರನೇ ಎರಡರಷ್ಟು ಬಹುಮತಕ್ಕಿಂತಲೂ ಯಾರಿಗೆ ಸಿಂಪಲ್ ಮೆಜಾರಿಟಿ ಇದೆಯೋ ಅವರು ಅಧಿಕಾರದಲ್ಲಿ ಇರಲಿ ಎಂಬ ಭಾವನೆಯನ್ನು ನಾನು ಇಲ್ಲಿ ವ್ಯಕ್ತಪಡಿಸಿ 44ನೇ ಪ್ರಕರಣಕ್ಕೆ ನಾವು ತಿದ್ದುಪಡಿ ತರತಕ್ಕಂಥ ಕೆಲಸವನ್ನು ಮಾಡಿದ್ದೇವೆ ಎಂದು ಹೇಳಬಯಸುತ್ತೇನೆ. ಇಲ್ಲಿ ಹಲವಾರು ವಿಷಯಗಳಿವೆ. ಎಷ್ಟೋ ವೇಳೆ ಠರಾವುಗಳು ಪಾಸ್ ಆಗದೆ, ಮೀಟಿಂಗ್ ಆಗದೆ 3-4 ತಿಂಗಳುಗಳಿಂದ ತಾಪತ್ರಯ ಪಡತಕ್ಕಂಥ ಎಷ್ಟೋ ಸಮಿತಿಗಳನ್ನು ನಾನು ಕಂಡಿದ್ದೇನೆ. 44ರ ತಿದ್ದುಪಡಿಯ ಜೊತೆಗೆ 63ಕ್ಕೆ 13 ಎಂದು ಒಂದು ಸೇರ್ಪಡೆ ಮಾಡಿದ್ದೇವೆ. ಯಾವ ರೈತ ಇವತ್ತು ಬೆಲೆ ಕುಸಿತದಿಂದಾಗಿ ತೊಂದರೆಯಲ್ಲಿರುತ್ತಾನೆ, ಅವನ ಸಹಾಯಕ್ಕೆ ಹೋಗುವಂತಹುದ್ದು ನಮ್ಮ ಕರ್ತವ್ಯ. ಆ ಕರ್ತವ್ಯದಲ್ಲಿ ಭಾಗಿಯಾಗಲಿಕ್ಕೆ ಎ.ಪಿ.ಎಂ.ಸಿ. ಸಮಿತಿಗಳು ಬರಬೇಕು ಎಂಬ ಸದಿಚ್ಛೆಯಿಂದ 63ಕ್ಕೆ ನಾವು ತಿದ್ದುಪಡಿಯನ್ನು ತಂದಿದ್ದೇವೆ. ಉದಾಹರಣೆಗೆ, ಗೋವಿನ ಜೋಳ ಖರೀದಿಯಲ್ಲಿ ನಾವು 126ರ ಕೆಳಗಡೆ ಅವರಿಗೆ ಒಂದು ನೋಟೀಸ್ ಕಳುಹಿಸಿ, ತಾವು ಆವರ್ತ ನಿಧಿಗೆ ಹಣ ಕೊಡಿ, ರೈತರ ಸಹಾಯಕ್ಕೆ ಹೋಗೋಣ ಎಂದು ಹೇಳಿದ್ದೇವೆ. ಆಗ ಅವರು ಹಣ ಕೊಡಲಾರದೆ ಇರುವುದರಿಂದ 63 ರಲ್ಲಿ ಅವಕಾಶ ಕಲ್ಪಿಸಿಕೊಳ್ಳುವಂತಹ ತಿದ್ದುಪಡಿಯನ್ನು ತರತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆ. 'ರೈತ ಸಂಜೀವಿನಿ' ಗೆ ಹೆಚ್ಚಿನ ಅರ್ಜಿಗಳು ಬರುತ್ತಿವೆ. ಅವುಗಳ ಅಗತ್ಯವನ್ನು ಪೂರೈಸುವುದಕ್ಕೋಸ್ಕರ

ನಿರ್ದೇಶಕರು ನಿಗದಿ ಮಾಡುತ್ತಾರೆ. ಯಾವ ಎ.ಪಿ.ಎಂ.ಸಿ. ಯಲ್ಲಿ ಎಷ್ಟು ಹಣ ಇದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಅವರು ದರವನ್ನು ನಿಗದಿ ಮಾಡುತ್ತಾರೆ. ಅದರಡಿಯಲ್ಲಿ ಹಣವನ್ನು ಆವರ್ತ ನಿಧಿಗೆ ತರತಕ್ಕಂಥ ವ್ಯವಸ್ಥೆ ಇದೆ. ಇಂತಹ ಒಂದು ಬಿಲ್ಲಿಗೆ ಸದನ ಅಂಗೀಕಾರ ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಸರಳ ಬಹುಮತ ಅಧಿಕಾರದಿಂದ ಕೆಳಗಿಳಿಸಲು ಸಾಕು ಎಂಬ ತಿದ್ದುಪಡಿಗೆ ನಾವು ಖಂಡಿತವಾಗಿಯೂ ಒಪ್ಪುತ್ತಿದ್ದೆವು. ಎಲ್ಲಿ ನಾಮಿನೇಟೆಡ್ ಮೆಂಬರ್‌ಗಳಿಗೆ ಓಟು ಇರುತ್ತಿರಲಿಲ್ಲವೋ ಅಲ್ಲಿ ಒಪ್ಪುವಂತಹ ವ್ಯವಸ್ಥೆ ಇತ್ತು. ವಿಧಾನಸಭೆ, ಲೋಕಸಭೆ ಅಥವಾ ಇತರ ಕಡೆಗಳಲ್ಲಿ ಎಲ್ಲಿ ಜನತಂತ್ರ ವ್ಯವಸ್ಥೆ ಇದೆಯೋ, ಎಲ್ಲಿ ಚುನಾಯಿತ ಪ್ರತಿನಿಧಿಗಳು ಮಾತ್ರ ಇದ್ದಾರೋ ಅಲ್ಲಿ ಸರಳ ಬಹುಮತಕ್ಕೆ ಆದ್ಯತೆ ಕೊಡಬೇಕು. ಎಲ್ಲಿ ಸರ್ಕಾರದಿಂದ ನಾಮ ನಿರ್ದೇಶಿತ ವ್ಯಕ್ತಿಗಳಿರುತ್ತಾರೋ ಅವರು ನೇರವಾಗಿ ಯಾರನ್ನು ಬೆಂಬಲ ಮಾಡುತ್ತಾರೆ ಎಂಬುದು ನಿಮಗೂ ಗೊತ್ತು ಮತ್ತು ನಮಗೂ ಗೊತ್ತು. ಆದರೆ ಅವರ ಮುಖಾಂತರ ಆ ವ್ಯವಸ್ಥೆಯನ್ನೇ ಅದಲು ಬದಲು ಮಾಡಲಿಕ್ಕೆ ಹೊರಟರೆ ಹೇಗೆ? ಸಹಕಾರಿ ರಂಗದಲ್ಲಿ ನಾನು ಈಗಾಗಲೇ ಪ್ರಸ್ತಾಪ ಮಾಡಿರುವಂತೆ ಬಾಕಿ ಸಹಕಾರಿ ಸಂಸ್ಥೆಗಳಲ್ಲಿ ಈ ರೀತಿ ಇಲ್ಲ ಏಕೆ? ಎ.ಪಿ.ಎಂ.ಸಿ. ಗೆ ಮಾತ್ರ ಇದನ್ನು ತಾವು ಆತುರಾತುರವಾಗಿ ಏಕೆ ತರುತ್ತಿದ್ದೀರಿ? ಎ.ಪಿ.ಎಂ.ಸಿ.ಗೆ ಮಾತ್ರ ಇದರ ಅವಶ್ಯಕತೆ ಏನಿದೆ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಿಮಗೆ ವಿಶ್ವಾಸವೇ ಇಲ್ಲ. ಎರಡು ವರ್ಷ ನೀವು ಆಡಳಿತ ಮಾಡಿದ ಮೇಲೆ ಮತ್ತೆ ಒಂದು ವರ್ಷದೊಳಗಾಗಿ ನೀವು ಚುನಾವಣೆ ಮಾಡಿದರೆ ಸಾಕು. ಅದೂ ನಿಮಗೆ ಸಾಕಾಗುವುದಿಲ್ಲವೇ? ನಾಲ್ಕು ವರ್ಷದವರೆಗೆ ಕೂಡ ಮತ್ತೆ ವಿಸ್ತರಣೆ ಮಾಡುವಂತಾದ್ದನ್ನು ಮಾಡುತ್ತಿದ್ದೀರಿ. ಒಟ್ಟಾರೆಯಾಗಿ ಹೇಗಾದರೂ ಸರಿ ನಿಮಗೆ ಅಧಿಕಾರ ಬೇಕು. ಹಿಂಬಾಗಿಲಿನ ಮೂಲಕವಾಗಬಹುದು. ಮುಂಬಾಗಿಲಿನ ಮೂಲಕ ಆಗಬಹುದು, ಕಿಟಕಿಯಿಂದ ತೂರಿಯಾದರೂ ಆಗಬಹುದು, ಏನಾದರೂ ಮಾಡಿ ಅಧಿಕಾರ ಮಾಡಬೇಕೆನ್ನುವ ಒಂದೇ ಲಾಲಸೆಯಿಂದ ನೀವು ಈ ಕೆಲಸಗಳನ್ನು ಮಾಡಿದ್ದೀರಿ. ಈಗಲಾದರೂ ತಾವು ಎಚ್ಚೆತ್ತುಕೊಳ್ಳಿ. ದಯವಿಟ್ಟು ಇದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ನಾನು ಮಂತ್ರಿಗಳಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ಯಾವಾಗಲೂ ಕೇಂದ್ರ ಸರ್ಕಾರದಲ್ಲಿ ನಿಮ್ಮ ಸರ್ಕಾರ ಮಾಡಿರುವುದೇ ನೆನಪು. ಕಿಟಕಿಯಲ್ಲಿ ಆದರೂ ಆಗಬಹುದು, ಬಾಗಿಲಲ್ಲಿ ಆದರೂ ಆಗಬಹುದು ಬೇರೆ ಯಾವ ರೀತಿಯಲ್ಲಾದರೂ ಆಗಬಹುದು, ಕೇಂದ್ರ ಸರ್ಕಾರದಲ್ಲಿ ನಿಮ್ಮ ಸರ್ಕಾರ ಮಾಡಿರುವುದೇ ನಿಮಗೆ ನೆನಪು. ನಾವು ಆ ತರಹ ಇಲ್ಲ. ಕೇಂದ್ರದಲ್ಲಿ 24 ಪಕ್ಷಗಳು ಸೇರಿ ಅಧಿಕಾರದಲ್ಲಿವೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಚಂದ್ರೇಗೌಡರೇ, ಚುನಾವಣೆ ನಡೆಯಲಿರುವ ಐದು ರಾಜ್ಯಗಳಲ್ಲಿ ಯಾವ ಒಂದು ರಾಜ್ಯದಲ್ಲಿ ನೀವು ನಿಮ್ಮ ಕಾಲ ಮೇಲೆ ನಿಲ್ಲುತ್ತಿದ್ದೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಕರ್ನಾಟಕದಲ್ಲಿ ನಾವು ನಿಂತಿದ್ದೇವೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಇದು ಪ್ರಜಾತಂತ್ರ ವಿರೋಧಿಯಾದ ತಿದ್ದುಪಡಿ. ಇದನ್ನು ಒಪ್ಪಲಿಕ್ಕೆ ತಯಾರಿಲ್ಲ. ಇದನ್ನು ಏಕೆ ಮಾಡಬೇಕು? ಇವರು ನಮ್ಮ ಬಗ್ಗೆ ಬಹಳ ಮಾತನಾಡುತ್ತಾರೆ. ಮೊನ್ನೆಯ ಎ.ಐ.ಸಿ.ಸಿ. ಅಧಿವೇಶನದಲ್ಲಿ ಸಮ್ಮಿಶ್ರ ಸರ್ಕಾರ ರಚಿಸಲು ನಾವು ಸಿದ್ಧ ಎಂಬ ನಿರ್ಣಯ ಮಾಡಿದ್ದಾರೆ.

ಅಧ್ಯಕ್ಷರು : ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಇದನ್ನು ನಾವು ವಿರೋಧ ಮಾಡುತ್ತೇವೆ....

(ಗೊಂದಲ)

5.20 ಪಿ.ಎಂ.

ಶ್ರೀ ಡಿ.ವಿ. ಸದಾನಂದಗೌಡ : ಈ ಹಠಮಾರಿತನ ಏನೆಂದರೆ, ಯಾವುದಾದರೂ ತರಹ ಕಾನೂನು ಮಾಡಬೇಕು. ಎಪಿಎಂಸಿ ಯಲ್ಲಿ ಮೂರು ಮೂರು ಜನರಿಗೆ ನಾಮಿನೇಷನ್ ಮಾಡಿದ್ದಾರೆ. ಅವರಿಗೆ ಬಹುಮತ ಸಿಗುತ್ತಿಲ್ಲ. ಅದಕ್ಕಾಗಿ ಅದರಲ್ಲಿ ಬಹುಮತ ಮಾಡಬೇಕೆಂದು ಅವರ ನಿಲುವು. ಇಡೀ ಸಹಕಾರಿ ತತ್ವಕ್ಕೆ ಪೂರಕವಾದ ವಿಚಾರ ಈ ಕೆಲಸವನ್ನು ನೀವು ಮಾಡಬಾರದು. ನೀವು ಹಿರಿಯರಿದ್ದೀರಿ. ನಾವು ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಉತ್ತಮ ಇತಿಹಾಸ ಇರುವವರು. ನಿಮ್ಮ ಈ ಪ್ರಯತ್ನಕ್ಕೆ ನಾವು ವಿರೋಧ ವ್ಯಕ್ತಪಡಿಸುತ್ತಾ ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ : ರಾಜಕೀಯ ಸ್ವಾರ್ಥಕ್ಕಾಗಿ ಈ ಬಿಲ್ ತರುತ್ತಿದ್ದಾರೆ.

(ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಿರಿಯ ಮುಖಂಡರಿದ್ದೀರಿ, ಇಂತಹ ವಿಚಾರಗಳಿಗೆ ಏಕೆ ಪ್ರಿಸ್ಟೀಜ್ ಮಾಡಿಕೊಳ್ಳುತ್ತೀರಿ? ಒಂದು ಕಡೆ ಸಂಘ ಸಂಸ್ಥೆಗಳಿಗೆ, ಇನ್‌ಸ್ಟಿಟ್ಯೂಷನ್‌ಗಳಿಗೆ ನಾವು ಸ್ಟೆಬಲೈಸ್ ಮಾಡಬೇಕು, ಆ ಬಿಲ್, ಈ ಬಿಲ್ ತರಬೇಕೆಂದು, ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕು, ವಿಕೇಂದ್ರೀಕರಣ ಮಾಡಬೇಕೆಂದು ಹೇಳುತ್ತೀರಿ. ಇನ್ನೊಂದು ಕಡೆ ಪ್ರಜಾ ಪ್ರಭುತ್ವದಲ್ಲಿ ಪೂರಕವಾದ ತಿದ್ದುಪಡಿಗಳನ್ನು ತೆಗೆದುಕೊಂಡು ಬರುತ್ತೀರಿ. ಇದನ್ನು ಮಾಡುವುದಕ್ಕೆ ಹೋಗಬೇಡಿ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಾನು ಅಲಿಗೇಷನ್ ಮಾಡಬೇಕಾಗುತ್ತದೆ. ಇವರಿಗೆ ದುರುದ್ದೇಶ ಇದೆ. ಆವರ್ತ ನಿಧಿ ಮೇಲೆ ಕಣ್ಣು ಇದೆ ಎಂದು ನಾನು ಹೇಳಬೇಕಾಗುತ್ತದೆ. ಸೊಸೈಟಿಗಳಿಗೆ ಕಾಂಗ್ರೆಸ್ಸೀಕರಣ ಮಾಡಿದರು, ಅದೇ ತರಹ ಎ.ಪಿ.ಎಂ.ಸಿ.ಗೆ ಸಹಿತ ಕಾಂಗ್ರೆಸ್ ಗವರ್ನಮೆಂಟ್ ಬರಬೇಕೆಂದು ಮಾಡುತ್ತಿದ್ದಾರೆ. ನಿಮ್ಮ ಮನಸ್ಸು ಒಲಿಸುವುದು ಇಷ್ಟು ಕಷ್ಟ, ಇನ್ನು ಕಠೋರ ಹೃದಯದ ಕಾಂಗ್ರೆಸ್ಸಿಗರ ಮನಸ್ಸು ಒಲಿಸುವುದು ಅಷ್ಟು ಸುಲಭವಲ್ಲ. ಕೆಳ ಹಂತದಲ್ಲಿ ಅವರ ಉದ್ದೇಶಗಳು ಬಹಳ ಕೆಟ್ಟದಾಗಿವೆ. ಗೌರವಾನ್ವಿತ

ಶಾಸಕರು ಇವರು ಹರಿದು ಹಂಚಿ ಹೋಗುತ್ತಾರೆ. ಆಶ್ರಯ ಸಮಿತಿಗಳು ಈಗಾಗಲೇ ನೀವು ತಂದಿದ್ದೀರಿ, ಬಗರ್ ಹುಕುಂ ಸಾಗುವಳಿಯಲ್ಲಿ ಏನೇನಾಗಿದೆ, ತಾವು ದಯವಿಟ್ಟು ಸಿ.ಎಲ್.ಪಿ. ಯಲ್ಲಿ ಇನ್ನೊಂದು ಸಾರಿ ಇದನ್ನು ಚರ್ಚೆ ಮಾಡಿ. ಮನೆಗಳು ವಿತರಣೆ ಮಾಡುವ ಸಂದರ್ಭದಲ್ಲಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿದ್ದೀರಿ. ಇದು ಮೊದಲನೇ ಬಾರಿಗೆ ಎತ್ತಿ ಹಿಡಿದಿರುವುದು. ಹೋದ ವರ್ಷ ಮನೆಗಳನ್ನು ಕೊಡುವುದಕ್ಕೆ ಕೆಟಗರೈಸ್ ಮಾಡಿದ್ದೀರಿ. ಮೈನಾರಿಟಿ ಕಮ್ಯೂನಿಟೀಸ್ ಮಾಡಿದ್ದೀರಿ. ಶ್ರೀಮಾನ್ ಎ.ಬಿ. ಪಾಟೀಲರು, ಉಮೇಶ್ ಕತ್ತಿಯವರೂ ಹೇಳಿದ್ದನ್ನು ಮಾಡಿದ್ದೀರಿ. ನಮ್ಮ ಖರ್ಗೆಯವರಿಗೆ, ರಂಗನಾಥ್‌ರವರಿಗೆ ಮತ್ತು ಕಾಗೋಡು ತಿಮ್ಮಪ್ಪನವರಿಗೆ ಮನಸ್ಸಿಲ್ಲ. ಸುಮ್ಮನೆ ಅವರು ತೆಗೆದುಕೊಂಡು ಬಂದು ತಾತ್ಕಾಲಿಕವಾಗಿ ಎ.ಪಿ.ಎಂ.ಸಿ. ಎಂದು ಮಾಡಿ ಅವರಿಗೆ ಬೇಕಾದವರಿಗೆ ಕೂರಿಸಬೇಕು. ಅವರೇ ನಿಮ್ಮ ಮೇಲೆ ಡಿಸಿಡೆಂಟ್ ಆಗುತ್ತಾರೆ. ಟಿಕೇಟ್ ತಪ್ಪಿಸುವುದಕ್ಕೆ ಅವರೇ ಪ್ರಯತ್ನ ಮಾಡುತ್ತಾರೆ. ಇದನ್ನು ಜ್ಞಾಪಕ ಇಟ್ಟುಕೊಳ್ಳಿ ಇದನ್ನು ಮತಕ್ಕೆ ಹಾಕಬೇಡಿ, ವಾಪಸ್ ತೆಗೆದುಕೊಳ್ಳಿ. ಯಾವ ಅಧಿಕಾರಿಯೂ ಇದನ್ನು ಒಪ್ಪುವುದಿಲ್ಲ. ಅಧಿಕಾರಿಗಳು ಏನು ಮಾಡುತ್ತಾರೆ. ಎಸ್.ಎಸ್. ಪಾಟೀಲರು ಮಾಡಿದ್ದು ನಾವು ಕೇಳಲಿಲ್ಲ. ಕೀರ್ತಿ ಶ್ರೇಷ್ಠರಾದ ಶ್ರೀಮಾನ್ ಜೆ.ಹೆಚ್. ಪಟೇಲರು ಅನೇಕ ಸಾರಿ ಈ ಮಾತು ಹೇಳಿದ್ದರು. 50 ರಿಂದ 19ಕ್ಕೆ ಬಂದಿಳಿಯಬೇಕಾದರೆ ಈ ನಾಮಿನೇಷನ್‌ಗಳೇ ಕಾರಣ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಬಹಳ ಉತ್ತಮವಾದ ಭಾಷಣ ಮಾಡಿದರು. ಸಿಂಧ್ಯರವರು ಹಿಂದೆ ಜೆ.ಹೆಚ್. ಪಟೇಲರ ಸಚಿವ ಸಂಪುಟದಲ್ಲಿ ಸಾರಿಗೆ ಸಚಿವರಾಗಿದ್ದರು. ಆಗ ಸಾರಿಗೆ ಸಚಿವ ಸ್ಥಾನದ ಜೊತೆ ಪ್ರತಿಯೊಂದು ವಿಭಾಗದಲ್ಲಿ ಅಧ್ಯಕ್ಷನಾಗಿ ಮಾಡಬೇಕೆಂದು ಆಯಿತು. ಅಧ್ಯಕ್ಷಗಿರಿ ಜೊತೆಗೆ ಮಂತ್ರಿಯೂ ಆಗಬೇಕು, ಇಲ್ಲದಿದ್ದರೆ ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದು ಎಲ್ಲಿ ಹೋಯಿತು? ಇವತ್ತು ಏನಾಯಿತು, ಆವತ್ತು ಇವರು ನಾನು ಸಚಿವ ಸ್ಥಾನದಲ್ಲಿದ್ದರೂ ನಾಲ್ಕು ಡಿವಿಷನ್ ಅಧ್ಯಕ್ಷ ನಾನಾಗಬೇಕು, ಇಲ್ಲದಿದ್ದರೆ ಉಪಾಧ್ಯಕ್ಷನಾಗಬೇಕು ಎಂದು ಹೇಳಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೂ ಜೆ.ಹೆಚ್. ಪಟೇಲರಿಗೂ ತಂದೆ ಮಗನ ಸಂಬಂಧ. ನಾವು ಜಗಳವಾಡಿದ್ದು ಇವರು ಹೇಗೆ ಕೇಳಿಸಿಕೊಂಡರೋ ಗೊತ್ತಿಲ್ಲ. ಇದನ್ನು ತಡೆಹಿಡಿಯಿರಿ, ಇದನ್ನು ಪಾಸ್ ಮಾಡಿಸುವುದು ಬೇಡ. ಇದು ಪಾಸ್ ಮಾಡಿಸಿಕೊಳ್ಳಲೇಬೇಕೆಂದು ಹಠ ಮಾಡುವುದಾದರೆ ನಾವು ಹೊರಗಡೆ ಇರುತ್ತೇವೆ ಪಾಸ್ ಮಾಡಿಸಿಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಜಾಪ್ರಭುತ್ವದ ತತ್ವದ ಮೇಲೆ ತಂದಿದ್ದು, ಸಂವಿಧಾನದಲ್ಲಿ ಏನು ಪ್ರಾವಿಷನ್ ಇದೆ ಅದನ್ನು ತಂದಿದ್ದೇವೆ, ಒಬ್ಬ ಮುಖ್ಯ ಮಂತ್ರಿಗೂ ಸಿಂಪಲ್ ಮೆಜಾರಿಟಿ, ಪ್ರಧಾನ ಮಂತ್ರಿಗಳಿಗೂ ಸಿಂಪಲ್ ಮೆಜಾರಿಟಿ, ಅನೇಕ ಸಂಘ ಸಂಸ್ಥೆಗಳಿಗೆ ಸಿಂಪಲ್ ಮೆಜಾರಿಟಿ ಇಲ್ಲಿ ಮಾತ್ರ ಮೂರನೇ ಎರಡರಷ್ಟು ಬೇಕು. ನಾಮಿನೇಟೆಡ್ ಮೂರನೇ ಎರಡು ಇರಬೇಕೆಂದು ಎಸ್.ಎಸ್. ಪಾಟೀಲರು ಮಾಡಿದರು ಅವರ ತಪ್ಪನ್ನು ಸರಿಪಡಿಸುತ್ತಿದ್ದೇವೆ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್.ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, "2001ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

> "2001ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 5 ರವರೆಗೆ

ಅಧ್ಯಕ್ಷರು : "ಖಂಡ 2 ಮತ್ತು 5 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 4 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

> "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, "2001ರ ಕರ್ನಾಟಕ ಕೃಷಿ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2001ರ ಕರ್ನಾಟಕ ಕೃಷಿ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(೯) ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2001 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕರ ಸಚಿವರು) : ಮಾನ್ಯ ಅಧ್ಯಕ್ಷರೆ, "2001ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2001ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ಇತ್ಯಾದಿ

ಅಧ್ಯಕ್ಷರು : "ಖಂಡ 2 ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)